ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 8 ಸಂಚಿಕೆ 40
ಅಕ್ಟೋಬರ್ 05, 2014

ಪುಟ 16 ರೂ. 10/-







'ಲವ್ ಜಿಹಾದ್' ಎಂಬುದು ನಿಜವೇ?






ಪಶ್ಚಿಮ ಬಂಗಾಳದಲ್ಲಿ ಏಳುತ್ತಿರುವ ಜನಚಳುವಳಿಗಳ ಅಲೆ

ಚೀನಾ ಅಧ್ಯಕ್ಷರ ಭಾರತ ಭೇಟಿ : ಪರಸ್ಪರ ಸಹಕಾರ ಹೆಚ್ಚಿಸಲಿ..

ಮಡೆ ಸ್ನಾನಕ್ಕೆ ತಡೆ.. ಆದರೆ...



ಭಗತ್ ಸಿಂಗ್ ಎಂಬ ಅಮರ ಕ್ರಾಂತಿಕಾರಿ..

ಪ್ರಧಾನಿಯವರ 'ಪ್ಯಾಕೇಜ್ ಭೇಟಿ'

ಶಂಕರರು ಭಾರತದ ಮೇಲೆ ಹೇರಿದ ವೈದಿಕವಲ್ಲದ ವೈದಿಕ ಧರ್ಮ ಮತ್ತು ಉಪನಿಷತ್ತುಗಳ ಒಳ ಅರ್ಥ

ಭಗವದ್ಗೀತೆ ಸೂರ್ಯನಷ್ಟೇ ಪ್ರಕಾಶಮಾನವಾದದ್ದು, ಸೂರ್ಯನನ್ನು ಪ್ರಶ್ನಿಸಲು ಸಾಧ್ಯವೇ? ಹಾಗೆಯೇ ಭಗವದ್ಗೀತೆಯನ್ನೂ ಪ್ರಶ್ನಿಸಲು ಸಾಧ್ಯವಿಲ್ಲ. ಹಾಗೆ ಪ್ರಶ್ನಿಸ ಬಯಸುವವರು ಭಾರತದಿಂದಲೇ ಹೊರಕ್ಕೆ ಹೋಗಲಿ. ಎನ್ನುವ ದರ್ಪದ, ಠೇಂಕಾರದ ಮಾತುಗಳು ಉದುರಿದ್ದು ಒಮ್ಮೆ ನಮ್ಮ ರಾಜ್ಯದ ಶಿಕ್ಷಣ ಮಂತ್ರಿಗಳಾಗಿದ್ದ ಕಾಗೇರಿಯವರ ಬಾಯೆಂಬ ಬಿಲದಿಂದ ಹೆಗ್ಗಣಗಳು ಹೊರಬರುವಂತೆ. ಆಗ ಅವರ ಆಜ್ಞೆಯಂತೆ ಶಾಲೆಗಳಲ್ಲಿ ನಡೆಸುತ್ತಿದ್ದ ಭಗವದ್ಗೀತಾ ಅಭಿಯಾನಕ್ಕೆ ವಿರೋಧ ಬಂದ ಸಂದರ್ಭದಲ್ಲಿ.

ಈಗ ಉಪನಿಷತ್ತುಗಳ ಬಗ್ಗೆ ಬರೆಯುತ್ತಾ ಇದ್ದಕ್ಕಿದ್ದಂತೆ ಈ ಮಾತುಗಳ ನೆನಪೇಕೆ ಎನ್ನಿಸುತ್ತಿರಬಹುದು ನಿಮಗೆ? ಹಿಂದಿನ ಸಂಚಿಕೆಯಲ್ಲಿ ನಾವು ವೈದಿಕ ಧರ್ಮವೆಂಬುದು ವೈದಿಕವಲ್ಲವೇ ಅಲ್ಲ ಮತ್ತು ಹಿಂದೂ ಧರ್ಮವೆಂಬುದು ವೇದಾಂತ ಮಾತ್ರ ಅಲ್ಲ. ಹಾಗೆ ಬಿಂಬಿಸಿದ್ದರಲ್ಲಿ ವಸಾಹತು ಶಾಹೀ ರಾಜಕೀಯ ಎಂದು ತಿಳಿದುಕೊಂಡೆವು. ಆದರೆ ಅದರ ಹಿಂದೆ ಇನ್ನೂ ಹೆಚ್ಚಿನ ರಾಜಕೀಯ ಇದೆ. ಧರ್ಮದ ವೇಷದಲ್ಲಿರುವ ರಾಜಕೀಯ. ಅದು ಒಂಬತ್ತ ನೆಯ ಶತಮಾನದಲ್ಲಿ ಜೀವಿಸಿದ್ದ ಶಂಕರರ ಪಾದದ ಬುಡಕ್ಕೇ ಹೋಗುತ್ತದೆ.



ಶಂಕರರು ಭಾರತದಲ್ಲಿ ಜನರನ್ನು ಸೆಳೆದಿದ್ದ ಬುದ್ಧ ಧರ್ಮವನ್ನು ನಾಶ ಪಡಿಸಲು ಪ್ರಯತ್ನಿಸಿದರು. ಅನೇಕ ಬೌದ್ಧ ವಿಹಾರಗಳನ್ನು ನಾಶಪಡಿಸಿದರು ಎಂಬ ಮಾತುಗಳನ್ನು ಕೇಳುತ್ತೇವೆ. ಹಿಂದೂ ಎಂಬ ಹೆಸರು ಪಡೆದುಕೊಳ್ಳದ ಧರ್ಮಗಳಿರಲಿ, ಹಿಂದೂ ಎಂಬ ಹೆಸರಿನೊಳಗೇ ಗುರುತಿಸಲ್ಪಡುವ ವಿವಿಧ ವೈಚಾರಿಕ ಪಂಥಗಳನ್ನೂ ಅಳಿಸಿ ವೇದಾಂತವೊಂದೇ ವಿಜೃಂಭಿಸಲು ಕೂಡ ಇನ್ನಿಲ್ಲದಂತೆ ಶ್ರಮಿಸಿದ್ದಾರೆ. ಅವರ ಇಡೀ ಜೀವನವೇ ಈ "ಮಹತ್ಕಾರ್ಯಕ್ಕೆ" ಮೀಸಲಾಗಿತ್ತು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ.

ಹಿಂದೂ ಧರ್ಮಕ್ಕೆ ಆಧಾರ ಗ್ರಂಥಗಳು ಎಂದು ಇಂದು ಪರಿಗಣಿಸಲಾಗುತ್ತಿರುವ ಗಂ್ರಥಗಳು ಮೂರು. ಅವಕ್ಕೆ ಪ್ರಸ್ಥಾನ ತ್ರಯವೆನ್ನುತ್ತಾರೆ. ಸೋಮನಾಥಾನಂದರ ಪ್ರಸಿದ್ಧ 'ಉಪನಿಷತ್ ಭಾವಧಾರೆ' ಎಂಬ ರಾಮಕೃಷ್ಣ ಆಶ್ರಮದ ಹೆಮ್ಮೆಯ ಪ್ರಕಟಣೆಗಳಲ್ಲಿ ಸ್ಥಾನ ಪಡೆದ ಗ್ರಂಥದಲ್ಲಿ ಹೀಗೆ ಹೇಳುತ್ತಾರೆ:

"ಪ್ರತಿಯೊಂದು ಧರ್ಮಕ್ಕೂ ಕೆಲವು ಪವಿತ್ರ ಗ್ರಂಥಗಳ ಆಧಾರವಿದೆ. ಕ್ರೈಸ್ತರಿಗೆ ಬೈಬಲ್, ಮಹಮ್ಮದೀಯರಿಗೆ ಖೋರಾನ್, ಬೌದ್ಧರಿಗೆ ಧಮ್ಮಪದ ಮುಂತಾದವು ಆಧಾರ. ಹಿಂದೂಗಳಲ್ಲಿ ಒಂದು ಧರ್ಮ ಗ್ರಂಥ ಅಥವಾ ಒಬ್ಬ ವ್ಯಕ್ತಿ ಅಲ್ಲ ಇರುವುದು. ಹಿಂದೂ ಧರ್ಮಕ್ಕೆ ಗ್ರಂಥಗಳ ದೃಷ್ಠಿಯಿಂದ ಪ್ರಸ್ಥಾನ ತ್ರಯಗಳು ಅತಿ ಮುಖ್ಯ.

"ಈ ಪ್ರಸ್ಥಾನ ತ್ರಯಗಳೇ ಉಪನಿಷತ್ತು, ಬ್ರಹ್ಮ ಸೂತ್ರ, ಮತ್ತು ಭಗವದ್ಗೀತೆ. ಇವುಗಳಲ್ಲಿ ಬ್ರಹ್ಮ ಸೂತ್ರ ಮತ್ತು ಭಗವದ್ಗೀತೆಗಳಿಗೆ ಆಧಾರವೇ ಉಪನಿಷತ್ತುಗಳು ಎನ್ನಬಹುದು. ಬ್ರಹ್ಮ ಸೂತ್ರದಲ್ಲಿ ಉಪನಿಷತ್ತಿನಲ್ಲಿ ಬರುವ ವಾಕ್ಯಗಳನ್ನೆಲ್ಲ ಆಯ್ದುದನ್ನು ಒಂದು ಮಾಲೆಯಂತೆ ಕಟ್ಟಿರುವರು. ಇಲ್ಲಿ ಉಪನಿಷತ್ತಿನಲ್ಲಿ ಇಲ್ಲದ ಬೆರೆ ಯಾವ ವಿಷಯವೂ ಇಲ್ಲ. ಎಲ್ಲಾ ಆಗಲೇ ಅಲ್ಲಿರುವುದನ್ನು ಇಲ್ಲಿ ಬೇರೊಂದು ಬಗೆಯಲ್ಲಿ ಅಂದವಾಗಿ ಜೋಡಿಸಿರುವರು. ಬ್ರಹ್ಮಸೂತ್ರ ಉಪನಿಷತ್ತಿನ ಮೇಲೇ ಜೀವಿಸುವ ಉಪ ಜೀವಿ ಎಂದು ಹೇಳಬಹುದು.

ಭಗವದ್ಗೀತೆಯಲ್ಲಿ ಬರುವ ವಿಷಯಗಳನ್ನೆಲ್ಲ ಶ್ರೀ ಕೃಷ್ಣನು ಉಪನಿಷತ್ತಿನಿಂದ ತೆಗೆದುಕೊಂಡು ಅದನ್ನು ಮತ್ತೂ ಸುಲಭ ಮಾಡಿ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಹೇಳುವನು. ಗೀತೆಯ ಧ್ಯಾನ ಶ್ಲೋಕದಲ್ಲಿ ಹೀಗಿದೆ. ಉಪನಿಷತ್ತುಗಳು ಗೋವುಗಳು. ಗೋಪಾಲ ನಂದನನು ಹಾಲು ಕರೆಯುವವನು. ಪಾರ್ಥನು ಕರು, ಮಹತ್ ಗೀತಾಮೃತವೇ ಹಾಲು. ಜ್ಞಾನಿಗಳು ಅದನ್ನು ಕುಡಿಯುವವರು.

(ಸರ್ವೋಪನಿಷದೋ ಗಾವೋ ದೋಗ್ದಾಗೋಪಲನಂದನಃ /
ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ //)

ಆದಕಾರಣ ಉಪನಿಷತ್ತೇ ಭಗವದ್ಗೀತೆಗೆ ಆಶ್ರಯ ಎನ್ನಬೇಕಾಗುವುದು. ಭಾರತೀಯ ತತ್ವಶಾಸ್ತ್ರಕ್ಕೆ ಪ್ರಸ್ಥಾನ ತ್ರಯಗಳೇ ಆಧಾರ ಎಂದರೂ, ಗೀತಾ, ಬ್ರಹ್ಮಸೂತ್ರಗಳು ನಿಂತಿರುವುದೇ ಉಪನಿಷತ್ತಿನ ಮೇಲೆ ಎಂದರೆ ಇದೇ ಮೂಲ ಆಧಾರಸ್ಥಂಭ ಎನ್ನಬೇಕಾಗುವುದು.


"ಸೋಮಾನಾಥಾನಂದರಂತಹ ಉಪನಿಷತ್ ಹಾಗೂ ಗೀತೆಗಳ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲವರಾಗಿದ್ದವರು ಹೇಳಿದ ಮಾತುಗಳಿವು.

ಒಟ್ಟಿನಲ್ಲಿ ಹಿಂದೂ ಧರ್ಮದ ಆ ಧಾರ ಗ್ರಂಥಗಳು ಪ್ರಸ್ಥಾನ ತ್ರಯವೆಂದು ಹೆಸರಾದ ಉಪನಿಷತ್ತುಗಳು, ಬ್ರಹ್ಮ ಸೂತ್ರ, ಮತ್ತು ಭಗವದ್ಗೀತೆ. ಇವುಗಳಲ್ಲಿ ವೇದಗಳು ಇಲ್ಲ, ಚತುರ್ವೇದಗಳಲ್ಲಿ ಯಾವೊಂದೂ ಇಲ್ಲ. ಇದನ್ನು ಗಮನಿಸಬೇಕು. ಬ್ರಾಹ್ಮಣಗಳೂ ಬರುವುದಿಲ್ಲ. ಆದರೂ ಹಿಂದೂ ಎಂದರೆ ವೈದಿಕ ಧರ್ಮ. ಬ್ರಾಹ್ಮಣರೇ ವೇದಾಧಿಕಾರವುಳ್ಳವರು ಎಂಬ ಹೆಸರಿನಲ್ಲಿ ಹಿಂದೂ ಧರ್ಮದ ವಾಖ್ಯಾನ ಮಾಡುವ ಅಧಿಕಾರ ಉಳ್ಳ ಏಕೈಕ ಪಂಗಡವಾಗಿದೆ. ಹೇಗಿದೆ ನೋಡಿ ಧರ್ಮದ ತಿರುಚುವಿಕೆ? ಈ ಗ್ರಂಥಗಳೇ ಹಿಂದೂ ಧರ್ಮದ ಆಧಾರವಾದ ಪ್ರಸ್ಥಾನ ತ್ರಯ ಎಂದು ತೀರ್ಮಾನಿಸಿದ್ದು ಯಾರು? ಯಾಕೆ? ಯಾವಾಗ?. ಇದು ಬಹಳ ಮುಖ್ಯ ಪ್ರಶ್ನೆ. ಇಂದು ಭಾರತೀಯರೆಂದರೆ ಯಾರು ಎಂಬುದನ್ನು ತೀರ್ಮಾನಿಸುವ ಪ್ರಶ್ನೆಯೆಂದು ಇಂದು ಅಧಿಕಾರ ಹೊಂದಿದವರು ಹೇಳುತ್ತಿದ್ದಾರೆ. ಕಾಗೇರಿಯಂತಹ ಆರೆಸ್ಸೆಸ್ ಮತ್ತು ಬಿಜೆಪಿಯುವರು ದೇಶದ್ರೋಹಿಗಳು ಯಾರು ಎಂದು ತೀರ್ಮಾನಿಸಲು ನಮಗೆ ಈ ಗ್ರಂಥಗಳ ಬಗೆಗಿನ ನಂಬಿಕೆಯೇ ಆಧಾರ ಎಂದು ವಾದಿಸುತ್ತಿರುವ ಪ್ರಶ್ನೆ.

ಶಂಕರರ ಬಗ್ಗೆ ವಿವೇಕಾನಂದರು

ಹಿಂದೂ ಧರ್ಮವನ್ನು ಏಕರೂಪಗೊಳಿಸಲು ಮತ್ತು ಅದಕ್ಕಾಗಿ ಭಾರತದಲ್ಲಿ ಅಂದು ಪ್ರಚಲಿತವಾಗಿದ್ದ ಭೌದ್ಧ, ಜೈನ ಧರ್ಮಗಳು ಮತ್ತು ಇತರ ರೂಪ, ತತ್ವಗಳನ್ನು ಆಳಕ್ಕೆ ತುಳಿಯಲು ಶಂಕರರೇ ಮುಖ್ಯ ಪಾತ್ರ ವಹಿಸಿದವರು ಎಂಬುದಕ್ಕೆ ಹಲವು ಆಧಾರಗಳಿವೆ. ಇಲ್ಲಿ ಸಿದ್ಧಾಂತದ, ತತ್ವದ ಮತ್ತು ಗ್ರಂಥಗಳ ಬಗೆಗಿನ ಸಂಗತಿಗಳನ್ನಷ್ಟೇ ಪರಿಗಣಿಸಲಾಗಿದೆ.

ನನಗೆ ಇದಕ್ಕೆ ಮೊದಲ ಮತ್ತು ಬಹು ಮುಖ್ಯ ಅಧಾರವನ್ನೊದಗಿಸಿದವರು ಸ್ವಾಮಿ ವಿವೇಕಾನಂದರು. ಭಗವದ್ಗೀತೆಯ ಬಗ್ಗೆ ವಿವೇಕಾನಂದರು ಏನು ಹೇಳುತ್ತಾರೆಂದು ಹುಡುಕುವಾಗ 1897 ರ ಸಮಯದಲ್ಲಿಯೇ ವಿವೇಕಾನಂದರ ಭಗವದ್ಗೀತೆಯ ಬಗ್ಗೆ ಬರೆದ ಬರಹವೊಂದು ಕಾಣಿಸಿತು. ಆಸಕ್ತಿಯಿಂದ ಓದಲಾರಂಭಿಸಿದರೆ ಲೇಖನದ ಮೊದಲಲ್ಲೇ ಅಂದು ದೇಶದಲ್ಲಿ ಭಗವದ್ಗೀತೆಯ ಬಗ್ಗೆ ಎದ್ದಿದ್ದ ಪ್ರಶ್ನೆಗಳನ್ನು ಪಟ್ಟಿ ಮಾಡುತ್ತಾರೆ ಮತ್ತು ಅವುಗಳ ಬಗ್ಗೆ ಹೀಗೆ ಹೇಳಿದ್ದಾರೆ. "ಗೀತೆಯ ಬಗ್ಗೆ ಹಲವು ಪ್ರಶ್ನೆಗಳಿವೆ. ಅವುಗಳನ್ನು ಎತ್ತಬೇಕು ಮತ್ತು ಸರಿಯಾದ ಉತ್ತರ ಪಡೆದುಕೊಳ್ಳಬೇಕು. ಏಕೆಂದರೆ ಸತ್ಯ ಎಲ್ಲಕ್ಕಿಂತಲೂ ಮುಖ್ಯ."



ಇನ್ನು ಗೀತೆಯ ಬಗ್ಗೆ ಅವರು ಪಟ್ಟಿ ಮಾಡಿ ಉತ್ತರಿಸಿದ ಮೊದಲ ಪ್ರಶ್ನೆ ಗೀತೆ ಮಹಾಭಾರತದ ಭಾಗವೇ? ಅಥವಾ ನಂತರ ಅದು ಮಹಾಭಾರತದೊಳಗೆ ಹೋಗಿಸಲ್ಪಟ್ಟಿತೇ?

ಈ ಪ್ರಶ್ನೆಗೆ ಉತ್ತರಿಸುವಾಗ ಅವರು ಹೇಳುತ್ತಾರೆ:

"ಶಂಕರಾಚಾರ್ಯರು ಗೀತೆಗೊಂದು ಭಾಷ್ಯವನ್ನು ಬರೆಯುವುದಕ್ಕೆ ಮೊದಲು ಸಾಮಾನ್ಯವಾಗಿ ಹೆಚ್ಚು ಜನರಿಗೆ ಗೀತೆಯ ಬಗ್ಗೆ ಗೊತ್ತಿರಲಿಲ್ಲ. ಕೆಲವರು ಶಂಕರಾಚಾರ್ಯರೇ ಅದರ ಕರ್ತೃ ಮತ್ತು ಅವರೇ ಅದನ್ನು ಮಹಾಭಾರತದ ಮೇಲೆ ಹೇರಿದವರು ಎನ್ನುತ್ತಾರೆ."

ಇದರಲ್ಲಿ ಭಗವದ್ಗೀತೆಯನ್ನು ಬರೆದವರೇ ಶಂಕರಾಚಾರ್ಯರು ಎಂಬ ಸಂದೇಹ ಇತ್ತು ಎಂಬುದು ಒಂದು ವಿಷಯ. ಅದು ಶೋಧದ ಮೂಲಕ ಖಚಿತಪಡಿಸಿಕೊಳ್ಳಬೇಕಾದ ವಿಷಯ. ಆದರೆ ವಿವೇಕಾನಂದರು ಒಂದು ವಿಷಯವನ್ನು ಸಂದೇಹಕ್ಕೆಡೆಯಿಲ್ಲದೆ ನಿರೂಪಿಸುತ್ತಾರೆ. ಅದೆಂದರೆ ಗೀತೆಗೆ ಶಂಕರರು ಭಾಷ್ಯ ಬರೆದ ನಂತರವೇ ಅದು ಪ್ರಚಾರಕ್ಕೆ ಬಂದದ್ದು. ಅದಕ್ಕೆ ಮೊದಲು ಅದರ ಬಗ್ಗೆ ಹೆಚ್ಚು ಜನರಿಗೆ ಗೊತ್ತಿರಲಿಲ್ಲ ಎಂದು. ಭಾರತದಲ್ಲಿ ಬಹಳ ಕಾಲ ಹೆಚ್ಚು ಜನಕ್ಕೆ ಗೊತ್ತಿಲ್ಲದ ಈ ಭಗವಾನ್ ಉವಾಚ ಹಿಂದೂ ಧರ್ಮಕ್ಕೆ ಬೈಬಲಿನಂತೆ ಆಧಾರಪೂರ್ವಕ ಗ್ರಂಥವಾದದ್ದು ಹೇಗೆ?

ಇನ್ನು ಪ್ರಸ್ಥಾನ ತ್ರಯಗಳಲ್ಲಿ ಎಲ್ಲಕ್ಕೂ ಆಧಾರವಾದ, ಆ ಮೂಲಕ ಹಿಂದೂ ಧರ್ಮಕ್ಕೇ ಮೂಲಭೂತ ಆಧಾರವಾದ ಉಪನಿಷತ್ತುಗಳ ವಿಷಯಕ್ಕೆ ಬರೋಣ. ಅವುಗಳನ್ನು ಪ್ರಚುರ ಪಡಿಸಿದ್ದು ಯಾರು ಎಂಬ ವಿಷಯ ನೋಡೋಣ.

ಸ್ವಾಮಿ ರಂಗನಾಥಾನಂದರು ಮತ್ತೊಂದು ಬಹಳ ಪ್ರಸಿದ್ಧ ಹೆಸರು. ರಾಮಕೃಷ್ಣ ಆಶ್ರಮದ ಮಹಾಯತಿಗಳಲ್ಲೊಬ್ಬರು ಎಂದು ಹೆಸರಾದವರು. ಇವರು ದೇಶದ ಹಲವೆಡೆಗಳಲ್ಲಿ ಮತ್ತು ವಿದೇಶಗಳಲ್ಲಿ ಹಲವು ಕಡೆ ಉಪನಿಷತ್ತುಗಳ ಬಗ್ಗೆ ನೀಡಿದ ಉಪನ್ಯಾಸಗಳು ಭಾರತ ವಿದ್ಯಾ ಭವನದ ಮೂಲಕ ಮೊದಲು ಪ್ರಕಟವಾಯಿತು. ಅದನ್ನು ಮೈಸೂರು ವಿಶ್ವ ವಿದ್ಯಾಲಯದ ಪ್ರಸರಾಂಗ ಕನ್ನಡಿಸಿ ಪ್ರಕಟಿಸಿತು. ಅದರಲ್ಲಿ ಅವರು ಉಪನಿಷತ್ತುಗಳು ಮತ್ತು ಭಗವದ್ಗೀತೆ ಎರಡೂ ಪ್ರಚಾರಕ್ಕೆ ಬಂದುದರ ಬಗ್ಗೆ ಹೀಗೆ ಹೇಳಿದ್ದಾರೆ:

"ಈ ಅಮರ ಸಾಹಿತ್ಯವನ್ನು ಕತ್ತಲಿನಿಂದ ಬೆಳಕಿಗೆ ತಂದ ಶಾಶ್ವತ ಕೀರ್ತಿ ಶಂಕರಾಚಾರ್ಯರಿಗೆ ಸಲ್ಲುತ್ತದೆ. ಅವರು ಹಾಗೆ ಮಾಡಿದ್ದು ಮುಖ್ಯ ಉಪನಿಷತ್ತುಗಳ ಮೇಲೆ ತಾವು ರಚಿಸಿದ ಪ್ರತಿಭಾಪೂರ್ಣ ಉಪನ್ಯಾಸಗಳಿಂದ. ಅವರು ಹಾಗೆಯೇ ಭಗವದ್ಗೀತೆಯನ್ನೂ ಬೆಳಕಿಗೆ ತಂದರು. ಇನ್ನೂ ಹೆಚ್ಚು ವಿಶಾಲವಾದ ವಾಚಕ ವೃಂದಕ್ಕೆ ಅವು ದೊರಕುವಂತೆ, ಅರ್ಥವಾಗುವಂತೆ ಮಾಡಿದರು. ಆನಂತರದ ಭಾಷ್ಯಕಾರರು, ಚಿಂತಕರು, ಸಂತರು ಆ ವಾಚಕ ವೃಂದ ಒಂದೇ ಸಮನಾಗಿ ಹೆಚ್ಚುತ್ತಾ ಹೋಗುವಂತೆ ಮಾಡಿದರು. ಈ ಯುಗದಲ್ಲಾದರೋ ಆಧುನಿಕ ಪಾಶ್ಚಾತ್ಯ ನಾಗರಿಕತೆಯ ಸಾಧನಗಳ ಕೃಪೆಯಿಂದಾಗಿ ಇಡೀ ವಿಶ್ವವೇ ವಾಸ್ತವವಾಗಿ ಅದರ ಶ್ರೋತೃ ವೃಂದವಾಗಿದೆ.

--"ಈ ಉಪನಿಷತ್ತುಗಳ ಮೇಲೆ, ಅದರಲ್ಲೂ

ಪುಟ 15 ಕ್ಕೆ

ನಾಸ್ತಿಕರೆಂದರೆ ಯಾರು? ದಸರಾ ಉದ್ಘಾಟನೆಯನ್ನು ಅವರು ಮಾಡಬಾರದೇ?

ಚೋಮನ ದುಡಿಯ ಓದುಗರಿಗೆ ಪರಿಚಿತವಾದ ವಿಷಯವೊಂದು ಇಂದು ದಸರಾ ಉತ್ಸವದ ಉದ್ಘಾಟನೆಯ ಸಂದರ್ಭದಲ್ಲಿ ಸಾರ್ವಜನಿಕ ಚರ್ಚೆಗೆ ಒಳಗಾಗಿದೆ. ನಾಸ್ತಿಕರೆಂದರೆ ಯಾರು? ಮತ್ತು ವೇದ ಪಾರಮ್ಯಕ್ಕೂ ಜಾತಿ ವ್ಯವಸ್ಥೆಗೂ ಇರುವ ಸಂಬಂಧ. ಜ್ಞಾನ ಪೀಠ ಪ್ರಶಸ್ತಿ ವಿಜೇತ ಸಾಹಿತಿ ಗಿರೀಶ್ ಕಾರ್ನಾಡರನ್ನು ದಸರಾ ಉತ್ಸವದ ಉದ್ಘಾಟನೆಗೆ ಆಹ್ವಾನಿಸಿದ ಕೂಡಲೇ ಅದನ್ನು ವಿರೋಧಿಸಿದವರು ನೀಡಿದ ಒಂದು ಮುಖ್ಯ ಕಾರಣ ನಾಸ್ತಿಕರು ದಸರಾ ಉತ್ಸವದ ಉದ್ಘಾಟನೆ ಮಾಡಬಾರದು ಎಂಬುದು. ಅದರೊಂದಿಗೇ ಗಿರೀಶ್ ಕಾರ್ನಾಡ್ ನಾಸ್ತಿಕರೇ, ನಾಸ್ತಿಕರೆಂದರೆ ಯಾರು ಎಂಬ ಪ್ರಶ್ನೆ ಎದ್ದಿತು. ಅವರು ಉತ್ಸವವನ್ನು ಉದ್ಘಾಟನೆ ಮಾಡುವಾಗ ಬಿಜೆಪಿ ಮತ್ತು ಇತರ ಹಿಂದೂ ಪರ ಸಂಘಟನೆಗಳು ಪ್ರತಿಭಟನೆ ನಡೆಸಿದರೆ ಗಿರೀಶ ಕಾರ್ನಾಡರು ನಾಸ್ತಿಕ ಎಂಬುದಕ್ಕೆ ಭಾರತದಲ್ಲಿ ಸಾವಿರಾರು ವರ್ಷಗಳಿಂದ ಬಳಕೆಯಲ್ಲಿದ್ದ ವಿವರಣೆ ನೀಡಿದರು ಮತ್ತು ತಮ್ಮ ನಿಲುವನ್ನೂ ಸ್ಪಷ್ಟ ಪಡಿಸಿದರು. ಅದರಲ್ಲಿ ಮುಖ್ಯವಾಗಿ ವೇದಗಳನ್ನು ಒಪ್ಪುತ್ತಾರೋ ಇಲ್ಲವೋ, ಚಾತುರ್ವರ್ಣ್ಯವನ್ನು ಒಪ್ಪುತ್ತಾರೋ ಇಲ್ಲವೋ ಎಂಬುದು ಅದರ ವಿವರಣೆಯಾದರೆ ನಾನು ನಾಸ್ತಿಕ ಎಂದರು. ಅಲ್ಲದೆ ಭಾರತಕ್ಕೆ ಕರ್ನಾಟಕದ ಸಾಹಿತ್ಯಕ್ಕೆ ಹೆಮ್ಮೆಯ ಕೊಡುಗೆಗಳನ್ನು ನೀಡಿದ ಬೌದ್ಧ, ಜೈನ ಮೊದಲಾದ ಅನೇಕ ಧರ್ಮಗಳು ನಾಸ್ತಿಕ ಧರ್ಮಗಳು ಅವುಗಳನ್ನು ಹೊರಗಿಟ್ಟರೆ ಸಂಸ್ಕೃತಿಯೇ ಬರಡು ಎಂಬ ಸತ್ಯವನ್ನು ಬಿಚ್ಚಿಟ್ಟಿದ್ದಾರೆ. ಅದಕ್ಕೂ ಹೆಚ್ಚು ಲೋಕಾಯತ ಅಥವಾ ಚಾರ್ವಾಕರು ಮಹಾಭಾರತ ಯುದ್ಧದ ನಂತರ ಯುದ್ಧದ ಪ್ರಾಣಹಾನಿಯ ಬಗ್ಗೆ ಧರ್ಮರಾಯನಿಗೆ ಹಾಕಿದ ಪ್ರಶ್ನೆಯನ್ನು ಮತ್ತೆ ಜನರ ಮುಂದಿಟ್ಟರು. ಕೊನೆಗೆ ಜನರಲ್ಲಿ ಒಂದುಗೂಡಿದವರಾದ, ಜನರಲ್ಲಿ ಜೀವಂತವಾಗಿರುವವರು ಎಂದು ಹೆಸರಾದ ಲೋಕಾಯತರು ಹೆಚ್ಚಲಿ ಎಂದು ಬಯಸಿದರು. ಇದು ಒಂದು ಒಳ್ಳೆಯ ಚರ್ಚೆಯನ್ನು ಹುಟ್ಟುಹಾಕಿತು. ●

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಾರಸ್ವಾದಕ್ಕಿಯು



ಮಡೆ ಸ್ನಾನಕ್ಕೆ ತಡೆ, ಎಡೆಸ್ನಾನಕ್ಕೆ ಮಣೆ..!

▌ನಿತ್ಯಾನಂದಸ್ವಾಮಿ

ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಮಣ್ಯ ದೇವಸ್ಥಾನದಲ್ಲಿ ಆಚರಣೆಯಲ್ಲಿರುವ ಮಡೆಸ್ನಾನವನ್ನು ನಿಷೇಧಿಸಿರುವ ಹೈಕೋರ್ಟ್ ತೀರ್ಪಿಗೆ ಈ ಹಿಂದೆ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ತೆರವುಗೊಳಿಸಿ ಹೈಕೋರ್ಟ್ ಆದೇಶವನ್ನು ಎತ್ತಿಹಿಡಿದಿದೆ ಎನ್ನಲಾಗಿದೆ. ಸುಪ್ರೀಂ ಕೋರ್ಟ್‌ನ ಈ ಕ್ರಮದಿಂದಾಗಿ ಕುಕ್ಕೆ ಸುಬ್ರಮಣ್ಯದಲ್ಲಿ ಮಡೆಸ್ನಾನದ ಬದಲಿಗೆ ಎಡೆಸ್ನಾನಕ್ಕೆ ಅನುವು ಮಾಡಿಕೊಟ್ಟಂತಾಗಲಿದೆ.

ಬ್ರಾಹ್ಮಣರು ಉಂಡ ಎಲೆಯ ಮೇಲೆ ಉರುಳಾಡಿ ಕುಮಾರಧಾರ ನದಿಯಲ್ಲಿ ಮಿಂದರೆ ಸಕಲ ರೋಗಗಳು ವಾಸಿಯಾಗುತ್ತವೆ ಎನ್ನುವುದು ನಂಬಿಕೆಯಾಗಿತ್ತು. ಇದೊಂದು ಮೂಢ ನಂಬಿಕೆ. ಈ ಆಚರಣೆ ಅಮಾನವೀಯ ಜಾತಿ ಪದ್ಧತಿಯನ್ನು ಬಲ ಪಡಿಸುತ್ತದೆ. ಆದ್ದರಿಂದ ಇದನ್ನು ನಿಷೇಧಿಸಬೇಕೆಂದು ರಾಜ್ಯದ ಪ್ರಗತಿಪರ ಸಂಘಟನೆಗಳು ಒತ್ತಾಯಿಸಿದ್ದವು. ರಾಜಕೀಯ ಪಕ್ಷಗಳಲ್ಲಿ ಸಿಪಿಐ(ಎಂ) ಮಾತ್ರ ಕುಕ್ಕೆ ಸುಬ್ರಮಣ್ಯದ ಮಡೆಸ್ನಾನವನ್ನು ಮತ್ತು ಉಡುಪಿ ಕೃಷ್ಣಮಠವೂ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಆಚರಣೆಯಲ್ಲಿರುವ ಪಂಕ್ತಿ ಬೇಧ ಪದ್ಧತಿಯನ್ನು ನಿಷೇಧಿಸುವಂತೆ ಒತ್ತಾಯಿಸಿತ್ತು.

ಕರ್ನಾಟಕ ಸರ್ಕಾರ 2010ರಲ್ಲಿ ಮಡೆಸ್ನಾನವನ್ನು ನಿಷೇಧಿಸಿತ್ತು. ಆದರೆ ಈ ನಿಷೇಧವನ್ನು ರಾಜ್ಯ ಹೈಕೋರ್ಟ್‌ನಲ್ಲಿ ರಾಜ್ಯ ಆದಿವಾಸಿ ಬುಡಕಟ್ಟು ಹಿತರಕ್ಷಣಾ ವೇದಿಕೆ ಪ್ರಶ್ನಿಸಿತ್ತು. ಈ ಹಿನ್ನೆಲೆಯಲ್ಲಿ ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್ ಮಡೆಸ್ನಾನವನ್ನು ನಿಷೇಧಿಸಿದ ರಾಜ್ಯ ಸರ್ಕಾರದ ಕ್ರಮವನ್ನು ಎತ್ತಿ ಹಿಡಿದು ರಾಜ್ಯ ಸರ್ಕಾರದ ಸೂಚನೆಯಂತೆ ಮಡೆಸ್ನಾನದ ಬದಲು ದೇವರಿಗೆ ಅರ್ಪಿಸಿದ ನೈವೇದ್ಯದ ಮೇಲೆ ಉರುಳಾಡುವ ಎಡೆಸ್ನಾನಕ್ಕೆ ಅನುವು ಮಾಡಿಕೊಟ್ಟಿತ್ತು. ಆದರೆ ಆಚರಣೆಯಲ್ಲಿ ಪಾಲ್ಗೊಳ್ಳುವಂತೆ ಯಾರನ್ನೂ ಒತ್ತಾಯಿಸುವಂತಿಲ್ಲ ಎಂದು ಹೈಕೊರ್ಟ್ ತನ್ನ ಆದೇಶದಲ್ಲಿ ಹೇಳಿತ್ತು.


ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಆದಿವಾಸಿ ಹಿತರಕ್ಷಣಾ ವೇದಿಕೆ ಸುಪ್ರೀಂಕೋರ್ಟ್ ಮೊರೆ ಹೋಗಿ ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ಪಡೆದಿತ್ತು. ಇದೀಗ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು ತಡೆಯಾಜ್ಞೆಯನ್ನು ತೆರವುಗೊಳಿಸಿ ಹೈಕೊರ್ಟ್ ಆದೇಶವನ್ನು ಎತ್ತಿಹಿಡಿದಿದೆ. ಇದರ ಜೊತೆಗೆ ಹೈಕೋರ್ಟ್ ತೀರ್ಪಿನ ಬಗ್ಗೆ ಏನೇ ದೂರುಗಳಿದ್ದರೂ ಮತ್ತೆ ಹೈಕೋರ್ಟ್ ಮೊರೆ ಹೋಗುವಂತೆ ಅದು ಸೂಚನೆ ನೀಡಿದೆ.

ನಮ್ಮ ರಾಜ್ಯದಲ್ಲಿ ಆಚರಣೆಯಲ್ಲಿರುವ ಅನೇಕ ಅನಿಷ್ಟ ಪದ್ಧತಿಗಳಲ್ಲಿ ಮಡೆಸ್ನಾನದ ಆಚರಣೆಯು ಇತಿಹಾಸ ಪುಟ ಸೇರುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಇದರ ವಿರುದ್ಧ ನಡೆಸಲಾದ ಹೋರಾಟಗಳಿಗೆ ನ್ಯಾಯ ಸಿಕ್ಕಂತಾಗಿದೆ. ಆದರೆ ಮಡೆಸ್ನಾನವನ್ನು ನಿಷೇಧಿಸಿ ಎಡೆಸ್ನಾನಕ್ಕೆ ಅವಕಾಶ ಮಾಡಿಕೊಡುವ ಕ್ರಮ ಎಷ್ಟರ ಮಟ್ಟಿಗೆ ಸರಿ. ಎಂಬ ಪ್ರಶ್ನೆ ಉದ್ಭವವಾಗಿದೆ. ದೇವರ ಪ್ರಸಾದದ ಮೇಲೆ ಉರುಳಾಡಿದರೆ ರೋಗ ರುಜಿನಗಳು ಗುಣವಾಗುತ್ತವೆ ಎಂಬ ಹೊಸ ಮೂಢ ನಂಬಿಕೆಯನ್ನು ಹುಟ್ಟು ಹಾಕುವ ಪ್ರಯತ್ನ ಇದಾಗಲಿದೆ. ಇಂತಹ ಒಂದು ಹೊಸ ಆಚರಣೆಯನ್ನು ಹುಟ್ಟು ಹಾಕುವ ಅಧಿಕಾರ ಯಾರಿಗಾದರೂ ಇದೆಯಾ?

ಇದನ್ನು ಜನ ಒಪ್ಪಿಕೊಳ್ಳುವ ಸಾಧ್ಯತೆ ಇದೆಯಾ? ಮಡೆಸ್ನಾನ ಮತ್ತು ಎಡೆಸ್ನಾನದಲ್ಲಿ ಏನಿದೆ ವ್ಯತ್ಯಾಸ? “ಅಳಿಯ ಅಲ್ಲ ಮಗಳ ಗಂಡ..!” ಮೌಢ್ಯದ ಕೆಸರಿನಲ್ಲಿ ಉರುಳಾಡುವುದು ಮಾತ್ರ ಸಾಮಾನ್ಯವಾಗಿರುತ್ತದೆ. ದೇಶದ ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಆಚರಣೆಗಳನ್ನು ನಿಷೇಧಿಸ ಬಹುದು. ಆದರೆ ಒಂದು ತಪ್ಪು ಆಚರಣೆಯನ್ನು ನಿಲ್ಲಿಸಿ ಇನ್ನೊಂದನ್ನು ಹುಟ್ಟುಹಾಕುವ ಪ್ರಯತ್ನ ಅಷ್ಟೇ ಆಕ್ಷೇಪಾರ್ಹವಾಗಿದೆ.

ಸತಿ ಪದ್ಧತಿಯನ್ನು ನಿಷೇಧಿಸಲಾಗಿದೆ. ಸತಿ ಪದ್ಧತಿ ಬದಲು ಬೇರೊಂದು ಪದ್ಧತಿಯನ್ನು ಜಾರಿಗೆ ತರಲಿಲ್ಲವಲ್ಲ. ವರದಕ್ಷಿಣೆ ಪದ್ಧತಿಯನ್ನು ನಿಷೇಧಿಸಲಾಗಿದೆ. ಆದರ ಬದಲು ಬೇರೊಂದು ಪದ್ಧತಿಯನ್ನು ಸೂಚಿಸಿಲ್ಲವಲ್ಲ. ಆದ್ದರಿಂದ ಮಡೆಸ್ನಾನದ ಬದಲು ಎಡೆಸ್ನಾನದ ಸೂಚನೆಯನ್ನು ಬಲವಾಗಿ ವಿರೋಧಿಸಬೇಕಾಗಿದೆ. ಮಡೆಸ್ನಾನ ಕುರಿತಾದ ಕಾನೂನು ಸಮರ ಇಷ್ಟರಲ್ಲೇ ಅಂತ್ಯಗೊಳ್ಳುವ ಲಕ್ಷಣಗಳು ಕಾಣಿಸುತ್ತಿಲ್ಲ. ಕುಕ್ಕೆ ಸುಬ್ರಮಣ್ಯದ ಆದಿವಾಸಿ ಬುಡಕಟ್ಟು ಹಿತರಕ್ಷಣಾ ವೇದಿಕೆ ಕಾನೂನು ಹೋರಾಟವನ್ನು ಮುಂದುವರೆಸುವುದಾಗಿ ಹೇಳಿದೆ. ಈ ವೇದಿಕೆಯ ನಿಲುವು ಅನೇಕ ಸಂದೇಹಗಳಿಗೆ ಕಾರಣವಾಗಿದೆ. ಇದರ ಹಿಂದೆ ಸ್ಥಳೀಯ ಪುರೋಹಿತಶಾಹಿಗಳ ಕೈವಾಡವನ್ನು ತಳ್ಳಿ ಹಾಕುವಂತಿಲ್ಲ. ಮಡೆಸ್ನಾನದ ಆಚರಣೆಯನ್ನು ನಿಲ್ಲಿಸಿದರೆ ದೇವಸ್ಥಾನಕ್ಕೆ ಬರುವ ಆದಾಯಕ್ಕೆ ಧಕ್ಕೆಯಾಗುವ ಆತಂಕ ಇರಬಹುದು. ಈ ವಿಚಾರದಲ್ಲಿ ಆದಿವಾಸಿಗಳ ದುರ್ಬಳಕೆ ಯಾಗುತ್ತಿದೆಯಾ ಎಂಬುದರ ಪರೀಶೀಲನೆ ಆಗಬೇಕಾಗಿದೆ.

ಪ್ರಧಾನಿ ಭೇಟಿ :
ಮಾತಿನ ಮೋಡಿಯೊಂದೆ ಸಾಕೇ?



ಇದೇ ಸೆಪ್ಟಂಬರ್ 23 ಮತ್ತು 24, 2014 ರಂದು ನರೇಂದ್ರ ಮೋದಿಯವರ ಕರ್ನಾಟಕ ಭೇಟಿ ಹಲವು ವಿಷಯಗಳಲ್ಲಿ ಮಹತ್ವದ್ದು. ಅವರು ಹಿಂದೆಲ್ಲಾ ರಾಜ್ಯಕ್ಕೆ ಬಂದು ಹೋಗಿದ್ದಿದೆ, ಭರ್ಜರಿ ಬಾಷಣ ಮಾಡಿದ್ದಿದೆ. ಕೆಲವು ಬಾರಿ ಜನಾಕರ್ಷಕವಾಗಿ, ಹಲವೊಮ್ಮೆ ನೀರಸವಾಗಿ ಮಾತನಾಡಿದ್ದಿದೆ. ಆದರೆ ಈ ಸಲ ಬಂದಿರುವುದು ಪ್ರಧಾನಿಯಾಗಿ ಮೊದಲ ಬಾರಿ. ಅದೂ ಉನ್ನತ ಅಧಿಕಾರದ ಬಲದೊಂದಿಗೆ. ಮೋದಿಯವರು ಬಿಜೆಪಿಯ ಒಬ್ಬ ಪ್ರಮುಖ ನಾಯಕರಾಗಿ, ಸಂಘದ ಸ್ವಯಂ ಸೇವಕರಾಗಿ, ಪ್ರಧಾನಿಯಾಗಿ ಹೀಗೆ ಮೂರೂ (ವಾಸ್ತವದಲ್ಲಿ ಎರಡು) ಪಾತ್ರಗಳನ್ನು ‘ಚೆನ್ನಾಗಿಯೇ’ ನಿರ್ವಹಿಸಿದರೆಂದು ಹೇಳಬಹುದು. ನಮ್ಮ ಮಾಧ್ಯಮಗಳೂ ಅವರಿಗೆ ನಿರಾಸೆ ತರುವ ಪ್ರಸಂಗವನ್ನೇನೂ ಸೃಷ್ಟಿಸಲಿಲ್ಲ! (ಕ್ಷಮಿಸಿ, ನಮಗೆ ಪ್ಯಾಕೇಜ್ ಸುದ್ದಿಯ ವಿಷಯವಿನ್ನೂ ಖಾತ್ರಿಯಾಗಿಲ್ಲ)

24 ರಂದು ಉಪಗ್ರಹ ‘ಮಾಮ್’ನನ್ನು ಮಂಗಳನ ಕಕ್ಷೆ ಸೇರಿಸುವ ಸಂದರ್ಭದಲ್ಲಿ ಇಸ್ರೋ ವಿಜ್ಞಾನಿಗಳೊಂದಿಗೆ ಕಳೆದ ಕೆಲವು ಕ್ಷಣಗಳು ಮತ್ತು ತುಮಕೂರಿನ ವಸಂತ ನರಸಾಪುರದಲ್ಲಿ ಫುಡ್ ಪಾರ್ಕ್‌ಗೆ ಅಡಿಗಲ್ಲಿಟ್ಟ ಸಮಾರಂಭಗಳು ಸರಕಾರದ್ದು. ಇನ್ನು 23ರಂದು ಬೆಂಗಳೂರು ನಗರದ ಹಿಂದಿನ ಹೆಚ್.ಎ.ಎಲ್. ವಿಮಾನ ನಿಲ್ದಾಣಕ್ಕೆ ಸಂಜೆ ಬಂದಿಳಿದ ಬಳಿಕ ಅವರನ್ನು ಸ್ವಾಗತಿಸಲು ಸಂಘಟಿಸಿದ್ದ ಬಿಜೆಪಿಯ ಕಾರ್ಯಕರ್ತರನ್ನುದ್ದೇಶಿಸಿ ಮಾಡಿದ ಸಭೆ ಹಾಗೂ ತುಮಕೂರಿನ ಸಿದ್ಧಗಂಗಾ ಮಠದಲ್ಲಿನ ಕಾರ್ಯಕ್ರಮಗಳು ‘ಸಂಘ ಪ್ರಣೀತ’.

ಅಮೇರಿಕಾದಂತಹ ಶಕ್ತಿಶಾಲಿ ರಾಷ್ಟ್ರಗಳು ಒಡ್ಡಿದ ಎಷ್ಟೆಲ್ಲಾ ಅಡೆ-ತಡೆಗಳ ನಡುವೆಯೂ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಭಾರತೀಯ ವಿಜ್ಞಾನಿಗಳ ಸಾಧನೆ, ಮುನ್ನಡೆ ನಿಜಕ್ಕೂ ಅಭಿನಂದನಾರ್ಹ. ಇಂತಹ ಸಂದರ್ಭದಲ್ಲಿ ಪ್ರಜಾಪ್ರಭುತ್ವೀಯ ರಾಷ್ಟ್ರದ ಜನತೆಯ ಪ್ರತಿನಿಧಿಯಾಗಿ, ಆ ಸಾಧನೆಗೈದ ವೈಜ್ಞಾನಿಕ ಸಮುದಾಯದೊಂದಿಗಿದ್ದು ಅಭಿನಂದಿಸುವುದು, ಒಂದು ವೇಳೆ ವಿಫಲವಾದಲ್ಲಿ ಸ್ಥೈರ್ಯ ಕುಂದದಂತೆ ಹೆಗಲು ಕೊಡುವುದು ಒಂದು ಕರ್ತವ್ಯವೂ ಆಗಿದೆ. ಅದನ್ನು ಮೋದಿ ನಿಭಾಯಿಸಿದರು. ಅದೂ ಭಾಗಶಃ. ಯಾಕೆಂದರೆ ಈ ಸಂದರ್ಭ ನಮ್ಮ ವಿಜ್ಞಾನದ ಬೆಳವಣಿಗೆಗೆ, ಅದರಲ್ಲೂ ಬಾಹ್ಯಾಕಾಶದ ವಿಜ್ಞಾನ ಕ್ಷೇತ್ರದಲ್ಲಿ ಭಾರತ ದಾಪುಗಾಲಿಡದಂತೆ ತಡೆಯಲು ಅಮೇರಿಕಾ ಸತತವಾಗಿ ಯತ್ನಿಸುತ್ತಲೇ ಬಂದಿದೆ. ಹಿಂದೆ ರಶಿಯಾದಿಂದ ಪಡೆಯಲು ಉದ್ದೇಶಿಸಿದ್ದ ಕ್ರಯೋಜನಿಕ್ ಇಂಜಿನ್(ಉಪಗ್ರಹ ಉಡಾವಣಾ) ತಂತ್ರಜ್ಞಾನ ಪಡೆಯದಂತೆ ಭಾರತದ ಮೇಲೆ ಮತ್ತು ರಶಿಯಾದ ಮೇಲೆ ಒತ್ತಡ ಹೇರಿದ್ದ ಅಮೇರಿಕಾದ ದುಷ್ಟ ಸಾಮ್ರಾಜ್ಯಶಾಹಿ ಕುತಂತ್ರಗಳನ್ನು ನೆನಪಿಸಿ ಸ್ವಾವಲಂಬನೆ ಸಾಧಿಸುವ ಛಲ ಬಿತ್ತಿ ನಿಜವಾದ ದೇಶಪ್ರೇಮವನ್ನು ಜಾಗೃತಗೊಳಿಸಬಹುದಿತ್ತು. ಅನ್ನ, ಆರೋಗ್ಯ ಕೇತ್ರಗಳು ಮಹತ್ವದ್ದು ಎಂದು ಬಿಂಬಿಸಲೂ ಸಾಧ್ಯವಿತ್ತು. ಆದರೆ ಭಾರತವನ್ನು ಹೂಡಿಕೆದಾರರರ ಸ್ವರ್ಗವಾಗಿಸಲು, ಮುಖ್ಯವಾಗಿ ಅಮೇರಿಕಾದ ಜೂನಿಯರ್ ಪಾರ್ಟ್‌ನರ್ ಮಾಡಲು ಹೊರಟಿರುವ ಆಳುವವರಿಂದ ಅದನ್ನು ನಿರೀಕ್ಷಿಸಲಾದೀತೆ? ಅದೂ ಬಿಜೆಪಿ ನಾಯಕತ್ವದಿಂದ!

ಭಾರತೀಯ ವಿಜ್ಞಾನದ್ದು ಕಠಿಣ ಹಾದಿಯ ಪಯಣ. ಅದಕ್ಕೂ ಸರಕಾರದ ಸಕಾರಾತ್ಮಕ ಸಾಥ್ ಮತ್ತು ಜನ ನಿಷ್ಠ ಮೂಲ ಆದ್ಯತೆಗಳು ಇಲ್ಲವಾದರೆ ಒಣಗುವುದರಲ್ಲಿ ಆಶ್ಚರ್ಯವೇನಿಲ್ಲ. ಯಾಕೆಂದರೆ ಇದು ಭಾರೀ ಹೂಡಿಕೆಯ ಕ್ಷೇತ್ರ. ಇಲ್ಲವಾದರೆ ಖಾಸಗಿಯವರ ಹಿತಾಸಕ್ತಿಗಳಲ್ಲೇ ನರಳುವ ಪ್ರಮೇಯವೇ ಸದಾ. ಈಗಲೂ ಸಂಶೋಧನಾ ಕ್ಷೇತ್ರ ವಾಣಿಜ್ಯ ಹಿತಾಸಕ್ತಿಗಳಿಂದ ಮುಕ್ತವಾದುದೇನಲ್ಲ.

ಇತ್ತೀಚಿನ ದಿನಗಳಲ್ಲಿ ಚೆನ್ನೈ-ಮುಂಬೈ ಉದ್ದಿಮೆ ಕಾರಿಡಾರ್‌ಗಳನ್ನು ನಿರ್ಮಿಸುವ ಮೂಲಕ ಅಭಿವೃದ್ಧಿ ಸಾಧಿಸುವ ಯೋಜನೆಗಳನ್ನು ಮುಂದಿಡಲಾಗುತ್ತಿದೆ. ಇದರಲ್ಲಿ ತುಮಕೂರು ಜಿಲ್ಲೆಯಲ್ಲಿ ಹಲವಾರು ಉದ್ದಿಮೆಗಳ ಸ್ಥಾಪನೆಗೆ ಅಡಿಗಲ್ಲುಗಳನ್ನು ಇಡಲಾಗುತ್ತಿದೆ. ಮೋದಿಯವರು ಅನಾವರಣ ಮಾಡಿದ್ದು ಅಂತಹ ಫುಡ್ ಕಾರಿಡಾರ್. ಒಂದು ಖಾಸಗಿಯದದ್ದಾದರೆ ಮತ್ತೊಂದು ಸರಕಾರಿ ಸ್ವಾಮ್ಯದ್ದು. ಈ ಸಂದರ್ಭಕ್ಕೆ ವಿಜ್ಞಾನವನ್ನು ಅನ್ನಕ್ಕೆ ಬೆಸೆಯುವ ಪ್ರಯತ್ನವನ್ನು ಮೋದಿಯವರು ಮಾಡಿದರು. ಇಂತಹ ಕಾರಿಡಾರ್, ಸಂಸ್ಕರಣಾ ವ್ಯವಸ್ಥೆ ಕೃಷಿಯ ಬಿಕ್ಕಟ್ಟಿಗೆ ಒಂದು ಪರಿಹಾರ ಎಂದು ಬಿಂಬಿಸಲು ಯತ್ನಿಸಲಾಯಿತು. ರೈತನ ಸಂಕಷ್ಟ ಮತ್ತು ಕೃಷಿಯ ಬಿಕ್ಕಟ್ಟಿನ ಬಗ್ಗೆ ಅವರಾಡಿದ ಮಾತುಗಳು ಯಾವುದೇ ನಿಜ ಪರಿಹಾರಗಳಿಲ್ಲದ ಒಣ ಕಾಳಜಿಯ ಮನೋರಂಜಕ ತುಣುಕುಗಳು ಅಷ್ಟೇ. ಯಾಕೆಂದರೆ ಇಂತಹ ಅವನತಿ, ದುಸ್ಥಿತಿಗೆ ನಮ್ಮ ಕೃಷಿ ಕೈಗಾರಿಕೆಯನ್ನು ತಳ್ಳುವಲ್ಲಿ ವಾಜಪೇಯಿ ನೇತೃತ್ವದ ಹಿಂದಿನ ಎನ್.ಡಿ.ಎ. ಸರಕಾರದ ಪಾಲು ಕಾಂಗ್ರೆಸ್‌ಗಿಂತ ಕಡಿಮೆಯೇನಲ್ಲ. ಇವರ ಸರಕಾರದಲ್ಲಿ ವಾಣಿಜ್ಯ ಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರೇ 1,400ಕ್ಕೂ ಹೆಚ್ಚಿನ ಕೃಷಿ ಉತ್ಪನ್ನಗಳ ವಿದೇಶಿ ಮುಕ್ತ ಅಮದಿಗೆ ಒಪ್ಪಂದ ಮಾಡಿಕೊಂಡು ಶವ ಪೆಟ್ಟಿಗೆಗೆ ತಮ್ಮದೂ ಒಂದು ಮೊಳೆ ಹೊಡೆದರು. ವಾಜಪೇಯಿ ಅವಧಿಯಲ್ಲೇ ಸುಮಾರು 2ಲಕ್ಷದಷ್ಟು ರೈತರು ಕೃಷಿಯ ಬಿಕ್ಕಟ್ಟಿನಿಂದಾಗಿಯೇ ಆತ್ಮಹತ್ಯೆಗೀಡಾದರು. ಆದರೂ ‘ಪೇಯಿ’ಯವರು ಬೆಳಗುತ್ತಿರುವ ಭಾರತದ ಪಿಟೀಲು ಕೊಯ್ಯುವುದನ್ನು ನಿಲ್ಲಸಲಿಲ್ಲ! ಈಗಲೂ ಮೋದಿಗೆ ಇರುವುದು ಅದೇ ಮಾದರಿ ಅಲ್ಲವೇ?

ಇದೇ ಸಂದರ್ಭದಲ್ಲಿ ಪಾಲ್ಗೊಂಡಿದ್ದ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಪ್ರಸ್ತಾಪಿಸಿದ ಹೈದ್ರಾಬಾದ್-ಕರ್ನಾಟಕದ ಅಭಿವೃದ್ಧಿಗೆ ಹೆಚ್ಚಿನ ಸಹಾಯ, ಕೈಗಾರಿಕಾ ಬೆಳವಣಿಗೆಗೆ ನೆರೆಯ ಆಂಧ್ರ, ತೆಲಂಗಾಣಗಳಿಗೆ ನೀಡಿದ ರಿಯಾಯಿತಿ ಸೌಲಭ್ಯಗಳು, ಅಭಿವೃದ್ಧಿಗೆ ಸಹಾಯ ಮುಂತಾದವುಗಳ ಬಗ್ಗೆ ಏನೊಂದೂ ಮಾತನಾಡದ ಮೋದಿಯವರಿಗೆ ಜನರ ಕಾಳಜಿ ಇದೆಯೆನ್ನಬೇಕೆ? ಅದರಲ್ಲೂ ರಾಜ್ಯದಲ್ಲಿ ಹಿಂದಿನ ವರುಷಗಳಲ್ಲಿ 124 ತಾಲೂಕುಗಳು ತೀವ್ರ ಬರಗಾಲದಿಂದ, ಈ ವರುಷ ತೀವ್ರ ಅತೀವೃಷ್ಟಿಯಿಂದ ತತ್ತರಿಸುತ್ತಿರುವಾಗ ಜನರ ಕಷ್ಟಗಳಿಗೆ ಸ್ಪಂದಿಸುವ, ಪರಿಹಾರ ಒದಗಿಸುವ ಒಂದು ಮಾತೂ ಇಲ್ಲವೆನ್ನುವುದು ನಿಜಕ್ಕೂ ಖಂಡನಾರ್ಹ. ಮೇಲಾಗಿ ಕೇಂದ್ರವು ಸಂಗ್ರಹಿಸುವ ಸಂಪನ್ಮೂಲದಲ್ಲಿ ನ್ಯಾಯಸಮ್ಮತವಾದ ಪಾಲನ್ನು ನೀಡದೇ ರಾಜ್ಯಗಳನ್ನು ವಂಚಿಸುತ್ತಿರುವಾಗ ಕೇಂದ್ರ ಮತ್ತು ರಾಜ್ಯಗಳು ಒಂದಾಗಿಯೇ ಅಭಿವೃದ್ಧಿ ಸಾಧಿಸಬೇಕು

ಪುಟ 15 ಕ್ಕೆ

'ಲವ್ ಜಿಹಾದ್' ಎಂಬುದು ನಿಜವೇ?

ಜಿ.ವಿ. ಶ್ರೀರಾಮರೆಡ್ಡಿ

'ಲವ್ ಜಿಹಾದ್' ಎಂಬ ಮಾತುಗಳು ಮತ್ತು ಪ್ರಚಾರ ಕೆಲ ವರ್ಷಗಳ ಹಿಂದೆ ಕೇರಳ ಮತ್ತು ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಮೊದಲು ಕೇಳಿ ಬಂತು. ಈ ಪ್ರದೇಶದಲ್ಲಿ ಕೆಲವು ಮುಸ್ಲಿಂ ಯುವಕರು ಹಿಂದೂ ಹುಡುಗಿಯರನ್ನು ಪ್ರೀತಿಸುವ ರೀತಿಯಲ್ಲಿ ಪ್ರೇರೇಪಿಸಿ ಅವರನ್ನು ಮದುವೆಯಾಗಿ ಅವರನ್ನು ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸುತ್ತಿದ್ದಾರೆಂದು ಬಲ ಪಂಥೀಯ ಹಿಂದೂ ಮೂಲಭೂತವಾದಿಗಳು ಹುಯಿಲೆಬ್ಬಿಸಿದರು. ಆದರೆ ಅದಕ್ಕೆ ಪೂರಕವಾಗಿ ಬಲವಾದ ಸಾಕ್ಷಿ ಮತ್ತು ಪುರಾವೆಗಳನ್ನು ಒದಗಿಸಬೇಕೆಂದು ಇಲ್ಲಿನ ಹಲವಾರು ಚಿಂತಕರು ಮತ್ತು ಲೇಖಕರು ಒತ್ತಾಯಿಸಿದ ಹಿನ್ನೆಲೆಯಲ್ಲಿ ಈ ಅಬ್ಬರದ ಪ್ರಚಾರ ನಿಂತಿತ್ತು. ಇತ್ತೀಚಿಗೂ ಕೂಡಾ ಕರ್ನಾಟಕದ ಹೆಸರಾಂತ ಲೇಖಕಿಯಾದ ಶ್ರೀಮತಿ ಸಾರಾ ಅಬೂಬಕರ್‌ರವರು 'ಲವ್ ಜಿಹಾದ್' ನಡೆಯುತ್ತಿರುವ ಬಗ್ಗೆ ಪುರಾವೆ ಒದಗಿಸಬೇಕೆಂದು ಒತ್ತಾಯಿಸಿದ್ದಾರೆ.

ಹಲವಾರು ವರ್ಷಗಳ ಹಿಂದೆ ಪ್ರಸ್ತಾಪವಾಗಿ ತಣ್ಣಗಾಗಿದ್ದ ಈ ವಿಷಯ ಮತ್ತೆ ಯಾಕೆ ಎದ್ದು ಬಂದಿದೆ? ಇದರ ಹಿಂದೆ ಯಾವ ಶಕ್ತಿಗಳು ಕೆಲಸ ಮಾಡುತ್ತಿವೆ? ಅವರ ಉದ್ದೇಶವೇನು? ಎಂಬುದು ಬಹಳ ಮುಖ್ಯವಾದ ಅಂಶವಾಗಿದೆ.



ಪೋಲಿಸ್ ಇಲಾಖೆಯ ಉನ್ನತ ಹಂತದಲ್ಲಿ ಚರ್ಚೆ

ಆಗಸ್ಟ್ 21, 2014 ರಂದು 'ದಿ ಹಿಂದೂ' ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾದ ಒಂದು ಸುದ್ದಿ ತುಂಬಾ ಆತಂಕಕಾರಿ ಹಾಗೂ ಗಾಬರಿಗೊಳಿಸುವಂತಹದ್ದಾಗಿದೆ. ಆ ಸುದ್ದಿಯ ಪ್ರಕಾರ ಇತ್ತೀಚೆಗೆ 'ಟಾಪ್ ಕಾಪ್ ಅಂತರ್ಜಾಲ' ಎಂಬ ಹೆಸರಿನಲ್ಲಿ ದೇಶದ ಅತ್ಯುನ್ನತ ಪೋಲೀಸ್ (ಐಪಿಎಸ್)ಅಧಿಕಾರಿಗಳನ್ನು ಸೇರಿಸಿ 'ಲವ್ ಜಿಹಾದ್' ಬಗ್ಗೆ ಚರ್ಚೆಯನ್ನು ನಡೆಸಿದ್ದಾರೆ. ಆ ಚರ್ಚೆಯಲ್ಲಿ ಭಾಗವಹಿಸಿದ್ದ ಬಹುತೇಕ ಅಧಿಕಾರಿಗಳು 'ಲವ್ ಜಿಹಾದ್' ಅಸ್ತಿತ್ವ ಮತ್ತು ಅದರ ಹಿಂದೆ ಮುಸ್ಲಿಂ ಮೂಲಭೂತವಾದಿಗಳ ಪಾತ್ರದ ಬಗ್ಗೆ ನಕಾರಾತ್ಮಕವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೂ ಸಹಾ ಆ ಚರ್ಚೆಯಲ್ಲಿ ಭಾಗವಹಿಸಿದ್ದ ಕೆಲ ಅಧಿಕಾರಿಗಳು ಮುಸ್ಲಿಮರ ಬಗ್ಗೆ ದ್ವೇಷದಿಂದ ನಿಂದನಾರ್ಹವಾದ ಮಾತನಾಡಿರುವುದು ಆತಂಕಕಾರಿ ವಿಷಯವಾಗಿದೆ. ಇಂತಹ ಆತಂಕಕಾರಿ ಪರಿಸ್ಥಿತಿಯ ನಿರ್ಮಾಣದ ಹಿಂದೆ ಬಲಪಂಥೀಯ ಹಿಂದೂ ಮೂಲಭೂತವಾದಿಗಳು ಇದ್ದಾರೆಂಬುದನ್ನು ಕೇಂದ್ರದಲ್ಲಿ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ.

ಚುನಾವಣೆಗಳ ಹಿನ್ನೆಲೆ
ಮತ್ತೆ ವಿಷ ಪ್ರಚಾರದ ಅಲೆ

ಇತ್ತೀಚೆಗೆ ಮುಕ್ತಾಯಗೊಂಡ ಲೋಕಸಭಾ ಮತ್ತು ವಿಧಾನಸಭಾ ಉಪ ಚುನಾವಣೆಗಳ ಪ್ರಕ್ರಿಯೆಗಳು ಪ್ರಾರಂಭಗೊಂಡಾಗಿನಿಂದ 'ಲವ್ ಜಿಹಾದ್' ಬಗೆಗೆ ಪ್ರಚಾರದ ವೇಗವು ಹೆಚ್ಚಾಯಿತು. ಪ್ರತ್ಯೇಕವಾಗಿ ಉತ್ತರ ಪ್ರದೇಶದಲ್ಲಿ ಇದರ ಸ್ವರೂಪ ಬಹಳ ತೀವ್ರವಾಗಿತ್ತು ಎಂಬುದನ್ನು ಗಮನಿಸಬೇಕಾಗಿದೆ. ಉತ್ತರ ಪ್ರದೇಶದ ಚುನಾವಣಾ ಪ್ರಚಾರದ ಜವಾಬ್ದಾರಿಯನ್ನು ಹೊತ್ತಿದ್ದ ಬಿಜೆಪಿಯ ಸಂಸದ ಯೋಗಿ ಆದಿತ್ಯನಾಥ್ ವಿಷಬೀಜ ಬಿತ್ತಿದರು. 'ಲವ್ ಜಿಹಾದ್'ನಿಂದಾಗಿ ಮುಸ್ಲಿಮರಾಗಿ ಮತಾಂತರಗೊಂಡಿರುವ ಪ್ರತಿಯೊಬ್ಬ ಹಿಂದೂ ಯುವತಿಯರಿಗೆ ಬದಲಾಗಿ 100 ಮುಸ್ಲಿಂ ಮಹಿಳೆಯರನ್ನು ಹಿಂದೂ ಧರ್ಮಕ್ಕೆ ಮತಾಂತರಗೊಳಿಸಲು ಪ್ರತಿಜ್ಞೆ ಮಾಡಬೇಕೆಂದು ತನ್ನ ಅನುಯಾಯಿಗಳಿಗೆ ಕರೆ ನೀಡಿದರು. ಇದರ ಬೆನ್ನಲ್ಲೇ ಭಾರತೀಯ ಜನತಾ ಪಕ್ಷದ ಇನ್ನೊಬ್ಬ ನಾಯಕಿ ಮತ್ತು ಕೇಂದ್ರ ಮಂತ್ರಿ ಉಮಾಭಾರತಿ ಈ ಗಂಭೀರ ಪರಿಸ್ಥಿತಿಯ ಬಗ್ಗೆ ಎರಡೂ ಸಮುದಾಯಗಳು ಕುಳಿತು ಚರ್ಚೆ ಮಾಡಿ ಪರಿಹರಿಸಿಕೊಳ್ಳಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.



'ಲವ್ ಜಿಹಾದ್' ಎಂಬುದು ನಿಜಕ್ಕೂ ಈ ಇದೆಯೇ?

ಈ 'ಲವ್ ಜಿಹಾದ್' ಎಂಬ ಪ್ರವೃತ್ತಿ ನಿಜವಾಗಿಯೂ ಈ ದೇಶದಲ್ಲಿ ಇದೆಯೇ? ಇದರ ಸ್ವರೂಪವೇನು? ಈಗ ಪ್ರಚಾರವಾಗುತ್ತಿರುವ ರೀತಿಯಲ್ಲಿ ಇದು ಒಂದು ಧರ್ಮದ ಸೈದ್ಧಾಂತಿಕ ನಿಲುವೆ? ಈ ಪ್ರವೃತ್ತಿ ನಿಜವಲ್ಲ ಎಂದಾದರೆ ಈ ಪದಪ್ರಯೋಗ ಎಲ್ಲಿಂದ ರವಾನೆ ಅಯಿತು ಎಂಬ ಈ ಅಂಶಗಳನ್ನು ವಿಶ್ಲೇಷಿಸುವ ಅಗತ್ಯವಿದೆ. ಅದರಲ್ಲೂ ಮುಖ್ಯವಾಗಿ ನರೇಂದ್ರಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರುವ ಬಹಳ ಹಿಂದೆಯೇ ಹಿಂದೂತ್ವವಾದಿ ಮೂಲಭೂತವಾದಿ ಸಂಘಟನೆಗಳು ಇದನ್ನು ಇಸ್ಲಾಂ ಧರ್ಮ ಹುಟ್ಟುಹಾಕಿರುವ ಒಂದು ಸೈದ್ಧಾಂತಿಕ ವಿಧಾನವೆಂದು ಪ್ರತಿಪಾದಿಸಲು ಪ್ರಯತ್ನ ಮಾಡಿದಾಗ, ವಸ್ತುನಿಷ್ಠವಾಗಿ ವಿಶ್ಲೇಷಿಸುವ ಬಹಳಷ್ಟು ಚಿಂತಕರುಗಳು ಮತ್ತು ಬರಹಗಾರರು ಅದನ್ನು ನಿರಾಕರಿಸಿದರು. ಈಗ ಮತ್ತೆ ಅದನ್ನು ಒಂದು ರಾಜಕೀಯ ಪ್ರಶ್ನೆಯನ್ನಾಗಿ ಮುನ್ನೆಲೆಗೆ ತರುವುದರಲ್ಲಿ ಹಿಂದೂ ಮೂಲಭೂತವಾದಿಗಳು ಯಶಸ್ವಿಯಾಗಿದ್ದಾರೆ.

ಹಲವಾರು ಕಾರಣಗಳಿಂದ ಸಂಕೀರ್ಣಗೊಂಡಿರುವ ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ತಮ್ಮ ಬಗ್ಗೆ ಆಲೋಚನೆ ಮಾಡಿ ತೀರ್ಮಾನ ಕೈಕೊಳ್ಳುವ ಶಕ್ತಿಯಿಲ್ಲವೆಂದು, ಆದ್ದ-ರಿಂದ ಅವರ ಧಾರ್ಮಿಕ ಸ್ವಾತಂತ್ರ್ಯವನ್ನು ರಕ್ಷಿಸಬೇಕೆಂದು ಹೇಳಲಾಗುತ್ತಿದೆ. ಈ ಹೆಸರಿನಲ್ಲಿ ಅದಕ್ಕೆ ಒಂದಿಷ್ಟು ಸುಳ್ಳು-ಮೌಢ್ಯತೆಯನ್ನು ಬೆರೆಸಿ ಹಿಂದುತ್ವವಾದಿಗಳು ಮಾಡುತ್ತಿರುವ ವ್ಯವಸ್ಥಿತ ಪ್ರಚಾರದಿಂದ ಜನರು ಒಂದಷ್ಟು ಗಮನಿಸುವಂತಾಗಿದೆ. ಈ ತರ್ಕವನ್ನು ಬಲಗೊಳಿಸಲು ಅವರು ದ್ವೇಷಪೂರಿತವಾದ 'ಮುಸ್ಲಿಮರ ಪಿತೂರಿ'ಯೆಂದೂ ಈ ಶಕ್ತಿಗಳು ಇಡೀ ಜಗತ್ತನೇ ತನ್ನ ಧಾರ್ಮಿಕ ನಂಬಿಕೆಯತ್ತ ಪರಿವರ್ತಿಸಲು ಪ್ರಯತ್ನ ಮಾಡುತ್ತಿದ್ದಾರೆಂದು ಪ್ರಚಾರವನ್ನು ಮಾಡಲಾರಂಭಿಸಿದ್ದಾರೆ. ಇಲ್ಲಿ ಇನ್ನೂ ಎರಡು ಪ್ರಮುಖ ಪ್ರಶ್ನೆಗಳನ್ನು ನಾವು ಚರ್ಚಿಸಬೇಕಾಗಿದೆ. ಹಿಂದೂ ಮಹಿಳೆಯರಿಗೆ ಧಾರ್ಮಿಕ ವಿಚಾರಗಳಿಗೆ ಸಂಬಂಧ ಪಟ್ಟು ಸ್ವಂತವಾಗಿ ಆಲೋಚಿಸಿ ತೀರ್ಮಾನಕ್ಕೆ ಬರುವ ಶಕ್ತಿ ಇಲ್ಲವೆಂಬ ನೆಪಮಾಡಿ ಲವ್ ಜಿಹಾದ್‌ನ ವಿರುದ್ಧ ಹೋರಾಟ ನಡೆಸುತ್ತಿದ್ದೇವೆ ಎಂದು ಸಾರಿರುವ ಸ್ವಯಂಘೋಷಿತ ಮಹಿಳಾ ಹಕ್ಕುಗಳ ರಕ್ಷಕರು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ.

'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದವರು ಯಾರು?

ಮಹಿಳೆಯರು ಏಕೆ ಸ್ವಂತ ಯೋಚನಾ ಶಕ್ತಿ 'ಇಲ್ಲದಂತೆ' ಆಗಿದ್ದಾರೆ? 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' (ಯಾವ ಸ್ತ್ರೀಯಳೂ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ.') ಎಂದು ಹೇಳಿ ಅವರಿಗೆ ಎಲ್ಲಾ ಸ್ವಾತಂತ್ರ್ಯವನ್ನು ನಿರಾಕರಿಸುವವರು ಇದೇ ಸನಾತನವಾದಿಗಳೇ ಅಲ್ಲವೆ? ಶತಶತಮಾನಗಳಿಂದ ಮಹಿಳೆಯನ್ನು ಭೋಗವಸ್ತುವಿನಂತೆ ಉಪಯೋಗಿಸಲು ನಿರ್ದೇಶನ ನೀಡಿದವರು ಇದೇ ಶಕ್ತಿಗಳು ಪ್ರತಿನಿಧಿಸುತ್ತಿರುವ ಪುರುಷ ಪ್ರಧಾನ-ಪುರೋಹಿತಶಾಹಿ ಸಿದ್ಧಾಂತವಲ್ಲವೇ?. ಮಹಿಳೆಯರು ಪುರುಷನ ಅಡಿಯಾಳು ಎಂದು ಮತ್ತು ಗುಲಾಮಳು ಎಂದು ನೋಡುತ್ತಿರುವುದಕ್ಕೆ ಮೂಲ ಕಾರಣ ಈ ಮನುವಾದಿ ಮನಸ್ಸುಗಳೇ ಅಲ್ಲವೆ? ಈ ಹೆಣ್ಣು, ಗಂಡು ಮಗುವನ್ನು ಹೆರಬೇಕೋ ಹೆಣ್ಣು ಮಗುವನ್ನು ಹೆರಬೇಕೋ ಎಂದು ತೀರ್ಮಾನಿಸುವಂತೆ ಮಾಡಿ ಈಗ ಅವರ ಹಕ್ಕುಗಳ ರಕ್ಷಕರೆಂದು ಹೇಳಿಕೊಳ್ಳಲು ಯ್ಯಾವ್ಯಾವ ಹಕ್ಕು ಇವರಿಗೆ ಇಲ್ಲ. ಇವಳು ಇಂದು ಅಲ್ಪಸಂಖ್ಯಾತರ ವಿರುದ್ಧದ ದ್ವೇಷದ ರಾಜಕಾರಣಕಷ್ಟೆ ಬಳಕೆಯಾಗುತ್ತಿದ್ದಾಳೆ.

'ಲವ್ ಜಿಹಾದ್' ಎಂಬ ಈ ಪದಪುಂಜದ ಮೂಲ

'ಲವ್ ಜಿಹಾದ್' ಎಂಬ ಈ ಪದಪುಂಜ ಭಾರತದಲ್ಲಿ ಹುಟ್ಟು ಪಡೆಯಿತೆ? ಖಂಡಿತವಾಗಿಯೂ ಅಲ್ಲ. ಇದು 1940ರ ದಶಕದಲ್ಲೇ ಯೂರೋಪ್ ಖಂಡದಿಂದ ರವಾನೆಯಾದ ಅಪಾಯಕಾರಿ ಸರಕು. 1950ರಲ್ಲಿ ಬ್ರಿಟೀಷ್ ರಾಷ್ಟ್ರೀಯವಾದಿ ಪಕ್ಷದಿಂದ ಸಿಡಿದುಹೋದ ಒಂದು ಗುಂಪಿನವರು ಮೊದಲ ಬಾರಿಗೆ ಇಂಗ್ಲೆಂಡಿನಲ್ಲಿ ಇಂತಹುದೇ ಆದ ಒಂದು ಅಪಕ್ವವಾದ ಪ್ರಚಾರವನ್ನು ಏಷ್ಯಾದಿಂದ ವಲಸೆಹೋಗಿದ್ದ ವಲಸೆಗಾರರ ವಿರುದ್ಧ ಅದರಲ್ಲೂ ಮುಖ್ಯವಾಗಿ ಮುಸ್ಲಿಮರ ವಿರುದ್ಧ ನಡೆಸಿದರು ಎಂಬುದು ಐತಿಹಾಸಿಕ ಸತ್ಯ. ಅವರು ಬ್ರಿಟನ್‌ನಲ್ಲಿರುವ ಮಹಿಳೆಯರ ಮತ್ತು ಮಕ್ಕಳ ಮಧ್ಯೆ ಎಚ್ಚರಿಕೆ ಕೊಡುವ ಹೆಸರಿನಲ್ಲಿ ವ್ಯವಸ್ಥಿತವಾದ ಪ್ರಚಾರವನ್ನು ನಡೆಸಿ ಮುಸ್ಲಿಮರೆಂದರೆ, ಅತ್ಯಾಚಾರಿಗಳು, ವಿಕೃತ ಮನಸ್ಸಿನವರೆಂದು ಅವರ ಬಗ್ಗೆ ಎಚ್ಚರದಿಂದ ಇರುವಂತೆ ಪ್ರಚಾರ ಮಾಡಿದರು. ಇತ್ತೀಚಿನ ರಾಜಕೀಯ ಇತಿಹಾಸವನ್ನು ಅಭ್ಯಾಸ ಮಾಡಿದವರಿಗೆ ಸ್ಪಷ್ಟವಾಗುವ ಒಂದು ವಿಷಯವೇನೆಂದರೆ ಅಲ್ಪಸಂಖ್ಯಾತ ಧರ್ಮವು ಬಹುಸಂಖ್ಯಾಂತ ಧರ್ಮಕ್ಕೆ ಬೆದರಿಕೆಯನ್ನು ಒಡ್ಡಿದೆಯೆಂಬ ವ್ಯವಸ್ಥಿತ ಪ್ರಚಾರದ ಮುಂಚೂಣಿಯಲ್ಲಿ ನಿಂತವರು ಜರ್ಮನಿಯ ನಾಯಕ ಅಡಾಲ್ಫ್ ಹಿಟ್ಲರ್. ಆತ ತನ್ನ ಆತ್ಮ ಚರಿತ್ರೆಯಲ್ಲಿ ಈ ರೀತಿಯಾಗಿ ಬರೆದಿದ್ದಾನೆ. 'ಯೆಹೂದಿಗಳು ಬಹಳ ವ್ಯವಸ್ಥಿತವಾಗಿ ಜರ್ಮನಿಯ ಜನಾಂಗವನ್ನು ಕಲುಷಿತಗೊಳಿಸಿ, ಅದರ ಶ್ರೇಷ್ಠತೆಯನ್ನು ಕಡಿಮೆ ಮಾಡುವ ವ್ಯವಸ್ಥಿತ ಪಿತೂರಿಯನ್ನು ನಡೆಸುತ್ತಿದ್ದಾರೆ. ಇದರಿಂದಾಗಿ ಜರ್ಮನಿ ಜನಾಂಗಕ್ಕೆ ಅಪಾಯ ಒದಗಿದೆ.' ಎಂದು ಹೇಳುತ್ತಾ, ಮುಂದುವರೆದು 'ಕಪ್ಪು ಕೂದಲಿನ ಯಹೂದಿ ಯುವಕರು ಗಂಟೆಗಟ್ಟಲೆ ಪವಿತ್ರವಾದ ಜರ್ಮನಿಯ ಯುವತಿಯರ ಜೊತೆ ಗುಟ್ಟಾಗಿ ಮಾತನಾಡಿ ತಮ್ಮ ರಕ್ತದಿಂದ ಹೇಗೆ ಅವಳ ಜನನಾಂಗವನ್ನು ಅಪವಿತ್ರಗೊಳಿಸಿ ಕ್ರೂರ ನಗೆಯನ್ನು ಬೀರುತ್ತಾರೆ.' ಎಂದು ಬರೆಯುತ್ತಾನೆ. ಹಾಗಾಗಿ ಅವನು ಎಲ್ಲಾ ವಿಧಗಳಿಂದಲೂ ಜರ್ಮನಿ ದೇಶದ ಜನಾಂಗವನ್ನು 'ಪವಿತ್ರಗೊಳಿಸುವ' ಪ್ರಯತ್ನ ಮಾಡುತ್ತಾನೆ. !!! ಈ ರೀತಿಯ ಜನಾಂಗೀಯ ದ್ವೇಷದ ಇನ್ನೊಂದು ರೂಪವೇ ಹಿಂದುತ್ವವಾದದ ಧಾರ್ಮಿಕ ದ್ವೇಷ ಎಂಬುದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಇದರ ಆಧಾರದಲ್ಲೇ 20ನೇ ಶತಮಾನದ ಪ್ರಾರಂಭದಲ್ಲಿ ಜರ್ಮನಿಯಲ್ಲಿ ಎಲ್ಲಾ ವಿಧವಾದ ಸಾಮಾಜಿಕ, ಆರ್ಥಿಕ, ರಾಜಕೀಯ ಸಂಕಷ್ಟಗಳಿಗೆ ಯೆಹೂದಿಗಳೇ ಕಾರಣವೆಂದು ಅದಕ್ಕೆ ಯಾವುದೇ ಆಧಾರವಿಲ್ಲದೇ ಯಹೂದಿಗಳ ನರಮೇಧವನ್ನು ನಡೆಸಲಾಯಿತು. ಈ ವಿಷಯದಲ್ಲಿ ಕೆಲವು ಅಂಶಗಳು ನಿಜವಿದ್ದರೂ, ಕೆಲವು ಸಮಸ್ಯೆಗಳು ಇದ್ದರೂ ವಿವೇಕಹೀನ ನರಮೇಧವನ್ನು ಮನುಷ್ಯತ್ವವಿರುವ ಯಾರೂ ಒಪ್ಪಲಾರರು. ಯೂರೋಪಿನಲ್ಲಿ ಪ್ರತ್ಯೇಕವಾಗಿ ಜರ್ಮನಿಯಲ್ಲಿ ಹಿಟ್ಲರ್ ಹುಟ್ಟಿಹಾಕಿದ್ದು ಜರ್ಮನ್ ಜನಾಂಗದ 'ಶ್ರೇಷ್ಠತೆ'ಯ ವಾದ. ಇಲ್ಲಿ ಧಾರ್ಮಿಕ ಶೇಷ್ಠತೆ. ಜಗತ್ತಿನಲ್ಲಿ ಎಲ್ಲಾ ಕಡೆ ರಕ್ತದ ಓಕಳಿಯನ್ನು ಹರಿಸುತ್ತಿರುವ ಧಾರ್ಮಿಕ ಮೂಲಭೂತವಾದಕ್ಕೆ ಪೂರಕ ಸಿದ್ಧಾಂತ. ➧

ಕನ್ನಡ ವಾರಪತ್ರಿಕೆ



ಇದರ ಪಡಿಯಚ್ಚೆ 'ಹಿಂದುತ್ವವಾದ' ಎನ್ನುವ ಬಿಜೆಪಿ ಮತ್ತು ಸಂಘಪರಿವಾರದ ಪ್ರತಿಪಾದನೆ. 'ಹಿಂದೂ ಧರ್ಮ'ದ 'ಶ್ರೇಷ್ಠತೆ'ಯ ವಾದ. 'ಪವಿತ್ರ ಹಿಂದೂ ಧರ್ಮವನ್ನು ರಕ್ಷಿಸುವುದು ನಿಮ್ಮ ಪವಿತ್ರ ಕರ್ತವ್ಯಲ್ಲವೇ? ಎಂದು ಪ್ರಶ್ನಿಸುತ್ತ, ಅನ್ಯ ಧರ್ಮಗಳ ಕುರಿತು ದ್ವೇಷ ಮೂಡಿಸುವುದು. ಇದೇ ರೀತಿಯಲ್ಲೇ ಮುಸ್ಲಿಂ ಮೂಲಭೂತವಾದಿಗಳು ಇವರ ಪಡಿಯಚ್ಚುಗಳು. ಇವರು ಅವರ ಪಡಿಯಚ್ಚುಗಳು. ಒಟ್ಟಾರೆ ಮೂಲಭೂತವಾದಿಗಳ ಧರ್ಮಾಂಧತೆಗೆ ಮುಗ್ಧ ಮಹಿಳೆಯರ ಬಲಿ.

ಭಾರತದಲ್ಲೂ ಸಹ ನಾವು ಈ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. 'ಮುಸ್ಲಿಮರಿಗೆ ಹಿಂದೂಗಳ ಮೇಲೆ ಧಾರ್ಮಿಕ ದ್ವೇಷ' ಎಂದು ಹೇಳುವವರು ಒಂದು ಸತ್ಯವನ್ನು ತಿಳಿಯಬೇಕು. ಅನ್ಯಧರ್ಮಗಳ ಬಗ್ಗೆ ದ್ವೇಷ ಹೊಂದಿದ್ದರೆ ಅದು ನಿಜವಾದ ಇಸ್ಲಾಂ ಧರ್ಮವಲ್ಲ. ಇದನ್ನು ಬಹುತೇಕ ಮುಸ್ಲಿಮರು ಪ್ರತಿಪಾದಿಸುತ್ತಾರೆ. ಜಗತ್ತಿನ ಎಲ್ಲಾ ದೇಶಗಳಿಗಿಂತ ಹೆಚ್ಚು ಮುಸ್ಲಿಮರ ಸಂಖ್ಯೆ ಇದ್ದರೂ ನಮ್ಮ ದೇಶ ಒಂದು ದೇಶವಾಗಿ ಉಳಿದಿದೆ. ಆದರೆ ಬೆರಳೆಣಿಕೆಯಷ್ಟು ಮುಸ್ಲಿಂ ಮೂಲಭೂತವಾದಿಗಳ ಕ್ರಿಯೆಯಿಂದಾಗಿ ಇಡೀ ಮುಸ್ಲಿಂ ಜನಾಂಗವನ್ನು ದ್ವೇಷಿಸುವುದು



ಅವರ ವಿರುದ್ಧ ಹಗೆತನ ಸಾಧಿಸುವುದು ದುರುದ್ದೇಷಪೂರಿತ ರಾಜಕೀಯವಾಗುತ್ತದೆ. ಆದೇ ರೀತಿಯಲ್ಲೇ, ಭಾರತೀಯ ಜನ ಸಂಸ್ಕೃತಿ ಸಂಕುಚಿತವಲ್ಲ, ಅದರಲ್ಲಿ ಎಲ್ಲಾ ಧರ್ಮಗಳನ್ನು ಗೌರವಿಸುವ, ಸಮಾನತೆಯಿಂದ ನೋಡುವ ಗುಣವಿದೆ. 'ಹಿಂದುತ್ವ' ಎಂಬುದು 'ಹಿಂದೂ ಧರ್ಮ'ವಲ್ಲ. ಒಂದು ಸಣ್ಣ ವಿಭಾಗ 'ಹಿಂದುತ್ವ'ವನ್ನು ಪ್ರತಿಪಾದಿಸುತ್ತದೆ ಎಂಬ ಕಾರಣಕ್ಕೆ ಹಿಂದೂ ಧರ್ಮವನ್ನು ದ್ವೇಷಿಸುವುದು ಸಂಪೂರ್ಣ ತಪ್ಪು. 1992ರಲ್ಲಿ ಸಂಘ ಪರಿವಾರದ ಅನುಯಾಯಿಗಳು ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದಾಗ, ಗುಜರಾತಿನ ಗೋದ್ರಾದಲ್ಲಿ ಹತ್ಯಾಕಾಂಡ ನಡೆದಾಗ ಇಡೀ ದೇಶದ ಜನತೆ ಇದನ್ನು ಖಂಡಿಸಿದೆ. ಈ ಹಿನ್ನೆಲೆಯಲ್ಲಿ ಈಗ ಬಹು ಚರ್ಚಿತ 'ಲವ್ ಜಿಹಾದ್' ಅನ್ನು ವಿಶ್ಲೇಷಿಸಿದರೆ ಇದು ಮುಸ್ಲಿಮರ ಪಿತೂರಿ ಎಂಬುದಕ್ಕಿಂತ ಭಿನ್ನವಾಗಿ ಇದನ್ನು ವಸ್ತುನಿಷ್ಠವಾಗಿ ನೋಡಬೇಕಾಗಿದೆ.

ಪ್ರಜಾಪ್ರಭುತ್ವ ಮತ್ತು ಧಾರ್ಮಿಕ ಸ್ವಾತಂತ್ರ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ ಇದೆ. ಅವರಿಗೆ ಇಷ್ಟ ಬಂದ ಧರ್ಮವನ್ನು ಅವರು ಅನುಸರಿಸಬಹುದು. ಇದರಲ್ಲಿ ಬಲಾತ್ಕಾರದ ಪ್ರಶ್ನೆ ಬರಬಾರದು. ಹಾಗೆಯೇ ಸಂವಿಧಾನ ಎಲ್ಲರಿಗೂ ಮೂಲಭೂತ ಹಕ್ಕುಗಳನ್ನು ನೀಡಿದೆ. ಇಲ್ಲಿ ಪ್ರೀತಿಸುವುದು, ಮದುವೆಯಾಗುವುದು ಹುಡುಗ–ಹುಡುಗಿಯರ



ವೈಯಕ್ತಿಕ ಸ್ವಾತಂತ್ರ್ಯ ಮತ್ತು ಅವರ ಸಂವಿಧಾನ ಬದ್ಧವಾದ ಮೂಲಭೂತ ಹಕ್ಕು. ಇದನ್ನು ಅಲ್ಲಗಳೆಯುವ ಅಥವಾ ನಿರಾಕರಿಸುವ ಅಧಿಕಾರ ಯಾರಿಗೂ ಇಲ್ಲ. 'ಲವ್ ಜಿಹಾದ್' ಅನ್ನು ವ್ಯವಸ್ಥಿತವಾಗಿ ಬಲವಂತದಿಂದ ಮುಸ್ಲಿಮರು ನಡೆಸುತ್ತಿದ್ದಾರೆಂದು ಹೇಳುತ್ತಿರುವವರು ಅದು ಕರ್ನಾಟಕದಲ್ಲಾಗಲಿ, ಬೇರೆ ಎಲ್ಲಿಯೇ ಆಗಲೀ ಬಲವಂತದಿಂದ ಮದುವೆಯಾಗಿ ಮತಾಂತರಗೊಳಿಸಿದ್ದಾರೆಂಬುದಕ್ಕೆ ಯಾವುದೇ ಪುರಾವೆಗಳನ್ನು ನೀಡಿಲ್ಲ. ಹೀಗಾಗಿ ಒಂದು ನಿರ್ದಿಷ್ಟಧರ್ಮೀಯರನ್ನು ಹಿಂದೂ ಧರ್ಮದ ವಿರೋಧಿಗಳೆಂದು ಗುಮಾನಿ ಸೃಷ್ಟಿಸಿ ಅಪಪ್ರಚಾರ ನಡೆಸಿ ಕೋಮುವಾದಿ ರಾಜಕೀಯ ಮಾಡುತ್ತಿರುವುದು ಆಘಾತಕಾರಿ ದ್ವೇಷಪೂರಿತ ಮತ್ತು ದುರುದ್ದೇಶಪೂರಿತ ಎಂದು ಹೇಳಬೇಕಾಗುತ್ತದೆ.

ಪುರುಷ ಪ್ರಧಾನ ಮೌಲ್ಯಗಳು

ಇನ್ನೊಂದು ಮುಖ್ಯ ಪ್ರಶ್ನೆಯನ್ನು ನಾವು ಇಲ್ಲಿ ಪರಿಶೀಲಿಸಬೇಕಾಗಿದೆ. ಪುರುಷ ಪ್ರಧಾನ ಮೌಲ್ಯಗಳನ್ನು 'ರಕ್ತಗತ' ಮಾಡಿಕೊಂಡಿರುವ ಈ ಸಮಾಜದಲ್ಲಿ ಬಹಳಷ್ಟು ಸಂದರ್ಭಗಳಲ್ಲಿ ಗಂಡನ ಧರ್ಮ ಮತ್ತು ಜಾತಿಯನ್ನೇ ಸ್ತ್ರೀಯರು ಒಪ್ಪಬೇಕಾಗುತ್ತದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಸ್ತ್ರೀಯರಿಗೆ ಆ ಧರ್ಮದ ಅಥವಾ ಆ ಜಾತಿಯ ಬಗ್ಗೆ ಇಷ್ಟವಿಲ್ಲದಿದ್ದರೂ ಸಹ. ಇಲ್ಲಿರುವುದು ಪುರುಷ ಪ್ರಧಾನ ಮೌಲ್ಯಗಳ ಪ್ರಶ್ನೆ. ಉದಾ: ಒಬ್ಬ ಮುಸ್ಲಿಂ ಹುಡುಗಿ ಹಿಂದೂ ಯುವಕನನ್ನು ಪ್ರೀತಿಸಿ ಇಷ್ಟಪಟ್ಟು ಮದುವೆಯಾದರೆ ಆ ಮಹಿಳೆಯನ್ನು ಮುಸ್ಲಿಂ ಎಂದು ಪರಿಗಣಿಸಲಾಗುತ್ತದೆಯಾ? ಅಥವಾ ಒಬ್ಬ ಉನ್ನತ ಜಾತಿ ಹುಡುಗಿ ಕೆಳ ಜಾತಿಯ ಹುಡುಗನನ್ನು ಪ್ರೀತಿಸಿ ಮದುವೆಯಾದರೆ ಅವಳನ್ನು ಯಾರೆಂದು ಪರಿಗಣಿಸಲಾಗುತ್ತದೆ? ಅದಕ್ಕಿಂತ ಮುಖ್ಯವಾಗಿ ಅಂತರ್‌ಧರ್ಮೀಯ ಅಂತರ್‌ಜಾತೀಯ ಮದುವೆಗಳಾದಾಗ ಹೀಗೆ ಬೇರೆ ಬೇರೆ ಜಾತಿ ಅಥವಾ ಧರ್ಮದ ಗಂಡ ಹೆಂಡತಿಯರಿಗೆ ಹುಟ್ಟುವ ಮಗುವನ್ನು ಯಾವ ಜಾತಿಯೆಂದು ಪರಿಗಣಿಸಲಾಗುತ್ತದೆ? ಹಾಗೆ ಆ ಮಕ್ಕಳು ಶಾಲೆಗೆ ಪ್ರವೇಶ ಪಡೆಯುವಾಗ ಯಾವ ಜಾತಿ, ಯಾವ ಧರ್ಮವನ್ನು ನಮೂದಿಸಲಾಗುತ್ತದೆ.? ನಮೂದಿಸುವುದು ತಂದೆಯ ಜಾತಿ ಮತ್ತು ಧರ್ಮವಲ್ಲವೇ? ವಾಸ್ತವ ಪರಿಸ್ಥಿತಿ ಹೀಗಿರುವಾಗ ಯಾಕೆ ಈ ಸೋಗಲಾಡಿತನ. ನಿಸ್ಸಂಶಯವಾಗಿ ರಾಜಕೀಯ ಉದ್ದೇಶಕ್ಕಾಗಿ ಭಾರತದಲ್ಲಿ ಹಿಂದೂ ಮೂಲಭೂತವಾದಿಗಳು ಹುಟ್ಟುಹಾಕಿರುವ ವಿಷಬೀಜವೇ 'ಲವ್ ಜಿಹಾದ್' ಎಂಬ ಪ್ರಚಾರ. ಅದು ಅಲ್ಲ ಅನ್ನುವದಾದರೂ ಹೇಗೆ? ಉತ್ತರ ಪ್ರದೇಶ ಮತ್ತು ದೇಶದ ಇತ–ರೇ ಭಾಗಗಳಲ್ಲಿ ನಡೆದ ಉಪ ಚುನಾವಣೆಗಳಲ್ಲಿ ಜನತೆ ಈ 'ಲವ್ ಜಿಹಾದ್' ಕುರಿತ ಪ್ರಚಾರವನ್ನು ತಿರಸ್ಕರಿಸಿದ್ದಾರೆ. ಪ್ರತ್ಯೇಕವಾಗಿ 'ಲವ್ ಜಿಹಾದ್' ಕುರಿತು ಬಾರಿ ಪ್ರಚಾರ ನಡೆಸಲಾದ ಉತ್ತರ ಪ್ರದೇಶದಲ್ಲಿ ಅಲ್ಲಿನ 13 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಪಕ್ಷ ಕೇವಲ 03 ಸ್ಥಾನಗಳನ್ನು ಪಡೆಯಿತು. ಈ ಬಗ್ಗೆ ಚುನಾವಣಾ ಫಲಿತಾಂಶದ ವಿಶ್ಲೇಷಣೆ ಮಾಡಿ ಉತ್ತರ ಪ್ರದೇಶದಲ್ಲಿ ಉಪ ಚುನಾವಣೆಗಳ ಸೋಲಿಗೆ ಅಲ್ಲಿ ನಡೆಸಿದ ಅತಿರೇಕದ 'ಲವ್ ಜಿಹಾದಿ ಪ್ರಚಾರ'ವೇ ಕಾರಣವೆಂದು ಬಿಜೆಪಿ ಒಪ್ಪಿಕೊಂಡಿದೆ. ಹಾಗಿದ್ದರೆ ಬಿಜೆಪಿ ಇದನ್ನು ಒಪ್ಪಿಕೊಂಡಿದ್ದೇಕೆ?

ಸೋಗಲಾಡಿತನದ ಮಂಕುಬೂದಿ

ಹಿಂದುತ್ವವಾದಿಗಳು ಈಗ ತಮಗೆ ಸಿಕ್ಕಿರುವ ಅವಕಾಶವನ್ನು ಉಪಯೋಗಿಸಿ ದೇಶದ ಐಕ್ಯತೆ, ಸಮಗ್ರತೆಗೆ ಜಾತ್ಯಾತೀತ ತತ್ವಗಳಿಗೆ ಮತ್ತು ಪ್ರಜಾಪ್ರಭುತ್ವಕ್ಕೆ ಗಂಡಾಂತರಕಾರಿಯಾಗುತ್ತಿದ್ದಾರೆ. ನರೇಂದ್ರಮೋದಿಯವರು ಸೋಗಲಾಡಿತನವನ್ನು ಪ್ರದರ್ಶಿಸಿ ದೇಶದ ಜನರನ್ನು ಭ್ರಮೆಗಳಲ್ಲಿ ತೇಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದ–ರೆ ಅವರ ನಿಜ ಸ್ವರೂಪ ಬಯಲಾಗುವ ಎಲ್ಲಾ ಸಂಕೇತಗಳನ್ನು ಈಗಾಗಲೇ ಸಿಗುತ್ತಿವೆ. "ಭಾರತದ ಮುಸ್ಲಿಮರು ಎಂದೂ ಅಲ್‌ಖೈದಾ ಸಿದ್ಧಾಂತವನ್ನು ಒಪ್ಪುವುದಿಲ್ಲ. ಅವರು ಭಾರತದಲ್ಲಿಯೇ ಹುಟ್ಟಿದ್ದಾರೆ. ಈ ದೇಶಕ್ಕೋಸ್ಕರ ಸಾಯುತ್ತಾರೆ." ಎಂದು ನರೇಂದ್ರ ಮೋದಿಯವರು ಹೇಳಿರುವುದು ಸ್ವಾಗತಾರ್ಹ. ಆದರೆ 'ಲವ್ ಜಿಹಾದ್'ನ ಪ್ರಚಾರದಿಂದ ಆಗುತ್ತಿರುವ ಪರಿಣಾಮವನ್ನು ಪರಿಶೀಲಿಸಿ ಅದನ್ನು ನಿಲ್ಲಿಸಿಯೆಂದು ನರೇಂದ್ರ ಮೋದಿ ಯಾಕೆ ಹೇಳಲಿಲ್ಲ? ಮೋದಿ ಇತ್ತೀಚೆಗೆ ಜಪಾನಿಗೆ ಭೇಟಿಕೊಟ್ಟಾಗ ಅಲ್ಲಿನ ಪ್ರಧಾನಮಂತ್ರಿಗೆ ಕೊಟ್ಟ ಉಡುಗೊರೆ ಏನು? 'ಭಗವತ್‌ಗೀತೆ'ಯ ಪುಸ್ತಕವನ್ನಲ್ಲವೇ? ಇದು ಯಾವುದರ ಸೂಚನೆ? ಮೋದಿ ಪ್ರಾಮಾಣಿಕರಾಗಿದ್ದರೆ ಖುರಾನ್ ಅಥವಾ ಬೈಬಲ್‌ನ್ನು ಸಹ ಕೊಡಬಹುದಿತ್ತಲ್ಲ?

ಜನರನ್ನು ಮಂಕುಬೂದಿ ಎರಚಿ–ಭ್ರಮೆಗಳಲ್ಲಿ ಮುಳುಗಿಸಿ, ಹುಟ್ಟಿಸಿದ ಭ್ರಮೆಗಳಿಂದ ಹೊರಬರುವುದಕ್ಕೆ ಮೊದಲೇ ಈ ದೇಶವನ್ನು ಹಿಂದೂ ರಾಷ್ಟ್ರವನ್ನಾಗಿಸುವ ಬಹಿರಂಗ ಕಾರ್ಯಸೂಚಿಯಲ್ಲವೇ ಇದು? ಒಂದು ಕಡೆ ತಮ್ಮ ಸೈದ್ಧಾಂತಿಕ ಹಾಗೂ ರಾಜಕೀಯ ಯಜಮಾನರಾದ ಹಿಂದುತ್ವವಾದಿ ಸಂಘಪರಿವಾರಕ್ಕೆ ಅವರ ಎಲ್ಲ ಕಾರ್ಯಕ್ರಮಗಳನ್ನು ಜಾರಿಮಾಡಲು–ಈ ಶಕ್ತಿಗಳು ಎಲ್ಲಾ ರಂಗಗಳಲ್ಲೂ ಬೇರು ಬಿಡಲು ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಿಕೊಡುವುದು. ಮತ್ತೊಂದು ಕಡೆ 'ನಾನು ಎಲ್ಲರ ಪರವಾಗಿ ಎಲ್ಲರಿಗೋಸ್ಕರ ಮತ್ತು ನಾವೆಲ್ಲರೂ ಸೇರಿ ಬಲಿಷ್ಠ ರಾಷ್ಟ್ರವನ್ನು ಕಟ್ಟೋಣ'ವೆಂದು ಸಾರುವುದು. ಹೀಗೆ ದಿನ ಬೆಳಗಾದರೆ ಜನರ ಕಣ್ಣಿಗೆ ಮಂಕುಬೂದಿ ಎರಚುವ 'ಡಂಗೂರ ಸಾರುವುದು' ಮೋದಿಯವರ ಬೆನ್ನ ಹಿಂದಿನ ಸಂಘ ಪರಿವಾರದ ಅತ್ಯಂತ ಪ್ರಿಯವಾದ ದ್ವಿಮುಖ ನೀತಿ ಮತ್ತು ದಂದ್ವ ಮಾತು ಅಲ್ಲವೇ.

ಸಂವೇದನಾಶೀಲರಾದ ಭಾರತೀಯರನ್ನು ಅಷ್ಟು ಸುಲಭವಾಗಿ ಮೋದಿ ಮತ್ತು ಸಂಘ ಪರಿವಾರ ದಿಕ್ಕು ತಪ್ಪಿಸಲು ಸಾಧ್ಯವಿಲ್ಲವೆಂದು ತಿಳಿದರೆ ಒಳ್ಳೆಯದು. ●

ಪುರೋಹಿತ ಶಾಹಿ

ಪುರೋಹಿತ ಶಾಹಿಗಳ ಬೆಳೆಸಿದ್ದು ಯಾರು?
ನಾವೇನೆ ಬಹುಸಂಖ್ಯೆ ನಿಜ ತಿಳಿಯದವರು.
ಇಲ್ಲದುದ ಇದೆಯೆಂದು ಹೇಳುವುದ ನಂಬಿ
ಶತ ಶತಮಾನಗಳಿಂದ ಎಣಿಸುತಿಹೆವು ಕಂಬಿ.

– ವಿಡಂಬಾರಿ



ಚೀನಾದ ಅಧ್ಯಕ್ಷರ ಭಾರತ ಭೇಟಿ

ಭಾರತ ಮತ್ತು ಚೀನಾ ನಡುವೆ ಗಡಿವಿವಾದಗಳೂ ಸೇರಿದಂತೆ ಎಲ್ಲ ವಿವಾದಗಳನ್ನು ಕುಳಿತು ಚರ್ಚಿಸಲು ಮತ್ತು ಪರಿಹರಿಸಿಕೊಳ್ಳಲು ಮಾಡಿಕೊಂಡಿರುವ ಪರಸ್ಪರ ಒಪ್ಪಿಕೊಂಡಿರುವ ಸಾಂಸ್ಥಿಕ ವ್ಯವಸ್ಥೆಗಳು ಮುಂದುವರೆಯಬೇಕು, ಆಮೂಲಕ ನಮ್ಮ ದೇಶದ ಸಾರ್ವಭೌಮತೆ ಮತ್ತು ಭದ್ರತೆಯನ್ನು ಕಾಯ್ದುಕೊಳ್ಳುವಂತಾಗಬೇಕು, ನಮ್ಮೆರಡು ಬೃಹತ್ ದೇಶಗಳ ನಡುವೆ ಆರ್ಥಿಕ, ಸಾಂಸ್ಕೃತಿಕ ಮತ್ತು ಜನತೆಗಳ ನಡುವಿನ ಸಂಬಂಧಗಳು ಉತ್ತಮಗೊಳ್ಳಬೇಕು. ಇವು ನಮ್ಮೆರಡು ದೇಶಗಳಿಗೂ, ಜನತೆಗಳಿಗೂ ಪರಸ್ಪರ ಪ್ರಯೋಜನಕಾರಿ. ಇದು ನಮ್ಮ ವಿದೇಶಾಂಗ ವ್ಯವಹಾರಗಳ ಮಂತ್ರಿಗಳು ಸಂಸತ್ತಿನಲ್ಲಿ ಎತ್ತಿ ಹಿಡಿದಿರುವ ಭಾರತದ ವಿದೇಶಾಂಗ ಧೋರಣೆಯ 'ಸಾತತ್ಯ'ವನ್ನು ಮುಂದೊಯ್ಯುವುದರ ಮೂಲಕ ಮಾತ್ರ ಸಾಧ್ಯ.

ಸೀತಾರಾಮ್ ಯೆಚೂರಿ

ಚೀನಾದ ಅಧ್ಯಕ್ಷರೂ, ಚೀನಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳೂ ಆಗಿರುವ ಕ್ಸಿ ಜಿನ್‌ಪಿಂಗ್ ಮತ್ತು ಅವರ ಪತ್ನಿ ಪೆಂಗ್ ಲಿಯುವಾನ್ ಭಾರತಕ್ಕೆ ತಮ್ಮ ಮೂರು ದಿನಗಳ ಮೊದಲ ಅಧಿಕೃತ ಭೇಟಿ ನೀಡಿದ್ದಾರೆ. ಕ್ಸಿ ಅವರು ಈ ಸ್ಥಾನಗಳಿಗೆ 2012ರಲ್ಲಿ ಚುನಾಯಿತರಾದ ಮೇಲೆ ಅವರ ಮೊದಲ ಭೇಟಿ ಇದಾಗಿದೆ. ಹದಿನಾರು ಒಪ್ಪಂದಗಳು ಮತ್ತು ತಿಳುವಳಿಕೆ ಪತ್ರಗಳಿಗೆ ಸಹಿ ಬಿದ್ದಿದೆ. ಇವುಗಳಲ್ಲಿ ಹನ್ನೊಂದು ಕೇಂದ್ರ ಸರಕಾರದೊಂದಿಗೆ ಮತ್ತು ಉಳಿದ ಐದು ಗುಜರಾತ ಮತ್ತು ಮಹಾರಾಷ್ಟ್ರ ಸರಕಾರಗಳೊಂದಿಗೆ.

ಹೀಗೆ ಭಾರತದ ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮೊದಲ ನೂರು ಚಿಲ್ಲರೆ ದಿನಗಳಲ್ಲೇ ನರೇಂದ್ರ ಮೋದಿಯವರು ಸಾರ್ಕ್ ಗುಂಪಿನ ನೇಪಾಳದ ಮಾಜಿ ಹಿಂದೂ ರಾಜಪ್ರಭುತ್ವ ಮತ್ತು ಭೂತಾನ್ ರಾಜಪ್ರಭುತ್ವಕ್ಕೆ ಹಾಗೂ ಜಪಾನಿಗೆ ಭೇಟಿ ನೀಡಿದ್ದಾರೆ ಮತ್ತು ಆಸ್ಟ್ರೇಲಿಯಾದ ಪ್ರಧಾನ ಮಂತ್ರಿ ಟೋನಿ ಅಬ್ಬೋಟ್ ಹಾಗೂ ಚೀನೀ ಪ್ರಧಾನಿಯವರನ್ನು ಬರಮಾಡಿಕೊಂಡಿದ್ದಾರೆ. ಈಗ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಹೊರಟಿದ್ದಾರೆ. ಅಲ್ಲಿ ಅಮೆರಿಕಾದ ಅ ಧ್ಯಕ್ಷ ಬರಾಕ್ ಒಬಾಮ, ಇಸ್ರೇಲಿನ ಪ್ರಧಾನ ಮಂತ್ರಿ ನೆತನ್ಯಾಹು ಮತ್ತಿತರ ಹಲವು ಸರಕಾರದ ಮುಖ್ಯಸ್ಥರನ್ನು ಭೇಟಿ ಮಾಡಲಿದ್ದಾರೆ. ಆದ್ದರಿಂದ ದೇಶದ ವಿದೇಶಾಂಗ ಧೋರಣೆಯಲ್ಲಿ ಏನಾದರೂ ಓರೆಯಾಗಿದ್ದರೆ ನಂತರವೇ ಗೊತ್ತಾಗುವುದು. ಆದರೆ ಭಾರತದ ವಿದೇಶಾಂಗ ಧೋರಣೆ ಸರಕಾರದ ಬದಲಾವಣೆಯೊಂದಿಗೆ ಬದಲಾಗದು, ಅದರಲ್ಲಿ 'ಸಾತತ್ಯ' (ಅಂದರೆ ಮುಂದರುವರಿಕೆ)ಇರುತ್ತದೆ ಎಂದು ವಿದೇಶಾಂಗ ಮಂತ್ರಿಗಳು ಸಂಸತ್ತಿನಲ್ಲಿ ಹೇಳಿರುವುದು ದಾಖಲಾಗಿದೆ. ಈ ಬಗ್ಗೆ ಈಗಲೇ ಒಂದು ತೀರ್ಪು ನೀಡಲು ಸಾಧ್ಯವಿಲ್ಲ.

ಪ್ರಧಾನ ಮಂತ್ರಿ ಮೋದಿ ಪ್ರಧಾನ ಮಂತ್ರಿಯಾಗಿ ತನ್ನ ಮೊದಲ ನೂರು ದಿನಗಳಲ್ಲೇ ಕಳೆದ ಒಂದು ದಶಕದಲ್ಲಿ ಹಿಂದಿನ ಸರಕಾರದ ಅವಧಿಯಲ್ಲಿ ಭಾರತಕ್ಕೆ ಬಡಿದಿದ್ದ 'ಲಕ್ವ'ವನ್ನು ಬಿಡಿಸುವ 'ಪವಾಡ'ವನ್ನೇ ನಡೆಸಿರುವುದಾಗಿ ಜಪಾನಿನಂತಹ ವಿದೇಶಿ ನೆಲಗಳಲ್ಲಿ ಗುಡುಗಿದ್ದಾರೆ. ಕಾರ್ಪೊರೇಟ್ ಭಾರತ ಇದನ್ನು ಬಹಳ ಭಾವಾವೇಶದಿಂದ ಸ್ವೀಕರಿಸಿದೆ. ಹಿಂದೊಮ್ಮೆ ಇದೇ ಮಂದಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಭಾರತದ ಪರಮಾಣು ಏಕಾಂಗಿತನವನ್ನು ಮುರಿದರು, ಜಿ-20ರ ಮುಖಂಡರ ಔತಣ ಕೂಟಗಳಲ್ಲಿ ವಿಶ್ವ ನಾಯಕರ ಭುಜ-ಕ್ಕೆ ಭುಜ ತಗುಲಿಸಿ ನಿಂತರು ಎಂದೆಲ್ಲ ಹಾಡಿ ಹೊಗಳಿದ್ದರು. ಅವರೀಗ ಇಂತಹ 'ಲಕ್ವ'ವನ್ನು ಬಿಡಿಸಿಕೊಂಡು ಮೋದಿಯವರ ಪ್ರಚಾರಕ ಪ್ರಮುಖರಾಗಿದ್ದಾರೆ. ಈ ವಿಷಯದಲ್ಲಿ ಪಿಎಂ ಮೋದಿ, ಪಿಎಂ ಮನಮೋಹನ ಸಿಂಗ್‌ಗಿಂತ ಭಿನ್ನವಾದುದೇನ್ನಾದರೂ ಮಾಡಿದ್ದಾರೆಯೇ? ವಿದೇಶಾಂಗ ಧೋರಣೆಯಲ್ಲಾಗಲೀ, ನವ-ಉದಾರವಾದಿ ಆರ್ಥಿಕ ಸುಧಾರಣೆಗಳಲ್ಲಾಗಲೀ ಮೋದಿ ಸರಕಾರ ಹಿಂದಿನ ಮನಮೋಹನ ಸಿಂಗ್ ಸರಕಾರದಂತಹುದೇ ಧೋರಣೆಯ ದಿಕ್ಪಥದಲ್ಲಿಯೇ ಸಾಗಿದೆ.

ಇದನ್ನು ಭಾರತೀಯ ಮಾಧ್ಯಮಗಳ ದೊಡ್ಡ ವಿಭಾಗಗಳು ಚಪ್ಪಾಳೆ ತಟ್ಟಿ ಪ್ರತಿಧ್ವನಿಸಿವೆ. ಈಗ ಪ್ರಧಾನ ಮಂತ್ರಿ ಮೋದಿಯವರ ಈ ಹೊಸ ಸ್ವಯಂನೇಮಿತ ವಂದಿಮಾಗಧರ ಪಾತ್ರವನ್ನು ನೆರವೇರಿಸಲು ಅವರು ಅಮೆರಿಕಾದಲ್ಲಿ ಇಳಿಯುವ ಮೊದಲೇ ದೇಶದ ಪ್ರಮುಖ ಇಲೆಕ್ಟ್ರಾನಿಕ್ ವಾಹಿನಿಗಳು ಆಗಲೇ ನ್ಯೂಯಾರ್ಕಿನಲ್ಲಿ ಕಾದು ನಿಂತಿವೆ. ಟೈಂಸ್ ಚೌಕದಲ್ಲಿ ನೇರಪ್ರಸಾರಕ್ಕೆ ಸಜ್ಜಾಗಿ ನಿಂತಿವೆ.

ಇಲ್ಲಿ ಚೀನಾ ಮತ್ತು ಭಾರತದ ನಡುವೆ ಆಗಿರುವ ಒಪ್ಪಂದಗಳಲ್ಲಿ ಕೈಲಾಸ ಮಾನಸರೋವರಕ್ಕೆ ಭೇಟಿ ನೀಡಲು ಭಾರತದ ಯಾತ್ರಾರ್ಥಿಗಳಿಗೆ ಹೊಸದೊಂದು ಮಾರ್ಗವನ್ನು ತೆರೆಯುವ ಭರವಸೆಯಿದೆ. ರೈಲ್ವೇ ವಲಯದಲ್ಲಿ ಅತಿವೇಗದ ರೈಲುಗಳ ಓಡಾಟದ ಸಾಧ್ಯತೆ ಮತ್ತು ನಿರ್ವಹಣೆಗೆ ಹೆಚ್ಚಿನ ಸಹಕಾರ, ಆರ್ಥಿಕ ಮತ್ತು ವ್ಯಾಪಾರ ಸಂಬಂಧಗಳಲ್ಲಿ ಸಮತೋಲದ ಮತ್ತು ತಾಳಿಕೆಯ ಬೆಳವಣಿಗೆಗೆ ಉತ್ತೇಜನೆ, ಪರಸ್ಪರ ಮಾರುಕಟ್ಟೆಗಳಲ್ಲಿ ಶ್ರವ್ಯ/ದೃಶ್ಯ ಸಾಮಗ್ರಿಗಳ ಬೆಳವಣಿಗೆಗೆ ಹೆಚ್ಚಿನ ಸಹಕಾರ, ಗಡಿಯಾಚೆಚೆ ಆರ್ಥಿಕ ಅಪರಾಧಗಳ ವಿರುದ್ಧ ಹೋರಾಟ, ಬಾಹ್ಯಾಕಾಶ ಪರಿಶೋಧನೆ ಮುಂತಾದವು ಇವೆ.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಪ್ರಧಾನ ಮಂತ್ರಿಗಳ ಈ ಟಿಪ್ಪಣಿಗಳು ಈ ಭೇಟಿಯ ಫಲಿತಾಂಶದ ಕುರಿತು ಭಾರತದ ಅಂದಾಜನ್ನು ಹೊಂದಿವೆ:

"ನಾನು ಚೀನಾದೊಂದಿಗೆ ನಮ್ಮ ಸಂಬಂಧಗಳಿಗೆ ಹೆಚ್ಚಿನ ಮಹತ್ವವನ್ನು ಮತ್ತು ಆದ್ಯತೆಯನ್ನು ಕೊಡುತ್ತೇನೆ. ನಾವು ಎರಡು ಪ್ರಾಚೀನ ನಾಗರಿಕತೆಗಳು, ಪರಸ್ಪರ ತಡಗಿಕೊಂಡಿರುವ ಒಂದು ದೀರ್ಘ ಇತಿಹಾಸವನ್ನು ಹೊಂದಿದ್ದೇವೆ. ಚೀನಾ ನಮ್ಮ ಅತಿ ದೊಡ್ಡ ನೆರೆದೇಶ. ನನ್ನ ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳು ಮತ್ತು ವಿದೇಶಾಂಗ ಧೋರಣೆಯಲ್ಲಿ ಭಾರತದ ನೆರೆ-ಕರೆಗೆ ಒಂದು ವಿಶೇಷ ಸ್ಥಾನವಿದೆ. ನಾವಿಂದು ಜಗತ್ತಿನ ಎರಡು ಅತಿ ಹೆಚ್ಚು ಜನಸಂಖ್ಯೆಯ ದೇಶಗಳು ಮತ್ತು ಎರಡು ಅತಿ ದೊಡ್ಡ ಮೂಡಿ ಬರುತ್ತಿರುವ ಆರ್ಥಿಕಗಳು. ನಾವಿಬ್ಬರೂ ಅಭೂತಪೂರ್ವ ಪ್ರಮಾಣದಲ್ಲಿ ಮತ್ತು ವೇಗದಲ್ಲಿ ಆರ್ಥಿಕ ಪರಿವರ್ತನೆಗೆ ಒಳಗಾಗಿದ್ದೇವೆ.

ಆದ್ದರಿಂದ ಪರಸ್ಪರ ವಿಶ್ವಾಸ ಮತ್ತು ನಂಬಿಕೆಯ, ಪರಸ್ಪರರ ಸೂಕ್ಷ್ಮ ಭಾವನೆಗಳಿಗೆ ಮತ್ತು ಕಾಳಜಿಗಳಿಗೆ ಗೌರವದ, ಮತ್ತು ನಮ್ಮ ಗಡಿಗಳಲ್ಲಿ ಶಾಂತಿ ಮತ್ತು ಸ್ಥಿರತೆಯ ಒಂದು ವಾತಾವರಣ ನಮ್ಮ ಸಂಬಂಧಗಳಲ್ಲಿನ ಅಪಾರ ಸಾಧ್ಯತೆಗಳನ್ನು ಈಡೇರಿಸಿಕೊಳ್ಳಲು ಅಗತ್ಯವಾಗಿದೆ.

ನಾವು ಅದನ್ನು ಸಾಧಿಸಿದರೆ ಪರಸ್ಪರ ಆರ್ಥಿಕ ಬೆಳವಣಿಗೆಯನ್ನು ದೃಢಪಡಿಸಬಹುದು, ನಮ್ಮ ಪ್ರದೇಶದಲ್ಲಿ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಗೆ ಕೊಡುಗೆ ನೀಡಬಹುದು. ಮತ್ತು ನಾವು ಜಾಗತಿಕ ಆರ್ಥಿಕ ವ್ಯವಸ್ಥೆಗೆ ಹೊಸ ದಿಕ್ಕು ಮತ್ತು ಚೈತನ್ಯ ನೀಡಬಹುದು.

ನಮ್ಮ ಆರ್ಥಿಕ ಸಂಬಂಧಗಳು ನಮ್ಮ ಸಾಧ್ಯತೆಗಳಿಗೆ ನ್ಯಾಯ ಒದಗಿಸಿಲ್ಲ ಎಂದು ನಾವು ಒಪ್ಪಿದ್ದೇವೆ. ನಾನು ವ್ಯಾಪಾರ ನಿಧಾನಗೊಂಡಿರುವುದರ ಬಗ್ಗೆ, ವ್ಯಾಪಾರ ಅಸಮತೋಲನ ಹೆಚ್ಚುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದೇನೆ. ಚೀನಾದಲ್ಲಿ ಭಾರತೀಯ ಕಂಪನಿಗಳಿಗೆ ಮಾರುಕಟ್ಟೆ ಲಭ್ಯತೆ ಮತ್ತು ಹೂಡಿಕೆ ಅವಕಾಶಗಳಲ್ಲಿ ಅವರ ಭಾಗೀದಾರಿಕೆಯನ್ನು ಕೇಳಿದ್ದೇನೆ. ಅಧ್ಯಕ್ಷ ಕ್ಸಿಯವರು ನಮ್ಮ ಕಾಳಜಿಗಳನ್ನು ನಿಭಾಯಿಸಲು ಮೂರ್ತ ಕ್ರಮಗಳನ್ನು ಕೈಗೊಳ್ಳು ತಾನು ಬದ್ಧ ಎಂದಿದ್ದಾರೆ.

ನಮ್ಮ ಒಪ್ಪಂದಗಳು ಮತ್ತು ಇಂದಿನ ಪ್ರಕಟಣೆಗಳು ನಮ್ಮ ಭಾಗೀದಾರಿಕೆಯನ್ನು ಬಲಪಡಿಸುವ ನಮ್ಮ ಪ್ರಯತ್ನಗಳಲ್ಲಿ ಜನತೆಗಳ ನಡುವಿನ ಸಂಪರ್ಕಗಳು, ಸಂಸ್ಕೃತಿ, ಪ್ರವಾಸೋದ್ಯಮ ಮತ್ತು ಕಲೆ ಕೇಂದ್ರ ಸಂಗತಿಗಳಾಗಿವೆ ಎಂಬುದನ್ನು ಪ್ರದರ್ಶಿಸಿವೆ.

ಭಾರತದ ಜನತೆಯ ಪರವಾಗಿ, ನಾನು ನಾತು-ಲಾ ಮೂಲಕ ಕೈಲಾಸ ಮಾನಸರೋವರಕ್ಕೆ ಒಂದು ಹೊಸ ಮಾರ್ಗವನ್ನು ತೆರೆಯುವುದಕ್ಕಾಗಿ ಅಧ್ಯಕ್ಷ ಕ್ಸಿ ಯವರಿಗೆ ಕೃತಜ್ಞತೆ ವ್ಯಕ್ತಪಡಿಸುತ್ತೇನೆ. ಇದು ಈಗಿರುವ ಉತ್ತರಾಖಂಡದ ಮೂಲಕದ ಮಾರ್ಗದೊಂದಿಗೆ ಇನ್ನೊಂದು ಹೆಚ್ಚಿನ ಮಾರ್ಗವಾಗುತ್ತದೆ. ಹೊಸ ಮಾರ್ಗ ಹಲವು ಪ್ರಯೋಜನಗಳನ್ನು ಒದಗಿಸುತ್ತದೆ. ಅದು ಕೈಲಾಸ ಮಾನಸಸರೋವರಕ್ಕೆ ಒಂದು ವಾಹನಯೋಗ್ಯ ರಸ್ತೆಯನ್ನು ಲಭ್ಯಗೊಳಿಸುತ್ತದೆ. ಇದು ವಿಶೇಷವಾಗಿ ವಯಸ್ಸಾದ ಯಾತ್ರಾರ್ಥಿಗಳಿಗೆ ಪ್ರಯೋಜನಕಾರಿ. ಮಳೆಗಾಲದಲ್ಲಿ ಇದು ಒಂದು ಹೆಚ್ಚು ಸುರಕ್ಷಿತವಾದ ಪರ್ಯಾಯ ಮಾರ್ಗವನ್ನು ಒದಗಿಸುತ್ತದೆ. ಯಾತ್ರೆಯ ಅವಧಿಯನ್ನು ಇಳಿಸುತ್ತದೆ. ಮತ್ತು ಹೆಚ್ಚಿನ ಸಂಖ್ಯೆಯ ಯಾತ್ರಾರ್ಥಿಗಳು ಅಲ್ಲಿಗೆ ಹೋಗಲು ಅವಕಾಶ ಮಾಡಿಕೊಡುತ್ತದೆ.

ನಮ್ಮ ಸಹಕಾರವನ್ನು ಹೇಗೆ ಬಲಪಡಿಸುವುದು ಎಂದು ಚರ್ಚಿಸಿದಂತೆ ನಮ್ಮ ಸಂಬಂಧಗಳಲ್ಲಿ ಉಳಿದುಕೊಂಡಿರುವ ಭಿನ್ನಾಭಿಪ್ರಾಯಗಳ ಬಗ್ಗೆಯೂ ಬಿಚ್ಚುಮನಸ್ಸಿನಿಂದ ಮತ್ತು ಸ್ನೇಹಭಾವದಿಂದ ಅಭಿಪ್ರಾಯ ವಿನಿಮಯ ಮಾಡಿಕೊಂಡಿದ್ದೇವೆ.

ಗಡಿಯಲ್ಲಿ ಮತ್ತೆ-ಮತ್ತೆ ನಡೆಯುತ್ತಿರುವ ಘಟನೆಗಳ ಬಗ್ಗೆ ನಮ್ಮ ಗಂಭೀರ ಆತಂಕವನ್ನು ನಾನು ಎತ್ತಿದ್ದೇನೆ. ಗಡಿಪ್ರದೇಶದಲ್ಲಿ ಶಾಂತಿ ಮತ್ತು

ಭಾರತ ಮತ್ತು ಚೀನಾದ ನಡುವೆ ಸಂಬಂಧಗಳು ಉತ್ತಮಗೊಳ್ಳುವುದು ದಕ್ಷಿಣ ಏಶ್ಯ ಪ್ರದೇಶದಲ್ಲಿ ಮತ್ತು ಏಶ್ಯ-ಶಾಂತಸಾಗರ ಪ್ರದೇಶದಲ್ಲಿ, ಆಮೂಲಕ ಜಗತ್ತಿನಲ್ಲಿ ಶಾಂತಿ ಮತ್ತು ಭದ್ರತೆ ನೆಲೆಸುವಂತೆ ಮಾಡುವಲ್ಲಿ ಒಂದು ಬಹಳ ಮಹತ್ತಾದ ಅಂಶ ಎಂದು ಸಿಪಿಐ(ಎಂ) ಸದಾ ಹೇಳುತ್ತಲೇ ಬಂದಿದೆ.

ನೆಮ್ಮದಿ ಪರಸ್ಪರ ವಿಶ್ವಾಸ ಮತ್ತು ನಂಬಿಕೆಗೆ, ನಮ್ಮ ಸಂಬಂಧಗಳ ಸಂಪೂರ್ಣ ಸಾಧ್ಯತೆಗಳನ್ನು ಈಡೇರಿಸಕೊಳ್ಳಲು ಆವಶ್ಯಕವಾದ ಬುನಾದಿ ಎಂದು ಒಪ್ಪಿದ್ದೇವೆ. ಇದೊಂದು ಮಹತ್ವದ ತಿಳುವಳಿಕೆ. ಇದನ್ನು ಶ್ರಮವಹಿಸಿ ಪಾಲಿಸಬೇಕು. ನಮ್ಮ ಗಡಿಸಂಬಂಧಿ ಒಪ್ಪಂದಗಳು ಮತ್ತು ವಿಶ್ವಾಸ ಕುದುರಿಸುವ ಕ್ರಮಗಳು ಚೆನ್ನಾಗಿ ಕೆಲಸ ಮಾಡಿದ್ದು, ವಾಸ್ತವಿಕ ಹತೋಟಿ ರೇಖೆಯ ಬಗ್ಗೆ ಸ್ಪಷ್ಟೀಕರಣ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಳ್ಳುವ ನಮ್ಮ ಪ್ರಯತ್ನಗಳಿಗೆ ಬಹಳಷ್ಟು ಕೊಡುಗೆ ನೀಡುತ್ತದೆಂದು ಸೂಚಿಸಿದ್ದೇನೆ ಹಾಗೂ ನಿಲ್ಲಿಸಲ್ಪಟ್ಟ ಈ ರೇಖೆಯ ಸ್ಪಷ್ಟೀಕರಣದ ಪ್ರಕ್ರಿಯೆಯನ್ನು ಮತ್ತೆ ಆರಂಭಿಸಬೇಕು ಎಂದು ಅಧ್ಯಕ್ಷ ಕ್ಸಿಯವರನ್ನು ವಿನಂತಿಸಿಕೊಂಡಿದ್ದೇನೆ. ನಾವು ಗಡಿ ಪ್ರಶ್ನೆಯನ್ನು ಬೇಗನೇ ಇತ್ಯರ್ಥಗೊಳಿಸಲು ಪ್ರಯತ್ನ ನಡೆಸಬೇಕು."

ಚೀನೀ ಅಧ್ಯಕ್ಷರು ಮತ್ತು ಭಾರತದ ಪ್ರಧಾನ ಮಂತ್ರಿಗಳ ವೈಯಕ್ತಿಕ ಹೇಳಿಕೆಗಳಲ್ಲದೆ, "ಭಾರತದ ಗಣತಂತ್ರ ಮತ್ತು ಚೀನಾ ಜನತಾ ಗಣತಂತ್ರದ ನಡುವೆ ಒಂದು ನಿಕಟ ಅಭಿವೃದ್ಧಿ ಭಾಗೀದಾರಿಕೆಯನ್ನು ಕಟ್ಟುವ ಕುರಿತ ಜಂಟಿ ಹೇಳಿಕೆ'ಯನ್ನೂ ಸಪ್ಟಂಬರ್ 19ರ ಅಪರಾಹ್ನ ಪ್ರಕಟಿಸಲಾಯಿತು. ಇದರಲ್ಲಿ ಇತರ ವಿಷಯಗಳೊಂದಿಗೆ, ಪರಸ್ಪರ ದ್ವಿಪಕ್ಷೀಯ ಸಹಕಾರ ಮತ್ತು ಪ್ರಾದೇಶಿಕ ಹಾಗೂ ಅಂತರ್ರಾಷ್ಟ್ರೀಯ ಸಹಕಾರದಲ್ಲಿ ವಿವಾದದ ಬಗ್ಗೆ ಜಂಟಿ ಅಂದಾಜುಗಳ ರೂಪುರೇಷೆಯೂ ಒಳಗೊಂಡಿದೆ. (ಲೇಖಕರು ಉದ್ಧರಿಸಿದ ಆ ಜಂಟಿ ಹೇಳಿಕೆಯ ಅಂಶಗಳನ್ನು ಪಕ್ಕದ ಬಾಕ್ಸ್‌ನಲ್ಲಿ ಕೊಡಲಾಗಿದೆ–ಸಂ)

ಈ ಹೇಳಿಕೆಗಳು ಹಾಗೂ ಭಾರತ ಮತ್ತು ಚೀನಾ ಈ ಎರಡೂ ಕಡೆಯವರು ವ್ಯಕ್ತಪಡಿಸಿದ ಜಂಟಿ ಕಣ್ಣೋಟ ಎರಡು ದೇಶಗಳ ನಡುವೆ ಒಂದು ಹೆಚ್ಚು ನಿಕಟವಾದ ಉತ್ತಮ ನೆರೆಕರೆ ಸಂಬಂಧಗಳು ಮೂಡಿ ಬರಲು, ಮತ್ತು ನಮ್ಮೆರಡೂ ದೇಶಗಳ ಪರಸ್ಪರ ಕಾಳಜಿಯ ಮತ್ತು ಪ್ರಯೋಜನಕಾರಿಯಾದ ಅಂತರ್ರಾಷ್ಟ್ರೀಯ ವಿಷಯಗಳಲ್ಲಿ ಸಹಕಾರಕ್ಕೆ ಬುನಾದಿ ಹಾಕುವಂತಾಗಬೇಕು. ಭಾರತ ಮತ್ತು ಚೀನಾದ ನಡುವೆ ಸಂಬಂಧಗಳು ಉತ್ತಮಗೊಳ್ಳುವುದು ದಕ್ಷಿಣ ಏಶ್ಯ ಪ್ರದೇಶದಲ್ಲಿ ಮತ್ತು ಏಶ್ಯ–ಶಾಂತಸಾಗರ ಪ್ರದೇಶದಲ್ಲಿ, ಆಮೂಲಕ ಜಗತ್ತಿನಲ್ಲಿ ಶಾಂತಿ ಮತ್ತು ಭದ್ರತೆ ನೆಲೆಸುವಂತೆ ಮಾಡುವಲ್ಲಿ ಒಂದು ಬಹಳ ಮಹತ್ತಾದ ಅಂಶ ಎಂದು ಸಿಪಿಐ(ಎಂ) ಸದಾ ಹೇಳುತ್ತಲೇ ಬಂದಿದೆ.

ನಮ್ಮೆರಡು ದೇಶಗಳ ನಡುವೆ ಗಡಿವಿವಾದಗಳೂ ಸೇರಿದಂತೆ ಎಲ್ಲ ವಿವಾದಗಳನ್ನು ಕುಳಿತು ಚರ್ಚಿಸಲು ಮತ್ತು ಪರಿಹರಿಸಿಕೊಳ್ಳಲು ಮಾಡಿಕೊಂಡಿರುವ ಪರಸ್ಪರ ಒಪ್ಪಿಕೊಂಡಿರುವ ಸಾಂಸ್ಥಿಕ ವ್ಯವಸ್ಥೆಗಳು ಮುಂದುವರೆಯಬೇಕು. ಆಮೂಲಕ ನಮ್ಮ ದೇಶದ ಸಾರ್ವಭೌಮತೆ ಮತ್ತು ಭದ್ರತೆಯನ್ನು ಕಾಯ್ದುಕೊಳ್ಳುವಂತಾಗಬೇಕು. ನಮ್ಮೆರಡು ಬೃಹತ್ ದೇಶಗಳ ನಡುವೆ ಆರ್ಥಿಕ, ಸಾಂಸ್ಕೃತಿಕ ಮತ್ತು ಜನತೆಗಳ ನಡುವಿನ ಸಂಬಂಧಗಳು ಉತ್ತಮಗೊಳ್ಳಬೇಕು. ಇವು ನಮ್ಮೆರಡು ದೇಶಗಳಿಗೂ, ಜನತೆಗಳಿಗೂ ಪರಸ್ಪರ ಪ್ರಯೋಜನಕಾರಿ. ಇದು ನಮ್ಮ ವಿದೇಶಾಂಗ ವ್ಯವಹಾರಗಳ ಮಂತ್ರಿಗಳು ಸಂಸತ್ತಿನಲ್ಲಿ ಎತ್ತಿ ಹಿಡಿದಿರುವ ಭಾರತದ ವಿದೇಶಾಂಗ ಧೋರಣೆಯ 'ಸಾತತ್ಯ'ವನ್ನು ಮುಂದೊಯ್ಯುವುದರ ಮೂಲಕ ಮಾತ್ರ ಸಾಧ್ಯ. ■

"ಭಾರತದ ಗಣತಂತ್ರ ಮತ್ತು ಚೀನಾ ಜನತಾ ಗಣತಂತ್ರದ ನಡುವೆ ಒಂದು ನಿಕಟ ಅಭಿವೃದ್ಧಿ ಭಾಗೀದಾರಿಕೆಯನ್ನು ಕಟ್ಟುವ ಕುರಿತ ಜಂಟಿ ಹೇಳಿಕೆ'ಯ ಕೆಲವು ಅಂಶಗಳು

"ಮುಖಂಡರು ಇತ್ತೀಚಿನ ವರ್ಷಗಳಲ್ಲಿ ಭಾರತ–ಚೀನಾ ಸಂಬಂಧಗಳ ಪ್ರಗತಿಯ ಸಕಾರಾತ್ಮಕ ಮೌಲ್ಯಮಾಪನ ಮಾಡಿದರು, ಮತ್ತು ಎರಡೂ ದೇಶಗಳು ತಮ್ಮ ಸಂಬಂಧಗಳನ್ನು ಸದಾ ಒಂದು ಆಯಕಟ್ಟಿನ ಮತ್ತು ಒಟ್ಟಾರೆ ಕಣ್ಣೋಟದಿಂದ ಪರಿಗಣಿಸಿವೆ ಎಂಬುದನ್ನು ಗಮನಿಸಿದರು. ಎರಡೂ ಕಡೆಯವರು ಇಬ್ಬರೂ ಒಪ್ಪಿಕೊಂಡಿರುವ ನೀತಿಗಳಿಗೆ, ಒಮ್ಮತಕ್ಕೆ ತಾವು ಬದ್ಧ ಎಂದು ಮತ್ತೊಮ್ಮೆ ದೃಢೀಕರಿಸಿದರು ಹಾಗೂ ಶಾಂತಿ ಮತ್ತು ಸಮೃದ್ಧಿಗಾಗಿ ಆಯಕಟ್ಟಿನ ಮತ್ತು ಸಹಕಾರಿ ಭಾಗೀದಾರಿಕೆಯನ್ನು ಶಾಂತಿಯುತ ಸಹಬಾಳ್ವೆಯ ಐದು ಸೂತ್ರಗಳ ಮತ್ತು ಪರಸ್ಪರ ಗೌರವದ ಆಧಾರದಲ್ಲಿ ಹಾಗೂ ಪರಸ್ಪರರ ಕಾಳಜಿಗಳಿಗೆ, ಆಕಾಂಕ್ಷೆಗಳಿಗೆ ಸ್ಪಂದಿಸಿ ಮತ್ತಷ್ಟು ಕ್ರೋಡೀಕರಿಸಲು ಒಪ್ಪಿದರು. ಅಭಿವೃದ್ಧಿ ಹೊಂದುತ್ತಿರುವ ಮತ್ತು ಮೂಡಿಬರುತ್ತಿರುವ ಎರಡು ದೊಡ್ಡ ಆರ್ಥಿಕ ವ್ಯವಸ್ಥೆಗಳಾಗಿ ತಮ್ಮ ಅಭಿವೃದ್ಧಿ ಗುರಿಗಳು ಪರಸ್ಪರ ತಳಕು ಹಾಕಿಕೊಂಡಿವೆ ಮತ್ತು ಅವನ್ನು ಪರಸ್ಪರ ಬೆಂಬಲದ ರೀತಿಯಲ್ಲಿ ಅನುಸರಿಸಬೇಕಾಗಿದೆ ಎಂದು ಅವರು ಒಪ್ಪಿದ್ದಾರೆ. ತಂತಮ್ಮ ಬೆಳವಣಿಗೆ ಪ್ರಕ್ರಿಯೆಗಳು ಪರಸ್ಪರ ಗಟ್ಟಿಗೊಳಿಸುವಂತವು ಎಂದು ಗುರುತಿಸುತ್ತ ಅವರು ತಮ್ಮ ಪರಸ್ಪರ ಪೂರಕತೆಗಳನ್ನು ಬಳಸಿಕೊಳ್ಳಲು ಮತ್ತು ಒಂದು ನಿಕಟ ಅಭಿವೃದ್ಧಿ ಭಾಗೀದಾರಿಕೆಯನ್ನು ಕಟ್ಟಲು ಒಪ್ಪಿಕೊಂಡರು. ಈ ಅಭಿವೃದ್ಧಿ ಭಾಗೀದಾರಿಕೆಯನ್ನು ಶಾಂತಿ ಮತ್ತು ಸಮೃದ್ಧಿಗಾಗಿ ಆಯಕಟ್ಟಿನ ಮತ್ತು ಸಹಕಾರಿ ಭಾಗೀದಾರಿಕೆಯ ಒಂದು ಮೂಲ ಭಾಗವಾಗಿ ಮಾಡಲು ಒಪ್ಪಿಕೊಂಡರು. ಈ ಅಭಿವೃದ್ಧಿ ಭಾಗೀದಾರಿಕೆ ಎರಡೂ ಕಡೆಯವರ ಸಮಾನ ಹಿತಾಸಕ್ತಿಗಳಿಗೆ ಮಾತ್ರವೇ ಅಲ್ಲ, ನಮ್ಮ ಪ್ರದೇಶದ ಮತ್ತು ಜಗತ್ತಿನ ಸ್ಥಿರತೆ ಮತ್ತು ಸಮೃದ್ಧಿಗೂ ಪೂರಕವಾಗಿದೆ.

"ಎರಡೂ ಕಡೆಯವರು ರಾಜಕೀಯ ಸಂಪರ್ಕವನ್ನು ಬಲಪಡಿಸಲು, ಆಯಕಟ್ಟಿನ ವಿಶ್ವಾಸವನ್ನು ಆಳಗೊಳಿಸಲು ಮತ್ತು ಎಲ್ಲ ಹಂತಗಳಲ್ಲಿ ರಾಜಕೀಯ ಸಂವಾದ ಮತ್ತು ಸಮಾಲೋಚನೆಗಳನ್ನು ತೀಕ್ಷ್ಣಗೊಳಿಸಲು ನಿರ್ಧರಿಸಿದರು. ಈ ಉದ್ದೇಶದಿಂದ ಪ್ರಭುತ್ವ/ಸರಕಾರದ ಮುಖ್ಯಸ್ಥರ ಮಟ್ಟದಲ್ಲಿ ನಿಯಮಿತವಾಗಿ ಭೇಟಿಗಳನ್ನು ನಡೆಸಬೇಕು ಎಂದೂ ಅವರು ಒಪ್ಪಿದ್ದಾರೆ. ಎರಡೂ ದೇಶಗಳ ಮುಖಂಡರು ಬಹುಪಕ್ಷೀಯ ವೇದಿಕೆಗಳ ಸಂದರ್ಭದಲ್ಲಿ ಸಾಧ್ಯವಾದಷ್ಟು ಹೆಚ್ಚು ನಿಯಮಿತವಾಗಿ ಭೇಟಿಯಾಗುವದನ್ನು ಮುಂದುವರೆಸುತ್ತಾರೆ. ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಚೀನಾಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬೇಗನೇ ಭೇಟಿ ನೀಡುವುದನ್ನು ಸ್ವಾಗತಿಸಿದರು. ಪ್ರಧಾನ ಮಂತ್ರಿ ಮೋದಿ ಇದಕ್ಕಾಗಿ ಅಧ್ಯಕ್ಷ ಕ್ಸಿ ಜಿನ್‌ಪಿಂಗ್‌ರವರಿಗೆ ಧನ್ಯವಾದ ಹೇಳುತ್ತ ಚೀನೀ ಕಡೆಯಿಂದ ಆಹ್ವಾನವನ್ನು ಸಂತೋಷದಿಂದ ಸ್ವೀಕರಿಸುತ್ತ ಆದಷ್ಟು ಬೇಗನೇ ಚೀನಾಕ್ಕೆ ಭೇಟಿ ನೀಡಲು ಕಾದಿರುವುದಾಗಿ ಹೇಳಿದರು.

"ಎರಡೂ ಕಡೆಯವರು ಎಲ್ಲ ಬಾಕಿ ಉಳಿದಿರುವ ಭಿನ್ನಾಭಿಪ್ರಾಯಗಳನ್ನು ಶಾಂತಿಯುತ ಸಹಬಾಳ್ವೆಯ ಐದು ಸೂತ್ರಗಳ ಆಧಾರದಲ್ಲಿ ಮುತುವರ್ಜಿ ವಹಿಸಿ ಸ್ನೇಹಪೂರ್ಣ ಮಾತುಕತೆಗಳ ಮೂಲಕ, ಅವು ದ್ವಿಪಕ್ಷೀಯ ಸಂಬಂಧಗಳ ಒಟ್ಟಾರೆ ಬೆಳವಣಿಗೆಯನ್ನು ತಟ್ಟದಂತೆ ಪರಿಹರಿಸಿಕೊಳ್ಳಲು ಸಿದ್ಧ ಎಂದು ಪುನರುಚ್ಚರಿಸಿದರು.......

"ಈ ಭೇಟಿಯ ಕಾಲದಲ್ಲಿ ಎರಡೂ ಕಡೆಯವರು ಭಾರತ–ಚೀನಾ ಗಡಿ ಪ್ರಶ್ನೆಯ ಮೇಲೆ ಅಭಿಪ್ರಾಯಗಳ ವಿನಿಮಯ ಮಾಡಿಕೊಂಡರು ಮತ್ತು ದ್ವಿಪಕ್ಷೀಯ ಸಂಬಂಧಗಳ ಒಟ್ಟು ಹಿತದೃಷ್ಟಿಯಿಂದ ಮುಂದುವರೆದು ಒಂದು



ನ್ಯಾಯಯುತವಾದ, ತರ್ಕಬದ್ಧವಾದ, ಪರಸ್ಪರ ಸ್ವೀಕಾರಾರ್ಹವಾದ ಪರಿಹಾರ ಕಾಣಲು ತಾವು ಬದ್ಧ ಎಂದು ಪುನರುಚ್ಚರಿಸಿದರು. ಎಪ್ರಿಲ್ 2005ರಲ್ಲಿ ಸಹಿ ಮಾಡಿದ ಗಡಿ ಪ್ರಶ್ನೆಯ ಇತ್ಯರ್ಥಕ್ಕೆ ರಾಜಕೀಯ ಪರಿಮಿತಿಗಳು ಮತ್ತು ಮಾರ್ಗದರ್ಶಕ ನೀತಿಗಳ ಮೇಲೆ ಒಪ್ಪಂದವನ್ನು ನೆನಪಿಸಿಕೊಳ್ಳುತ್ತ ಎರಡೂ ಕಡೆಯವರು ಗಡಿ ಪ್ರಶ್ನೆಯನ್ನು ಬೇಗನೇ ಇತ್ಯರ್ಥ ಮಾಡುವುದಕ್ಕೆ ತಾವು ಬದ್ಧ ಎಂದು ಪುನರುಚ್ಚರಿಸಿದರು. ಹಾಗೂ ಇದು ಎರಡೂ ದೇಶಗಳ ಮೂಲ ಹಿತಾಸಕ್ತಿಗಳನ್ನು ಪ್ರತಿಪಾದಿಸುತ್ತದೆ ಎಂದು ತಮಗೆ ಮನವರಿಕೆಯಾಗಿರುವುದನ್ನು ವ್ಯಕ್ತಪಡಿಸಿದರು. ಗಡಿ ಪ್ರಶ್ನೆಯ ರಾಜಕೀಯ ಇತ್ಯರ್ಥಕ್ಕೆ 'ವಿಶೇಷ ಪ್ರತಿನಿಧಿಗಳ ವ್ಯವಸ್ಥೆ' ಮತ್ತು ಗಡಿಸಂಬಂಧಿ ವಿಷಯಗಳನ್ನು ನಿರ್ವಹಿಸಲು 'ಸಮಾಲೋಚನೆ ಮತ್ತು ಸಂಯೋಜನೆಯ ಕಾರ್ಯಕಾರಿ ವ್ಯವಸ್ಥೆ'ಯ ಪ್ರಯೋಜನ ಮತ್ತು ಮಹತ್ವವನ್ನು ಅವರು ಪುನರುಚ್ಚರಿಸಿದರು.

"ಭಾರತ–ಚೀನಾ ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿ ದ್ವಿಪಕ್ಷೀಯ ಸಂಬಂಧಗಳ ಬೆಳವಣಿಗೆ ಮತ್ತು ಮತ್ತಷ್ಟು ಮುಂದುವರಿಕೆಗೆ ಒಂದು ಮಹತ್ವದ ಭರವಸೆ ನೀಡುವಂತಹದ್ದು ಎಂದು ಗುರುತಿಸಲಾಯಿತು. ಗಡಿ ಪ್ರಶ್ನೆಯ ಅಂತಿಮ ಇತ್ಯರ್ಥ ಆಗುವ ವರೆಗೆ ಎರಡೂ ಕಡೆಯವರು ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿ ಕಾಪಾಡಲು ಜಂಟಿ ಪ್ರಯತ್ನಗಳನ್ನು ಮುಂದುವರೆಸುತ್ತವೆ.

"ಶಾಂತಿ, ಭದ್ರತೆ, ಅಭಿವೃದ್ಧಿ ಮತ್ತು ಸಹಕಾರ 21ನೇ ಶತಮಾನದ ಮುಖ್ಯ ಲಕ್ಷಣಗಳಾಗಬೇಕು ಎಂದು ಎರಡೂ ಕಡೆಯವರು ನಂಬಿದ್ದಾರೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಾಗಿ ಭಾರತ ಮತ್ತು ಚೀನಾ ಹವಾಮಾನ ಬದಲಾವಣೆ, ಡಬ್ಲ್ಯುಟಿಓ ದ ದೋಹಾ ಅಭಿವೃದ್ಧಿ ಸುತ್ತು, ವಿದ್ಯುತ್ ಮತ್ತು ಆಹಾರ ಭದ್ರತೆ, ಅಂತರ್ರಾಷ್ಟ್ರೀಯ ಹಣಕಾಸು ಮತ್ತು ಜಾಗತಿಕ ಆಡಳಿತದ ಸಂಸ್ಥೆಗಳ ಸುಧಾರಣೆ ಮುಂತಾದ ಹಲವು ಜಾಗತಿಕ ಮಹತ್ವದ ಪ್ರಶ್ನೆಗಳಲ್ಲಿ ಸಮಾನ ಹಿತಾಸಕ್ತಿಗಳನ್ನು ಹೊಂದಿವೆ. ಇದು ಬ್ರಿಕ್ಸ್, ಜಿ–20 ಮತ್ತು ಇತರ ವೇದಿಕೆಗಳಲ್ಲಿ ಎರಡು ಕಡೆಯವರ ನಡುವೆ ನಿಕಟ ಸಹಕಾರ ಮತ್ತು ಸಂಯೋಜನೆಯಲ್ಲಿ ಬಿಂಬಿತವಾಗಿದೆ.

"ಬಹುಧ್ರುವೀಯ ಜಗತ್ತಿಗೆ ಉತ್ತೇಜನೆ, ಆರ್ಥಿಕ ಜಾಗತೀಕರಣ, ಸಾಂಸ್ಕೃತಿಕ ವಿಭಿನ್ನತೆ ಮತ್ತು ಮಾಹಿತಿ ಕ್ರಾಂತಿ ಜಾಗತಿಕ ಅಜೆಂಡಾದಲ್ಲಿ ಪ್ರಮುಖವಾಗಿವೆ. ಅಂತರ್ರಾಷ್ಟ್ರೀಯ ಸಂಬಂಧಗಳನ್ನು ಪ್ರಜಾಸತ್ತಾತ್ಮಕ ಗೊಳಿಸಲು ಮತ್ತು ಜಾಗತಿಕ ಶಾಂತಿ, ಭದ್ರತೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ವಿಶ್ವಸಂಸ್ಥೆಯ ಕೇಂದ್ರ ಪಾತ್ರವನ್ನು ಬಲಪಡಿಸಲು ಎರಡು ಕಡೆಯವರು ಜಂಟಿ ಪ್ರಯತ್ನಗಳನ್ನು ಮಾಡುತ್ತಾರೆ.

"ಎರಡು ಕಡೆಯವರು ವಿಶ್ವಸಂಸ್ಥೆಯ ವ್ಯವಹಾರಗಳಲ್ಲಿ ಮತ್ತು ಆಡಳಿತ ರಚನೆಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹೆಚ್ಚೆಚ್ಚು ಭಾಗವಹಿಸುವಿಕೆಯೂ ಸೇರಿದಂತೆ ವಿಶ್ವಸಂಸ್ಥೆಯ ಒಂದು ಸಮಗ್ರ ಸುಧಾರಣೆಗೆ, ಆಮೂಲಕ ವಿಶ್ವಸಂಸ್ಥೆ ಪರಿಣಾಮಕಾರಿಯಾಗುವಂತೆ ಮಾಡುವುದಕ್ಕೆ ಬೆಂಬಲ ನೀಡುತ್ತಾರೆ. ಒಂದು ದೊಡ್ಡ ಅಭಿವೃದ್ಧಿಶೀಲ ದೇಶವಾಗಿ ಅಂತರ್ರಾಷ್ಟ್ರೀಯ ವ್ಯವಹಾರಗಳಲ್ಲಿ ಭಾರತದ ಸ್ಥಾನಮಾನಕ್ಕೆ ಚೀನಾ ಹೆಚ್ಚಿನ ಮಹತ್ವ ನೀಡುತ್ತದೆ, ಮತ್ತು ವಿಶ್ವಸಂಸ್ಥೆಯಲ್ಲಿ, ಭದ್ರತಾ ಸಮಿತಿಯೂ ಸೇರಿದಂತೆ ಒಂದು ಹೆಚ್ಚಿನ ಪಾತ್ರವನ್ನು ವಹಿಸುವ ಭಾರತದ ಆಕಾಂಕ್ಷೆಯನ್ನು ಅರ್ಥಮಾಡಿಕೊಳ್ಳುತ್ತದೆ ಮತ್ತು ಬೆಂಬಲಿಸುತ್ತದೆ.

"ಭಯೋತ್ಪಾದನೆಗೆ ಅದರ ಎಲ್ಲ ಸ್ವರೂಪಗಳಲ್ಲಿ ಒಂದು ದೃಢ ವಿರೋಧವನ್ನು, 'ಶೂನ್ಯ ಸಹನೆ'ಯನ್ನು ಎರಡೂ ಕಡೆಯವರು ಪುನರುಚ್ಚರಿಸಿದ್ದಾರೆ, ಮತ್ತು ಪ್ರತಿ–ಭಯೋತ್ಪಾದನೆಯಲ್ಲಿ ಸಹಕರಿಸಲು ತಮ್ಮನ್ನು ಬದ್ಧರಾಗಿಸಿಕೊಳ್ಳುತ್ತಾರೆ. ಎಲ್ಲ ಸಂಬಂಧಪಟ್ಟ ವಿಶ್ವಸಂಸ್ಥೆಯ ನಿರ್ಣಯಗಳನ್ನು, ನಿರ್ದಿಷ್ಟವಾಗಿ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ 1267, 1373, 1540 ಮತ್ತು 1624 ನಿರ್ಣಯಗಳನ್ನು ಜಾರಿಗೊಳಿಸುವ ಅಗತ್ಯದ ಮೇಲೆಯೂ ಅವರು ಒತ್ತು ನೀಡಿದರು.

"ಹವಾಮಾನ ಬದಲಾವಣೆ ಮಾನವ ಕುಲದ ಒಂದು ಸಮಾನ ಕಾಳಜಿ ಮತ್ತು 21ನೇ ಶತಮಾನದ ಅತಿ ದೊಡ್ಡ ಜಾಗತಿಕ ಸವಾಲುಗಳಲ್ಲಿ ಒಂದೆಂದು ಎರಡು ಕಡೆಯವರು ಗುರುತಿಸುತ್ತಾರೆ. ಅದನ್ನು ಅಂತರ್ರಾಷ್ಟ್ರೀಯ ಸಹಕಾರದ ಮೂಲಕ ಮತ್ತು ತಾಳಿಕೆಯ ಅಭಿವೃದ್ಧಿಯ ಸಂದರ್ಭದಲ್ಲಿ ನಿಭಾಯಿಸಬೇಕಾಗುತ್ತದೆ. ಎರಡು ಕಡೆಯವರು 'ವಿಶ್ವಸಂಸ್ಥೆ ಹವಾಮಾನ ಬದಲಾವಣೆ ಚೌಕಟ್ಟು ಸಮಾವೇಶ'ದ ಅಡಿಯಲ್ಲಿ 2020ರ ನಂತರದ ಅವಧಿಯಲ್ಲಿ ಅದನ್ನು ಪೂರ್ಣವಾಗಿ, ಪರಿಣಾಮಕಾರಿಯಾಗಿ, ಎಡೆಬಿಡದೆ ವೃದ್ಧಿಪಡಿಸುವ ದೃಷ್ಟಿಯಿಂದ ಒಂದು ಸಮತೋಲದ, ಸಮಗ್ರವಾದ ಮತ್ತು ಸಮತ್ವಪೂರ್ಣ ಒಪ್ಪಂದವನ್ನು ಸಾಧಿಸಲು ಇತರ ದೇಶಗಳೊಡಗೂಡಿ ಬಹುಪಕ್ಷೀಯ ಮಾತುಕತೆಗೆ ಮುಂದಾಗುತ್ತಾರೆ. 2015ರ ಒಪ್ಪಂದ ಪೂರ್ಣವಾಗಿ ಈ ಸಮಾವೇಶದ ನೀತಿಗಳು, ಅಂಶಗಳು ಮತ್ತು ರಚನೆಗೆ, ಅನುಗುಣವಾಗಿರುತ್ತದೆ, ನಿರ್ದಿಷ್ಟವಾಗಿ ಸಮತ್ವದ ನೀತಿಗೆ, ಸಮಾನ, ಆದರೆ ಭಿನ್ನೀಕರಿಸಿದ ಜವಾಬ್ದಾರಿಗಳು ಮತ್ತು ಅವರವರ ಸಾಮರ್ಥ್ಯಗಳೊಂದಿಗೆ.

"ಪ್ರಾದೇಶಿಕ ಮತ್ತು ಜಾಗತಿಕ ಮಹತ್ವದ ಹಲವಾರು ಪ್ರಶ್ನೆಗಳ ಮೇಲೆ ಕೆಲಸ ಮಾಡುವ ಮಟ್ಟದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದ್ವಿಪಕ್ಷೀಯವಾಗಿ ತೊಡಗುತ್ತಿರುವುದರ ಬಗ್ಗೆ ಎರಡು ಕಡೆಯವರು ತೃಪ್ತಿ ವ್ಯಕ್ತಪಡಿಸಿದ್ದಾರೆ. ಅಫಘಾನಿಸ್ತಾನ, ಪಶ್ಚಿಮ ಏಶ್ಯ, ಆಫ್ರಿಕ, ಮಧ್ಯ ಏಶ್ಯ ಮತ್ತು ಭಯೋತ್ಪಾದನೆಗೆ ಪ್ರತಿಯಾಗಿ ದ್ವಿಪಕ್ಷೀಯ ಸಮಾಲೋಚನೆಗಳು ಈಗಾಗಲೇ ನಡೆದಿವೆ, ಅವು ಅರ್ಥಪೂರ್ಣವಾಗಿರುವುದು ಕಂಡು ಬಂದಿದೆ.

"ಏಶ್ಯ–ಶಾಂತಸಾಗರ ಪ್ರದೇಶ ಜಾಗತಿಕ ವ್ಯವಹಾರಗಳಲ್ಲಿ ಹೆಚ್ಚೆಚ್ಚು ಮಹತ್ವದ ಪಾತ್ರ ವಹಿಸುತ್ತಿದೆ. ಎರಡು ಕಡೆಯವರ ಅಭಿಪ್ರಾಯದಲ್ಲಿ, ಈ ಪ್ರದೇಶದ ಪ್ರಸಕ್ತ ಆದ್ಯತೆಯೆಂದರೆ ಈ ಪ್ರದೇಶದ ಶಾಂತಿ ಮತ್ತು ಸ್ಥಿರತೆಯನ್ನು ಕಾಯ್ದುಕೊಳ್ಳುವುದು, ಈ ಪ್ರದೇಶದ ಸಾಮಾನ್ಯ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು, ಮತ್ತು ಅಂತರ್ರಾಷ್ಟ್ರೀಯ ಕಾನೂನಿನ ಮೂಲ ನೀತಿಗಳ ಅನುಸರಣೆಯ ಆಧಾರದಲ್ಲಿ ಒಂದು ತೆರೆದ, ಪಾರದರ್ಶಕವಾದ, ಸಮಾನವಾದ ಮತ್ತು ಒಳಗೊಳ್ಳುವ ಭದ್ರತೆ ಮತ್ತು ಸಹಕಾರದ ಚೌಕಟ್ಟನ್ನು ಸ್ಥಾಪಿಸುವುದು. ಎರಡು ಕಡೆಯವರು ಏಶ್ಯದಲ್ಲಿ ಬಹುಪಕ್ಷೀಯ ಸಹಕಾರ ಮತ್ತು ವ್ಯವಸ್ಥೆಯನ್ನು ಬೆಂಬಲಿಸುತ್ತಾರೆ ಮತ್ತು ಸಂಬಂಧಪಟ್ಟ ಪ್ರಾದೇಶಿಕ ಸಂಘಟನೆಗಳಲ್ಲಿ ಸಹಕಾರವನ್ನು ವಿಶಾಲಗೊಳಿಸಲು ಒಪ್ಪುತ್ತಾರೆ." ●

"ತೃಣಮೂಲ"ದ ಕ್ರೌರ್ಯಗಳ ವಿರುದ್ಧ

ಪಶ್ಚಿಮ ಬಂಗಾಳದಲ್ಲಿ ಎಳುತ್ತಿರುವ ಜನಚಳುವಳಿಗಳ ಅಲೆ



ಅದು ಸುನಿಯಾ ಎಂಬ ಗ್ರಾಮ. ಪೂರ್ವ ಮಿಡ್ನಾಪುರ ಜಿಲ್ಲೆ. ಆಕೆ ನಲವತ್ತೇಳು ವರ್ಷದ ಅಂಗನವಾಡಿ ಕಾರ್ಯಕರ್ತೆ. ಸಾಕಷ್ಟು ಒಳ್ಳೆ ಹೆಸರು ಗಳಿಸಿದ್ದ ಮಹಿಳೆ. ಅಕೆಯ ಒಂದೇ ಅಪರಾಧ ಎಂದರೆ ಆಕೆ ಆ ಊರಿನ ಸಿಪಿಐ(ಎಂ) ಮುಖಂಡರ ಹೆಂಡತಿಯಾಗಿರುವುದು ಮತ್ತು ಗಂಡನ ರಾಜಕೀಯ ಚಟುವಟಿಕೆಗಳಿಗೆ ಬೆಂಬಲವಾಗಿರುವುದು. ಇದೊಂದೇ ಕಾರಣವಾಗಿ ಆಗಸ್ಟ್ 17 ರ ರಾತ್ರಿ ತೃಣಮೂಲ ಗೂಂಡಾಪಡೆ ಆಕೆಯನ್ನು ಮನೆಯಿಂದ ಹೊರಗೆಳೆದು ಸಾಮೂಹಿಕ ಅತ್ಯಾಚಾರ ನಡೆಸಿ, ಕೊಂದೇ ಬಿಟ್ಟಿತು.

ಸೆಪ್ಟೆಂಬರ್ 1. ಜಲಪೈಗುರಿ ಜಿಲ್ಲೆಯ ಧೂಪ್‌ಗುರಿ ಮುನಿಸಿಪಾಲಿಟಿ ಸಮೀಪದ ಮಧ್ಯಪಾರಾ ಗ್ರಾಮದ 10 ನೇ ತರಗತಿಯ ವಿದ್ಯಾರ್ಥಿನಿಯ ಬದುಕಿನ ಕೊನೆ ಇದಕ್ಕಿಂತ ಬಹಳವೇನು ಭಿನ್ನವಾಗಿರಲಿಲ್ಲ. ಅನಿಲ್ ಬರ್ಮನ್ ರೈತರನ ಮಗಳು ಆಕೆ. ಮಹಿಕಾಲ್ ಇಸ್ಲಾಂ ಎಂಬ ಒಬ್ಬ ತೃಣಮೂಲ ಗೂಂಡಾನ ನೇತೃತ್ವದಲ್ಲಿ ಸೆ. 1 ರ ಬೆಳಿಗ್ಗೆ ದೊಡ್ಡ ಗುಂಪು ಈ ಮನೆಗೆ ನುಗ್ಗಿ ಕುಟುಂಬ ಸದಸ್ಯರನ್ನು ಬಲವಂತವಾಗಿ 'ಪಂಚಾಯ್ತಿ'ಗೆ ಕರೆದುಕೊಂಡು ಹೋಗಿತ್ತು.

ಅನಿಲ್ ಬರ್ಮನ್ ತನ್ನ ನೆರೆಯಾತನಿಂದ ಗದ್ದೆ ಉಳಲು ಪಡೆದುಕೊಂಡ 'ಪವರ್ ಟಿಲ್ಲರ್'ನ ಬಾಡಿಗೆ ವಿಷಯವಾಗಿ ವಿವಾದವೊಂದು ಉಂಟಾಗಿ-ತ್ತು. ತೃಣಮೂಲ ಕಾಂಗ್ರೆಸ್ ಪಕ್ಷದ ಚುನಾಯಿತ ಕೌನ್ಸಿಲರ್ ನೇತೃತ್ವದಲ್ಲಿ ಈ ಸಂಬಂಧ 'ಸಾಲ್ಸಿ ಸವ' ಎನ್ನುವ ಕಾಪ್ ಪಂಚಾಯ್ತಿ ಕರೆದು 40 ಸಾವಿರ ರೂ. ದಂಡ ವಿಧಿಸಿ 4 ಸಾವಿರವನ್ನು ಸ್ಥಳದಲ್ಲೇ ಕಟ್ಟ ಬೇಕೆಂದು ಒತ್ತಾಯಿಸಲಾಯಿತು. ಇಡೀ ಕುಟುಂಬದ ಸದಸ್ಯರ ಮೇಲೆ ಹಲ್ಲೆ ನಡೆಸಲಾಯಿತು. ದೊಡ್ಡ ಮಗಳು ತಮ್ಮ ಕುಟುಂಬದ ಬಗೆಗೆ ಕೆಟ್ಟ ಬಯ್ಗುಳಗಳನ್ನು ಸಹಿಸಲಿಲ್ಲ. ಪ್ರತಿಭಟಿಸಿದಳು. ಆಮೇಲೆ ಮಗಳು ಕಾಣೆಯಾದಳು. ಮರುದಿನ ಅರೆನಗ್ನ ಸ್ಥಿತಿಯಲ್ಲಿ ರೈಲ್ವೆ ಕಂಬಿಗಳ ಬಳಿ ಆಕೆಯ ಮೃತ ದೇಹ ಸಿಕ್ಕಿತು. ಆಕೆಯ ಮೇಲೆ ಸಾಮೂಹಿಕ



ಅತ್ಯಾಚಾರ ನಡೆದಿತ್ತು. ಅನಿಲ್ ಬರ್ಮನ್ ಕುಟುಂಬ ಎಡರಂಗದ ಬೆಂಬಲಿಗನಾಗಿದ್ದುದೇ ಒಂದು ಅಪರಾಧ.

ಈ ಘಟನೆಗಳು ಪಶ್ಚಿಮ ಬಂಗಾಳ ಎಂಬ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಹೇಗಿದೆ. ಅಲ್ಲಿನ ರಾಜಕೀಯ ಪರಿಸ್ಥಿತಿ ಏನಿದೆ ಎಂಬುದರ ಸಣ್ಣ ಉದಾಹರಣೆಗಳು ಅಷ್ಟೆ.

ಪ್ರತಿರೋಧ- ಪ್ರತಿಭಟನೆಗಳ ಅಲೆ

ಜನ ಎಲ್ಲಿಯವರೆಗೆ ಇಂಥ ಹೀನಾಯ ಕೃತ್ಯಗಳನ್ನು ಸಹಿಸಿಕೊಂಡಿರಲು ಸಾಧ್ಯ.!! ಬರೀ ಸಿಪಿಐ(ಎಂ)-ಎಡರಂಗದ ಸದಸ್ಯರ ಮೇಲೆ ಮಾತ್ರವೇ ಹಲ್ಲೆ ನಡೆಯುತ್ತಿರುವುದಲ್ಲ. ಆಳುವ ಪಕ್ಷದ ಎಲ್ಲ ರಾಜಕೀಯ ವಿರೋಧಿಗಳು ಮತ್ತು ಅದಕ್ಕಿಂತ ಮುಖ್ಯವಾಗಿ ಜನ ಸಾಮಾನ್ಯರ ಬದುಕಿನ ಮೇಲೆ ಕ್ರಮೇಣ ಹಲ್ಲೆಗಳು ಹೆಚ್ಚುತ್ತಿವೆ. ಹೀಗಾಗಿ ಪ್ರತಿರೋಧ-ಪ್ರತಿಭಟನೆಗಳು ಸಿಡಿದು ಬರುತ್ತಿವೆ. ನಿಧಾನವಾಗಿ ಪಶ್ಚಿಮ ಬಂಗಾಳ ಇಂತಹ ವ್ಯಾಪಕ ಪ್ರತಿರೋಧ-ಪ್ರತಿಭಟನೆಗಳಿಗೆ ಸಾಕ್ಷಿಯಾಗುತ್ತಿದೆ ಎನಿಸುತ್ತದೆ.

ಪಶ್ಚಿಮ ಬಂಗಾಳ ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ನಡೆದ ಈ ಕೆಲವು ಬೆಳವಣಿಗೆಗಳನ್ನು ಗಮನಿಸಿದರೆ ಅಲ್ಲಿನ ಘೋರ ಪರಿಸ್ಥಿತಿಯ ಬಗೆಗೆ ಆತಂಕವೂ- ಬೆಳೆದು ಬರುತ್ತಿರುವ ಪ್ರತಿರೋ ಧ ಚಳುವಳಿಯ ಬಗೆಗೆ ಒಂದಷ್ಟು ಸಂತೋಷವು ಆಗುವಂತಿದೆ.

ಶಾರದಾ ಚಿಟ್ ಫಂಡ್ ಹಗರಣವು ತೃಣಮೂಲಿಗರ ಕೊರಳಿಗೆ ಸುತ್ತಿಕೊಳ್ಳುತ್ತಾ ಹೊರಟಿರುವುದು, ಈ ಸಂಬಂಧ ಎಡರಂಗದ ಬೃಹತ್ ಪ್ರತಿಭಟನೆ, ಜಾದವ ಪುರ ವಿ.ವಿ. ವಿದ್ಯಾರ್ಥಿಗಳ ತೃಣಮೂಲ ಗೂಂಡಾ ದಾಳಿ- ವಿದ್ಯಾರ್ಥಿಗಳ ವಿಶಾಲ ಪ್ರತಿರೋಧ ಚಳುವಳಿ.. ಇವೆಲ್ಲಾ ಪಶ್ಚಿಮ ಬಂಗಾಳ ರಾಜ್ಯ ಅನುಭವಿಸುತ್ತಿರುವ ತುಮುಲ ಹಾಗೂ ಸಂಚಲನಗಳಿಗೆ ಸಾಕ್ಷಿಯಾಗಿರುವಂತೆ ಕಾಣುತ್ತಿದೆ.

ಭೀರ್ ಭೂಮ್: ಸಾಮೂಹಿಕ ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ಒಗ್ಗಟ್ಟಾದ ಜನರ ಹೋರಾಟಕ್ಕೆ ಜಯ

ಪಶ್ಚಿಮ ಬಂಗಾಳದ ಭೀರ್ ಭೂಮ್ ಜಿಲ್ಲೆಯ ಆದಿವಾಸಿ ಯುವತಿಯೊಬ್ಬಳ ಮೇಲೆ ಕೆಲವು ತಿಂಗಳ ಹಿಂದೆ ಸಾಮೂಹಿಕ ಅತ್ಯಾಚಾರ (ಗ್ಯಾಂಗ್ ರೇಪ್) ನಡೆದು ಪ್ರಕರಣದ ಮೊಕದ್ದಮೆ ಜಿಲ್ಲಾ ನ್ಯಾಯಾಲಯದಲ್ಲಿ ದಾಖಲಾಗಿತ್ತು. ಈಗ ಆ ಪ್ರಕರಣದ ತೀರ್ಪು ಹೊರ ಬಂದಿದೆ. 12 ಮಂದಿ ಆದಿವಾಸಿಗಳೂ ಸೇರಿದಂತೆ 13 ಗಂಡು ಪ್ರಾಣಿಗಳಿಗೆ 20 ವರ್ಷದ ಕಠಿಣ ಶಿಕ್ಷೆಯಾಗಿದೆ.

ಆದಿವಾಸಿ ಪಂಗಡಕ್ಕೆ ಸೇರಿದ ಯುವತಿಯೊಬ್ಬಳು ಆದಿವಾಸಿಯಲ್ಲದ ಯುವಕನೊಬ್ಬನ ಜೊತೆ ಪ್ರೀತಿ-ಸ್ನೇಹ ಇಟ್ಟುಕೊಂಡಿದ್ದಳು. ಇದರಿಂದ ಕೆರಳಿದ ಕೆಲವು ಪ್ರಭಾವಶಾಲಿ ವ್ಯಕ್ತಿಗಳು ನ್ಯಾಯ ಬಾಹಿರವಾದ ಮತ್ತು ಆದಿವಾಸಿಗಳು ಮತ್ತು ಆದಿವಾಸಿಗಳಲ್ಲದವರನ್ನೊಳಗೊಂಡ ಒಂದು ಪಂಚಾಯ್ತಿ (ಸಾಲ್ಸಿ ಸವ - ಕಾಂಗರೂ ಕೋರ್ಟ್) ಸೇರಿಸಿ, ಈ ಸಂಬಂಧವನ್ನು ಎರಡೂ ಪಂಗಡಗಳು ಮಾನ್ಯ ಮಾಡುವುದಿಲ್ಲವೆಂಬ ಸಂದೇಶ ರವಾನಿಸಿ ಇಬ್ಬರಿಗೂ ಭಾರಿ ಮೊತ್ತದ ದಂಡ ವಿಧಿಸಿದ್ದರು. ದಂಡ ತೆತ್ತ ನಂತರ ಯುವಕನನ್ನು ಬಿಡುಗಡೆ ಮಾಡಿದರು. ಆದರೆ, ದಂಡ ತೆರಲು ಸಾಮರ್ಥ್ಯವಿಲ್ಲದಿದ್ದ ಆದಿವಾಸಿ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗುವಂತೆ ಕಾಂಗರೂ ಕೋರ್ಟ್ ಮಾಡಿದ ಆದೇಶದ ಪ್ರಕಾರ ಹದಿಮೂರು ಮಂದಿ ಆ ಯುವತಿಯ ಮೇಲೆ ಅತ್ಯಾಚಾರ ಎಸಗಿದ್ದರು. ಈ ಸಂಬಂಧವಾಗಿ ಕೇಸ್ ದಾಖಲಿಸಲು ಮೊದಲು ಪೋಲೀಸ್ ನಿರಾಕರಿಸಿದ್ದರು. ಏಕೆ-ಂದರೆ ಕಾಂಗರೂ ಕೋರ್ಟ್‌ನ ಹಿಂದೆ ಆಳುವ ತೃಣಮೂಲ ಕಾಂಗ್ರೆಸ್‌ನ ಪಂಚಾಯತ್ ಸದಸ್ಯರ ಕುಮ್ಮಕ್ಕು ಇತ್ತು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಇತರ ಮಹಿಳಾ ಸಂಘಟನೆಗಳು ನಡೆಸಿದ ವ್ಯಾಪಕವಾದ ಪ್ರತಿಭಟನೆ ಮತ್ತು ಜನವಾದಿ ಮಹಿಳಾ ಸಂಘಟನೆಯು ರಾಷ್ಟ್ರೀಯ ಮಹಿಳಾ ಆಯೋಗವು ಈ ಘಟನೆಯ ಬಗ್ಗೆ ವಿಚಾರಣೆ ನಡೆಸುವಂತೆ ಅವರನ್ನು ಒತ್ತಾಯ ಮಾಡಿದ ಪರಿಣಾಮವಾಗಿ ಪೋಲೀಸರು ಎಫ್‌ಐಆರ್ ದಾಖಲಿಸಿಕೊಂಡರು. ನಂತರ, ಮಹಿಳಾ ಆಯೋಗದ ನಿಯೋಗವು ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷರಾದ ಮಾಲಿನಿ ಭಟ್ಟಾಚಾರ್ಯ ಅವರ ಜೊತೆಯಲ್ಲಿ ಆ ಊರಿಗೆ ತೆರಳಿ, ಆ ಯುವತಿಗೆ ಸಾಂತ್ವನ ಹೇಳಿ ಅವಳನ್ನು ಒಂದು ಆಶ್ರಯ ತಾಣದಲ್ಲಿ ಇರಲು ವ್ಯವಸ್ಥೆ ಮಾಡಿ, ಪೋಲೀಸ್ ವರಿಷ್ಠರನ್ನು ಭೇಟಿ ಮಾಡಿ ಈ ಪ್ರಕರಣವನ್ನು ಗಂಭೀರವಾಗಿ ತನಿಖೆ ಮಾಡಿ ಮುಂದಿನ ಕ್ರಮ ಜರುಗಿಸುವಂತೆ ಆದೇಶ ಮಾಡಿದುದರ ಪರಿಣಾಮವಾಗಿ ಈ ತೀರ್ಪು ವೇಗವಾಗಿ ಬಂದಿದೆ. ಮಹಿಳಾ ಚಳುವಳಿ ಮತ್ತು ಜನವಾದಿ ಮಹಿಳಾ ಸಂಘಟನೆಯ ಮಧ್ಯ ಪ್ರವೇಶ ಮತ್ತು ಅವರು ಬಿರುಸಿನ ಪ್ರತಿಭಟನೆ ನಡೆಸಿದ್ದರಿಂದ ಇದು ಸಾಧ್ಯವಾಗಿದೆ.

ಈ ತೀರ್ಪು ಸ್ವಾಗತಾರ್ಹವಾಗಿದೆ. ಆದ-ರೆ, ಪಶ್ಚಿಮ ಬಂಗಾಳದಲ್ಲಿ ಮಹಿಳೆಯರ ಮೇಲೆ ಆಗುತ್ತಿರುವ ಅತ್ಯಾಚಾರ, ದೌರ್ಜನ್ಯದ ಮತ್ತು ಕೊಲೆ ಪ್ರಕರಣಗಳು ಹೆಚ್ಚುತ್ತಿವೆ. ಕಾನೂನು ಪಾಲಿಸುವ ಹೊಣೆ ಹೊತ್ತಿರುವ ಪೋಲಿಸರ ನಿಶ್ಕ್ರಿಯತೆ ಮತ್ತು ಅಧಿಕಾರದ ಗದ್ದುಗೆ ಹಿಡಿದಿರುವವರ ಪಕ್ಷಪಾತದ ಧೋರಣೆಯಿಂದಾಗಿ ಇಂತಹ ಪ್ರಕರಣಗಳ ವಿಚಾರಣೆಗಳು ವಿಳಂಬವಾಗುತ್ತಿರುವುದೇ ಅಲ್ಲದೆ ನ್ಯಾಯ ದೊರಕಿಸುವ ಇಡೀ ಪ್ರಕ್ರಿಯೆಯನ್ನೇ ಬುಡಮೇಲು ಮಾಡಲಾಗುತ್ತಿದೆ. ಪುಂಡು ಪೋಕರಿಗಳು ಮತ್ತು ಸಮಾಜ ಘಾತುಕ ಶಕ್ತಿಗಳು ತಮ್ಮ ಅಟ್ಟಹಾಸ ಮೆರೆಯಲು ಹೇಳಿಮಾಡಿಸಿದಂತಹ ವಾತಾವರಣ ಈಗ ಪಶ್ಚಿಮ ಬಂಗಾಳ ರಾಜ್ಯದಲ್ಲಿ ನೆಲೆಸಿದೆ.



ಇಂತಹ ಪರಿಸ್ಥಿತಿಯಲ್ಲಿ, ಭೀರ್ ಭೂಮ್ ಸಾಮೂಹಿಕ ಅತ್ಯಾಚಾರ ಪ್ರಕರಣದ ತೀರ್ಪು ಒಂದು ಅಪವಾದದಂತೆ ಕಂಡರೂ ಸಹ ಅದು ಒಂದು ಆಶಾ ಕಿರಣದಂತಿದೆ. ಪಶ್ಚಿಮ ಬಂಗಾಳದಲ್ಲಿ ಮಾತ್ರವಲ್ಲದೆ ದೇಶದ ಉಳಿದ ರಾಜ್ಯಗಳಲ್ಲೂ ನಡೆಯುತ್ತಿರುವ ಮಹಿಳೆಯರ ಕೊಲೆ ಮತ್ತು ಅವರ ಮೇಲೆ ಎಸಗುತ್ತಿರುವ ಅತ್ಯಾಚಾರ/ ದೌರ್ಜನ್ಯದ ವಿರುದ್ಧ ಹೋರಾಡಲು ಈ ತೀರ್ಪು ಉತ್ಸಾಹ ತುಂಬುತ್ತದೆ.

ಚಳುವಳಿ ನಿರತ ಜಾದವ್‌ಪುರ ವಿ.ವಿ. ವಿದ್ಯಾರ್ಥಿಗಳ ಮೇಲೆ ಮಮತಾ ಪೋಲೀಸರು ಮತ್ತು ತೃಣಮೂಲ ಗೂಂಡಾಗಳ ನಡುರಾತ್ರಿ ಹಲ್ಲೆ

- ಕೊಲ್ಕತ್ತಾದಲ್ಲಿ ವಿದ್ಯಾರ್ಥಿಗಳ ಬಾರಿ ಬಿರುಸಿನ ಪ್ರತಿಭಟನೆ -

ಜಾದವ್‌ಪುರ ವಿಶ್ವ ವಿದ್ಯಾಲಯದ ಕಲಾ ವಿಭಾಗದ ವಿದ್ಯಾರ್ಥಿನಿಯೊಬ್ಬರು ವಿಶ್ವ ವಿದ್ಯಾಲಯದ ಆವರಣದಲ್ಲಿ ಕಳೆದ ತಿಂಗಳಿನಲ್ಲಿ ನಡೆದ ಉತ್ಸವದ ಸಂದರ್ಭದಲ್ಲಿ ತನ್ನ ಮೇಲೆ ಮಾನಭಂಗದ ದೌರ್ಜನ್ಯ ನಡೆದಿದೆಯೆಂದು ದೂರು ಕೊಟ್ಟಿದ್ದರು. ಒಬ್ಬ ಯುವತಿ ವಿಶ್ವ ವಿದ್ಯಾಲಯದ ಆವರಣದಲ್ಲೇ ತನ್ನ ಮಾನಭಂಗವಾಗಿದೆ ಎಂದು ➧

ಶಾರದಾ ಚಿಟ್ ಫಂಡ್ ದಗಾಕೋರರನ್ನು ಶಿಕ್ಷಿಸುವಂತೆ ಒತ್ತಾಯಿಸಿದ ಕೊಲ್ಕತಾದ ಬೃಹತ್ ರ್‍ಯಾಲಿ



ಶಾರದಾ ಗುಂಪಿನ ಚಿಟ್ ಫಂಡ್ ಹಗರಣದಲ್ಲಿ ಮೋಸಕ್ಕೊಳಗಾಗಿರುವ ಠೇವಣಿದಾರರಿಗೆ ಪರಿಹಾರ ಒದಗಿಸುವಂತೆ ಹಾಗೂ ಈ ಹಗರಣದಲ್ಲಿ ಶಾಮೀಲಾಗಿರುವ ಆಳುವ ಪಕ್ಷದ ಮುಖಂಡರ ವಿಚಾರಣೆ ನಡೆಸಿ ಅವರಿಗೆ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ಸೆಪ್ಟೆಂಬರ್ 22ರಂದು ಕೊಲ್ಕತಾದಲ್ಲಿ ವಿಶಾಲ ಜನಸಮೂಹ ಪಾಲ್ಗೊಂಡ ಬೃಹತ್ ರ್‍ಯಾಲಿ ನಡೆದಿದೆ. ಪಶ್ಚಿಮ ಬಂಗಾಳದ ಎಡ ಪಕ್ಷಗಳು ಸಂಘಟಿಸಿದ್ದ ಈ ಬೃಹತ್ ರ್‍ಯಾಲಿಯು ಇತ್ತೀಚಿನ ದಿನಗಳಲ್ಲಿ ನಡೆದ ರ್‍ಯಾಲಿಗಳಲ್ಲಿ ಬಲು ದೊಡ್ಡದೆಂದು ಹೇಳಲಾಗುತ್ತಿದೆ. ಈ ಹಗರಣದಲ್ಲಿ ಸಹಸ್ರಾರು ಕೋಟಿ ರೂಪಾಯಿಗಳನ್ನು ನುಂಗಿ ನೀರು ಕುಡಿದಿರುವ ದಗಾಕೋರರಿಗೆ ಶಿಕ್ಷೆ ವಿಧಿಸುವಂತೆ ಒತ್ತಾಯಿಸಲು ಎಡಪಕ್ಷಗಳ ಕರೆಯ ಮೇರೆಗೆ ಹತ್ತಾರು ಸಾವಿರ ಜನರು ಕೊಲ್ಕತಾದ ಬೀದಿ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. 'ಶಾರದಾ ಸರ್ಕಾರ ಬೇಡ ಬೇಡ', 'ಸತ್ಯ ಸಂಧರು, ಈಗ ಶಾರದಾ ಸಂಧರು' , 'ಗಲಿ ಗಲಿ ಮೆ ಶೋರ್ ಹೈ, ಮಮತಾ ಬ್ಯಾನರ್ಜಿ ಚೋರ್ ಹೈ' ಮುಂತಾದ ಘೋಷಣೆಗಳು ಮೊಳಗಿದವು. ನಂತರ ನಡೆದ ಬೃಹತ್ ಸಭೆಯಲ್ಲಿ ಅವರು ಪಾಲ್ಗೊಂಡರು.

ಈ ಸಭೆಯನ್ನುದ್ದೇಶಿಸಿ ಮಾತನಾಡಿದ ಎಡರಂಗದ ಅಧ್ಯಕ್ಷರಾದ ಬಿಮಾನ್ ಬಸುರವರು ದುರ್ಗಾಪೂಜಾ ಹಬ್ಬದ ನಂತರ ಬೃಹತ್ ಪ್ರಮಾಣದ ಪ್ರತಿಭಟನಾ ಚಳುವಳಿ ಹಮ್ಮಿಕೊಳ್ಳಲಾಗುವುದು ಎಂದು ಘೋಷಿಸಿದರು. ಪಶ್ಚಿಮ ಬಂಗಾಳ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಸೂರ್ಯಕಾಂತ ಮಿಶ್ರಾರವರು ಮಾತನಾಡಿ ಈ ಹಗರಣದಲ್ಲಿ ಜನಸಾಮಾನ್ಯರ ಹಣವನ್ನು ಲಪಟಾಯಿಸಿರುವವರಿಗೆ ಉಗ್ರ ಶಿಕ್ಷೆಯಾಗಬೇಕು ಮತ್ತು ಅವರ ಆಸ್ತಿಯನ್ನು ಮುಟ್ಟುಗೋಲುಹಾಕಿಕೊಂಡು ಅದ-ರಿಂದ ಬಂದ ಹಣವನ್ನು ಠೇವಣಿದಾರರಿಗೆ ಹಿಂತಿರುಗಿಸಬೇಕೆಂದು ಮತ್ತು ಸಿ.ಬಿ.ಐ. ತನಿಖೆಯು ಯಾವುದೇ ರಾಜಕೀಯ ಒತ್ತಡ-ಕ್ಕೆ ಮಣಿಯದೆ ನಿಷ್ಪಕ್ಷಪಾತವಾಗಿರಬೇಕೆಂದೂ ಒತ್ತಾಯಿಸಿದರು.

ಹಗರಣದ ಜಾಲವು ಪಶ್ಚಿಮ ಬಂಗಾಳ, ಒಡಿಸ್ಸಾ, ಅಸ್ಸಾಂ ಸೇರಿದಂತೆ ಹಲವು ರಾಜ್ಯಗಳಲ್ಲಿ ಹರಡಿದೆ. ಲಕ್ಷಾಂತರ ಮಂದಿ ಕಳೆದುಕೊಂಡಿರುವ ಹಣದ ಮೊತ್ತವು ಇಪ್ಪತ್ತು ಸಾವಿರ ಕೋಟಿ ರೂ.ಗಳಿಗೂ ಮೀರಿದೆಯೆಂದು ಅಂದಾಜಿಸಲಾಗಿದೆ. ತೃಣಮೂಲ ಪಕ್ಷದ ಅತಿರಥ ಮಹಾರಥರು ಈ ಹಗರಣದಲ್ಲಿ ಶಾಮೀಲಾಗಿರುವುದರ ಬಗ್ಗೆ ಅನೇಕ ವರದಿಗಳು ಜಗಜ್ಜಾಹೀರಾಗಿವೆ. ಈಗಾಗಲೇ ಅನೇಕ ತೃಣಮೂಲ ನಾಯಕರು ಸಿ.ಬಿ.ಐ. ವಿಚಾರಣೆಗೆ ಒಳಗಾಗಿದ್ದಾರೆ. ಮುಕುಲ್ ರಾಯ್ ಮತ್ತು ಮಮತಾ ಬ್ಯಾನರ್ಜಿ ಸಹ ವಿಚಾರಣೆಗೊಳಗಾಗುವ ಸಂಭವ ಹೆಚ್ಚಾಗಿವೆ.

ಹಗರಣದ ಬಗ್ಗೆ ನಡೆಯುತ್ತಿರುವ ಸಿ.ಬಿ.ಐ. ವಿಚಾರಣೆಯು ತಾರ್ಕಿಕ ಹಂತ ಮುಟ್ಟುತ್ತದೆಯೋ ಇಲ್ಲವೋ, ತಪ್ಪಿತಸ್ತರಿಗೆ ಶಿಕ್ಷೆಯಾಗುತ್ತದೆಯೋ ಇಲ್ಲವೋ ಎಂಬದು ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ನರೇಂದ್ರ ಮೋದಿ ಸರ್ಕಾರದ ರಾಜಕೀಯ ಹವಣಿಕೆಯ ಮೇಲೆ ನಿಂತಿದೆ ಎಂಬುದು ವೀಕ್ಷಕರ ಅಂದಾಜು.

➧ ದೂರು ಕೊಡುವುದು ಎಂತಹ ಗಂಭೀರವಾದ ವಿಚಾರ.!! ಆದರೆ ಕೊಟ್ಟ ದೂರನ್ನು ಉಪ ಕುಲಪತಿ ಮುಚ್ಚಿಟ್ಟರು. ಯಾವ ಕ್ರಮವನ್ನೂ ವಹಿಸಲಿಲ್ಲ. ವಿದ್ಯಾರ್ಥಿಗಳು ಈ ನಿಷ್ಕ್ರಿಯತೆ ವಿರುದ್ದ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ನಂತರವೂ ಉಪ ಕುಲಪತಿಗಳು ಪ್ರಕರಣದ ತನಿಖೆಗೆ ಮುಂದಾಗಲಿಲ್ಲ. ವಿದ್ಯಾರ್ಥಿಗಳು ಹೋರಾಟಕ್ಕೆ ಮುಂದಾದರು. ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಸಭೆ ಸೇರುವ ಸಂದರ್ಭದಲ್ಲಿ ಅವರು ಆಡಳಿತ ಕಚೇರಿಯ ಮುಂದೆ ಪ್ರತಿಭಟನಾ ಧರಣಿ ಆರಂಭಿಸಿದರು. ಪ್ರತಿಭಟನಾ ಕಾರ್ಯಕ್ರಮ ನೂರೈವತ್ತು ಘಂಟೆಗಳ ಕಾಲ ನಡೆಯಿತು. ಆದರೂ ಪ್ರಯೋಜನವಾಗಲಿಲ್ಲ. ಮಾನಭಂಗದ ಆರೋಪದ ವಿಷಯದಲ್ಲಿ ಕ್ರಮ ವಹಿಸುವ ಬದಲಿಗೆ ಆಗಿದ್ದೇನು? ವಿಶ್ವವಿದ್ಯಾಲಯದ ನೌಕರರ ಸಂಘದ ಪರವಾಗಿ ಬಂದ ನೌಕರರು ವಿದ್ಯಾರ್ಥಿಗಳ ಧರಣವನ್ನು ಬಲಾತ್ಕಾರದಿಂದ ಮುಗಿಸಲು ಒತ್ತಾಯಿಸಿದ್ದಾರೆ. ಈ ನೌಕರರ ಸಂಘವೋ ತೃಣಮೂಲ ಕಾಂಗ್ರೆಸ್‌ನ ನೇತೃತ್ವದ ಕಾರ್ಮಿಕ ಸಂಘಟನೆಗೆ ಸೇರಿದ್ದು. ವಿದ್ಯಾರ್ಥಿ ಚಳುವಳಿಯನ್ನು ನಿಯಂತ್ರಿಸುವ ಈ ಪರೋಕ್ಷ ವಿಧಾನವನ್ನು ವಿದ್ಯಾರ್ಥಿಗಳು ಒಪ್ಪಬಹುದೇ? ವಿದ್ಯಾರ್ಥಿಗಳು ಉಪ ಕುಲಪತಿಗಳಿಗೆ ಘೋರಾವೋ ಮಾಡಿದ್ದಾರೆ. ವಿದ್ಯಾರ್ಥಿಗಳಾದರೂ ಇನ್ನೇನು ಮಾಡಲು ಸಾಧ್ಯ.?

ಜಾಧವ ಪುರ ವಿ.ವಿ. ಉಪ ಕುಲಪತಿ ಅವಿಜಿತ್ ಚಕ್ರವರ್ತಿ ಪಶ್ಚಿಮ ಬಂಗಾಳದ ಆಳುವ ಪಕ್ಷದ ಚೇಲಾ ಎಂಬ ಅಭಿಪ್ರಾಯ ಈಗಾಗಲೇ ವ್ಯಾಪಕವಾಗಿ ಹರಡಿದೆ. ವಿದ್ಯಾರ್ಥಿನಿಯ ಮಾನಭಂಗದ ದೂರಿನ ವಿಷಯದಲಿ ಅವರ ನಡವಳಿಕೆಗಳೂ ಸಹ ಅದನ್ನು ದೃಢೀಕರಿಸುತ್ತಿದೆ. ಉಪಕುಲಪತಿಗಳು ಕಾನೂನು ರೀತಿ ಕ್ರಮ ವಹಿಸುವ ಬದಲಿಗೆ ಸೇಡಿನ ಕ್ರಮದಂತಹ ಕೆಲಸಕ್ಕೆ ಮುಂದಾಗಿದ್ದಾರೆ. ಧರಣಿ ಹೋರಾಟವನ್ನು ಮುರಿಯಲು ಉಪ ಕುಲಪತಿಗಳು ಮಧ್ಯರಾತ್ರಿ ಎರಡು ಘಂಟೆಯ ಹೊತ್ತಿನಲ್ಲಿ ಪೋಲೀಸ್

ಪುಟ 12 ಕ್ಕೆ

ಕೊಲ್ಕತ್ತಾ: ಸಾಮ್ರಾಜ್ಯಶಾಹಿ, ಯುದ್ದ ವಿರೋಧಿಸಿ ಶಾಂತಿಗಾಗಿ ಬೃಹತ್ ರ್‍ಯಾಲಿ



ಸೆಪ್ಟೆಂಬರ್ 1 ರಂದು ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್) ಲಿಬರೇಶನ್, ಫಾರ್ವರ್ಡ್ ಬ್ಲಾಕ್, ಆರ್‌ಎಸ್‌ಪಿ, ಬೋಲ್ಶೆವಿಕ್ ಪಾರ್ಟಿ ಮುಂತಾದ 15 ಎಡಪಕ್ಷಗಳು ಒಟ್ಟಿಗೆ ಸೇರಿ ಜಾಗತಿಕ ಅಧಿಪತ್ಯವನ್ನು ಸಾಧಿಸಲು ಹೊರಟಿರುವ ಆ ಮೂಲಕ ಯುದ್ದವೆಂಬ ಅಸ್ತ್ರವನ್ನು ಅಮಾನುಶವಾಗಿ ಬಳಸಿ ಅಮಾಯಕರನ್ನು ಹತ್ಯೆಗಯ್ಯುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಯ ವಿರುದ್ದ ಮತ್ತು ಜಾಗತಿಕ ಶಾಂತಿ ಸ್ಥಾಪನೆಗಾಗಿ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದರು.

ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಚಿಂತಕರು ಸಾಮ್ರಾಜ್ಯಶಾಹಿಯ ವಿರುದ್ದದ ಹೋರಾಟ ಎಂದೆಂದಿಗೂ ಜೀವಂತವಾಗಿರುತ್ತದೆ. 1945 ರ ಸೆಪ್ಟೆಂಬರ್ 1 ರಂದು ಜಗತ್ತಿನಲ್ಲಿ ಸಮಾನತೆ ಮತ್ತು ಸಹಬಾಳ್ವೆಯ ಮುಂಚೂಣಿ ನಾಯಕತ್ವವನ್ನು ವಹಿಸಿದ್ದ ಯುಎಸ್‌ಎಸ್‌ಆರ್ ಎರಡನೇ ಜಾಗತಿಕ ಯುದ್ದದಲ್ಲಿ ಸಾಮ್ರಾಜ್ಯಶಾಹಿ ಹಿಟ್ಲರ್‌ನನ್ನು ಕೆಂಬಾವುಟದ ನೇತೃತ್ವದಲ್ಲಿ ಸೋಲಿಸಿತು. ಈಗ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಯ ಕೇಂದ್ರವಾದ ಅಮೇರಿಕಾ ಐಎಸ್‌ಐಎಸ್, ತಾಲಿಬಾನ್, ಆರ್‌ಎಸ್‌ಎಸ್ ಮುಂತಾದ ಶಕ್ತಿಗಳನ್ನು ಬೆಳೆಸುತ್ತಿದೆ ಎಂದರು.

ಪಶ್ಚಿಮ ಬಂಗಾಳದ ಎಡರಂಗದ ಅಧ್ಯಕ್ಷರಾದ ಬಿಮನ್‌ಬಸು ಮತ್ತು ಪಶ್ಚಿಮ ಬಂಗಾಳದ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾಗಿರುವ ಸೂರ್ಯಕಾಂತ್ ಮಿಶ್ರ ಮಾತನಾಡಿ ಅಮೇರಿಕನ್ ಸಾಮ್ರಾಜ್ಯಶಾಹಿ ನೈಸರ್ಗಿಕ ಸಂಪತ್ತನ್ನು ಲೂಟಿಮಾಡುವ ಸಲುವಾಗಿ ಜಗತ್ತಿನ ಹಲವು ದೇಶಗಳ ನಡುವೆ ಯುದ್ದಗಳನ್ನು ಹುಟ್ಟುಹಾಕಿ ತನ್ನ ಮಧ್ಯಪ್ರವೇಶದ ಮೂಲಕ ಎಲ್ಲವನ್ನು ತನ್ನ ಕೈವಶ ಮಾಡಿಕೊಳ್ಳುವ ವ್ಯವಸ್ಥಿತ ಸಂಚನ್ನು ಹಿಂದಿನಿಂದಲೂ ರೂಡಿಸಿಕೊಂಡು ಬಂದಿದೆ. ಸಾಮ್ರಾಜ್ಯಶಾಹಿಯ ಪ್ರಭಾವ ಪ್ರತಿದಿನ ಜನರ ಬದುಕಿನ ಮೇಲೂ ಪರಿಣಾಮ ಉಂಟುಮಾಡುತ್ತಿದೆ. ಕಾರ್ಮಿಕರು, ರೈತರ ಮತ್ತು ಜನಸಾಮಾನ್ಯರ ಬದುಕಿನ ಮೇಲೂ ಪ್ರಭಾವ ಬೀರಿದೆ. ನಮ್ಮನ್ನಾಳುವ ಸರ್ಕಾರಗಳು ಜನ ಕಲ್ಯಾಣ ಕಾರ್ಯಕ್ರಮಗಳನ್ನು ಕಡಿತಗೊಳಿಸುತ್ತಿರುವುದು, ಜನರ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿರುವುದು, ಸಬ್ಸಿಡಿಗಳನ್ನು ಕ್ರಮೇಣವಾಗಿ ಕಡಿತಗೊಳಿಸುತ್ತಿರುವುದಕ್ಕೂ ಸಾಮ್ರಾಜ್ಯಶಾಹಿಗೂ ನೇರವಾದ ಸಂಬಂಧವಿದೆ ಎಂದರು.

ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಸಾಮ್ರಾಜ್ಯಶಾಹಿ ವಿರೋಧಿ- ಯುದ್ಧ ವಿರೋಧಿಯಾದ ಈ ರ್‍ಯಾಲಿ ಅಂತರಾಷ್ಟ್ರೀಯವಾಗಿ ದುಡಿಯುವ ವರ್ಗದ ಮುಂಚೂಣಿಯ ನಾಯಕ್ವದಲ್ಲಿರುವ ಎಡಪಕ್ಷಗಳ ಒಗ್ಗಟ್ಟಿನ ಪ್ರದರ್ಶನವಾಗಿದೆ. ಇದೇ ರೀತಿ ಮುಂದಿನ ದಿನಗಳಲ್ಲೂ ಮಮತಾ ಬ್ಯಾನರ್ಜಿ ಮತ್ತು ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ದವೂ ಇಂತಹುದೇ ಐತಿಹಾಸಿಕ ಹೋರಾಟಗಳನ್ನು ನಡೆಸಬೇಕಾಗಿದೆ ಎಂದರು.

ಜಿಟಿ ಜಿಟಿ ಎಂದು ಸುರಿಯುತ್ತಿರುವ ಮಳೆಯನ್ನು ಲೆಕ್ಕಿಸದೇ ಕಾರ್ಯಕರ್ತರು ಮತ್ತು ಕೊಲ್ಕತ್ತಾದ ಜನ ಕೈಯಲ್ಲಿ ಕೊಡೆಗಳನ್ನು ಹಿಡಿದು ಮೆರವಣಿಗೆಯುದ್ದಕ್ಕೂ ಸಾಗಿ ಸಾಮ್ರಾಜ್ಯಶಾಹಿಯ ವಿರುದ್ದದ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.



ಕಳೆದ ತಿಂಗಳು ಕರ್ನಾಟಕ ರಾಜ್ಯದ ಗುಲ್ಬರ್ಗದಲ್ಲಿ ಅಗಸ್ಟ್ 21ರಿಂದ 24, 2014 ವರೆಗೆ ಸಿಐಟಿಯು ನೇತೃತ್ವದ 'ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್'ನ ಜನರಲ್ ಕೌನ್ಸಿಲ್ ಸಭೆ ಹಾಗೂ ಅಪಾಯಕಾರಿ 'ಐಸಿಡಿಎಸ್ ಮಿಶನ್ ಮೋಡ್' ಬಗೆಗೆ ಹಾಗೂ ಸಂಘಟನಾತ್ಮಕ ಪ್ರಶ್ನೆಗಳ ಬಗೆಗೆ ಅಖಿಲ ಭಾರತ ಕಾರ್ಯಾಗಾರವು ಅತ್ಯಂತ ಯಶಸ್ವಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಸ್ಫೂರ್ತಿಯುತ ಬಹಿರಂಗ ಸಭೆ ಕೂಡ ನಡೆಯಿತು. ಒಂದು ವರದಿ.

–ಗುಲ್ಬರ್ಗಾದಲ್ಲಿ ಯಶಸ್ವಿ ಅ. ಭಾ. ಕಾರ್ಯಾಗಾರ–

ಅಂಗನವಾಡಿಗಳ ಖಾಸಗೀಕರಣದ ವಿರುದ್ಧ ಪ್ರತಿ–ರೋಧಕ್ಕೆ ನೌಕರರ ನಿರ್ಧಾರ

ಮಕ್ಕಳ ಮತ್ತು ತಾಯಂದಿರ ಬದುಕನ್ನೇ ನಿರ್ಲಕ್ಷಿಸುವ 'ಐಸಿಡಿಎಸ್ ಮಿಶನ್ ಮೋಡ್'

ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಭಾರತ ಸರ್ಕಾರದ ಸಹಕಾರದೊಂದಿಗೆ 1975ರಲ್ಲಿ ಜಾರಿಗೆ ಬಂದದ್ದು 'ಸಮಗ್ರ ಬಾಲ ವಿಕಾಸ ಯೋಜನೆ'. 40 ವರ್ಷಗಳ ದೀರ್ಘ ಇತಿಹಾಸವಿರುವ ಐಸಿಡಿಎಸ್



ಈಗ ಅಪಾಯಕ್ಕೆ ಸಿಲುಕಿದೆ. ಮಕ್ಕಳ ಹಕ್ಕುಗಳನ್ನು ಸರ್ಕಾರಗಳು ಪೂರ್ತಿಯಾಗಿ ಒಪ್ಪುತ್ತಿಲ್ಲ. ಜೊತೆ–ಗೆ ಹಪಾಹಪಿ ಲಾಭಕೋರತನದ ಆರ್ಥಿಕ ನೀತಿಯಿಂದಾಗಿ 'ಐಸಿಡಿಎಸ್ ಮಿಶನ್ ಮೋಡ್' ಎಂಬ ಹೆಸರಿನ ಮೂಲಕ ಮಕ್ಕಳ ಮತ್ತು ತಾಯಂದಿರ ಭವಿಷ್ಯಕ್ಕೆ ಆತಂಕ ಪ್ರಾರಂಭವಾಗಿದೆ. 2012 ರಿಂದ ಕೇಂದ್ರ ಜಾರಿಗೆ ತರುವ ಯತ್ನ ಮಾಡಿದ ಈ ನೀತಿ ವಿಶ್ವಬ್ಯಾಂಕ್ ಪ್ರಾಯೋಜಿತ ಖಾಸಗಿಕರಣವಲ್ಲದೇ ಬೇರೆನೂ ಅಲ್ಲ.

ತಾಯಿ ಮಕ್ಕಳ ಆರೋಗ್ಯ ಕಾಪಾಡುವ ಗುರಿ ಹಗುರವಾದುದಲ್ಲ. ಸರ್ಕಾರದ ಇಲಾಖೆಯು ಇದನ್ನು ಸುದೀರ್ಘಾವಧಿಯ ಹೊಣೆಗಾರಿಕೆ ತೆಗೆದುಕೊಳ್ಳಬೇಕು. ಶಾಶ್ವತ ಸ್ವರೂಪದ ಜವಾಬ್ದಾರಿಯಾಗಿ ಸರ್ಕಾರ ಯೋಜಿಸಬೇಕು. 'ತಾತ್ಕಾಲಿಕ ಗುರಿ ನಿರ್ಧರಿತ ಮಿಶನ್ ಮೋಡ್' ಯೋಜನೆ ಎಲ್ಲ ರಾಜ್ಯಗಳ ಐಸಿಡಿಎಸ್ ಅಭಿಯಾನಗಳನ್ನೂ (ಮಿಶನ್) ಸಹ ಸಂಘಸಂಸ್ಥೆಗಳ ಕಾಯ್ದೆ ಅಡಿಯಲ್ಲಿ ಸೊಸೈಟಿಯಾಗಿ ನೋಂದಾಯಿಸಿಕೊಳ್ಳಬೇಕು ಎನ್ನುತ್ತದೆ. (ರಾಜ್ಯ ಶಿಶು ಅಭಿವೃದ್ಧಿ ಸಂಘ). ಇದು ಸ್ವಾಯತ್ತ ಸಂಘವಾದ್ದರಿಂದ, ರಾಜ್ಯ ಶಿಶು ಅಭಿವೃದ್ಧಿ ಇಲಾಖೆಯ ಭಾಗವಲ್ಲವಾದ್ದರಿಂದ ಇದನ್ನು ಬೇಕಾದಾಗ ಮುಚ್ಚಲು ಅನುಕೂಲವಾಗುತ್ತದೆ. ರಾಜ್ಯ/ಜಿಲ್ಲೆ ಮತ್ತು ಪ್ರಾಜೆಕ್ಟ್ ಮಟ್ಟದಲ್ಲಿ ಪ್ರತ್ಯೇಕ ಅಭಿಯಾನ ನಿರ್ದೇಶನಾಲಯವನ್ನು ಸ್ಥಾಪಿಸುವ ಮೂಲಕ ಹೊಸ ಉದ್ಯೋಗಿಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗುವುದು ಯೋಜನೆಯ ಮತ್ತೊಂದು ಅಂಶ.

ಈ ಯೋಜನೆ ಜಾರಿಯಾಗುವುದೆಂದರೆ ತಾಯಂದಿರ, ಮಕ್ಕಳ, ಸಮುದಾಯದ ಕೇಂದ್ರವಾದ ಅಂಗನವಾಡಿಗಳು ಮತ್ತು ಅದರ ಪ್ರೇರಕ ಶಕ್ತಿ ಐಸಿಡಿಎಸ್ ಮುಚ್ಚುವ ಹುನ್ನಾರವಾಗಿದೆ ಎಂದು ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಹಾಗೂ ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಫೆಡರೇಶನ್‌ನ ರಾಷ್ಟ್ರೀಯ ಉಪಾಧ್ಯಕ್ಷೆ ಡಾ. ಹೇಮಲತಾ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಅವರು ಸಂಘಟನೆಯ ಜನರಲ್ ಕೌನ್ಸಿಲ್ ಸಭೆ ಅಂಗವಾಗಿ ನಡೆದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಯೋಜನಾ ಆಯೋಗವನ್ನು ಮುಚ್ಚಿದ್ದೇಕೆ ?





"ಮೋದಿಯವರು ಯೋಜನಾ ಆಯೋಗವನ್ನೇ ಮುಚ್ಚುವುದೆಂದರೆ ಏನರ್ಥ? 68 ವರ್ಷದ ಸ್ವತಂತ್ರ ಭಾರತದ ಇತಿಹಾಸದಲ್ಲಿ ಯೋಜನಾ ಆಯೋಗಕ್ಕೆ, ಪಂಚವಾರ್ಷಿಕ ಯೋಜನೆಗೆ ಮಹತ್ವದ ಸ್ಥಾನವಿದೆ. ಆದರೆ ಎಲ್ಲವನ್ನೂ ಮಾರುಕಟ್ಟೆ ಆರ್ಥಿಕತೆ ಮೂಲಕ ಹಾಗೂ ಲಾಭದ ಮೂಲಕ ಅಳೆಯುವ ಪ್ರ ಧಾನಿ ಮೋದಿ ಹಾಗೂ ಬಿಜೆಪಿ ಸರ್ಕಾರ ಇಂದು ಯೋಜನಾ ಆಯೋಗವೇ ಇಲ್ಲದಂತೆ ಮಾಡಿ ಆಮೂಲಕ ಐಸಿಡಿಎಸ್ ಯೋಜನೆಯ ಆರ್ಥಿಕ ಮೂಲಕ್ಕೇ ಕೊಡಲಿ ಏಟು ಕೊಡುತ್ತಿದೆ. 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ಐಸಿಡಿಎಸ್ ಯೋಜನೆಗೆ 3 ಲಕ್ಷ ಕೋಟಿ ರೂಪಾಯಿಯಷ್ಟು ಅಗತ್ಯವಿತ್ತು. ಬಜೆಟ್ಟಿನಲ್ಲಿ ನೀಡಿದ್ದು ವಾರ್ಷಿಕ ಅವಶ್ಯಕತೆಗಿಂತ ಕಾಲು ಭಾಗಮಾತ್ರ. ಅಂದ–ರೆ ಮಕ್ಕಳ, ತಾಯಂದಿರ ಆರೋಗ್ಯ, ಆಹಾರದ ಕಾಳಜಿಗೆ ಹಣ ವ್ಯಯಿಸಿದರೆ ಲಾಭ ಸಿಗುವುದಿಲ್ಲ, ಅದನ್ನು ಖಾಸಗಿಗೆ ವಹಿಸಿದರೆ 'ಮಾರುಕಟ್ಟೆ ಲಾಭ' ಸಿಗುತ್ತದೆಂಬ ದುರಾಶೆ ಇದರಲ್ಲಿದೆ ಎಂದು ಡಾ. ಹೇಮಲತಾ ವಿವರಿಸಿದರು.

ಅಧ್ಯಕ್ಷತೆಯನ್ನು ಕಾಮ್ರೇಡ್ ನೀಲಿಮಾ ಮೈತ್ರ ವಹಿಸಿದ್ದರು. ಅಂಗನವಾಡಿ ವ್ಯವಸ್ಥೆಯನ್ನು ಬಲಹೀನಗೊಳಿಸಲು ಮಿಶನ್ ಮೋಡ್ ಎಂಬ ಅಡ್ಡದಾರಿ ಯನ್ನು ಸರಕಾರ ಹಿಡಿದಿದೆ ಎಂದು ನೀಲಿಮಾ ಹೇಳಿದರು. ಪ್ರಾರಂಭದಲ್ಲಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸಿಂಧು ಪ್ರಾಸ್ತಾವಿಕ ಮಾತನಾಡಿದರು. ಸಭೆಯಲ್ಲಿ ರಾಜ್ಯ ಸಮಿತಿ ಅಧ್ಯಕ್ಷರಾದ ಎಸ್. ವರಲಕ್ಷ್ಮಿ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಪ್ರಧಾನ ಕಾರ್ಯದರ್ಶಿ ಬಸವರಾಜ್, ಅಂಗನವಾಡಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಸುನಂದಾ, ಕಾರ್ಯದರ್ಶಿ ಯಮುನಾ ಗಾಂವ್ಕರ್, ಗುಲ್ಬರ್ಗ ಜಿಲ್ಲಾ ಅಧ್ಯಕ್ಷರಾದ ಗೌರಮ್ಮ ಪಾಟೀಲ, ಕಾರ್ಯದರ್ಶಿ ಮಹದೇವಮ್ಮ, ಗಂಗಮ್ಮ ಉಪಸ್ಥಿತರಿದ್ದರು.

ಕೆಂಪು ಸಮವಸ್ತ್ರಧಾರಿಗಳ ಶಿಸ್ತುಬದ್ಧ ಮೆರವಣಿಗೆ

'ಐಸಿಡಿಎಸ್ ಮಿಶನ್ ಮೋಡ್' ಮಾದರಿಯನ್ನು ವಿರೋಧಿಸಿ, ಐಸಿಡಿಎಸ್ ಖಾಯಮಾತಿಗೆ ಒತ್ತಾಯಿಸಿ, ಮಹಿಳೆಯರ ಮೇಲಿನ ಅತ್ಯಾಚಾರ, ಲೈಂಗಿಕ ಕಿರುಕುಳ, ದೌರ್ಜನ್ಯ ತಡೆಗಟ್ಟಲು ಆಗ್ರಹಿಸಿ 23–08–2014 ರಂದು ಗುಲ್ಬರ್ಗದಲ್ಲಿ ಕೆಂಪು ಸಮವಸ್ತ್ರಧಾರಿಗಳಾದ ಅಂಗನವಾಡಿ ಕಾರ್ಯಕರ್ತೆ–ಯರು ಕೆಂಬಾವುಟದೊಂದಿಗೆ ನಡೆಸಿದ ಶಿಸ್ತುಬದ್ಧ ಮೆರವಣಿಗೆ ಹಾಗೂ ನಂತರ ನೂತನ ವಿದ್ಯಾಲಯ ಕಾಲೇಜು ಒಳ ಆವರಣದಲ್ಲಿ ನಡೆದ ಬೃಹತ್ ಬಹಿರಂಗ ಸಭೆ ಜನರನ್ನು ಸೆಳೆಯಿತು.

'ಐಸಿಡಿಎಸ್ ಯೋಜನೇತರ ಕೆಲಸ ಮಾಡುವುದಿಲ್ಲ'

ಸಂಘದ ಅ.ಭಾ. ಪ್ರಧಾನ ಕಾರ್ಯದರ್ಶಿ ಎ.ಆರ್.ಸಿಂಧು ಮಾತನಾಡಿ ದೇಶದಲ್ಲಿ ಬೆಲೆ ಏರಿಕೆಯಿಂದ ತತ್ತರಿಸಿದ ಜನತೆಗೆ ಯಾವುದೇ ಸಾಂತ್ವನ ನೀಡದ ಸರ್ಕಾರಗಳು ಇಂದಿವೆ. ಐಸಿಡಿಎಸ್ ಯೋಜನೆಯನ್ನೇ ಮುಚ್ಚಿಹಾಕುವ ಸರ್ಕಾರದ ಹುನ್ನಾರದ ವಿರುದ್ಧ ಸಿಡಿದೆದ್ದು, ಯೋಜನೆಯನ್ನು ಇಲಾಖೆಯಾಗಿ ಮಾರ್ಪಡಿಸಲು, ಇಲ್ಲಿ ದುಡಿಯುತ್ತಿರುವವರನ್ನು ಐ.ಎಲ್.ಸಿ. ಶಿಫಾರಸ್ಸಿನಂತೆ ಕನಿಷ್ಟ ಕೂಲಿ ಕಾಯ್ದೆ ವ್ಯಾಪ್ತಿಗೆ ತರಲು ಒತ್ತಾಯಿಸಲಾಗುತ್ತಿದೆ. ಆದರೆ ಸರ್ಕಾರ ಹಿಮ್ಮುಖವಾಗಿ ಚಲಿಸಿ ಮಿಶನ್ ಮೋಡ್ ಎಂಬ ತಾತ್ಕಾಲಿಕ ಭೂತವನ್ನು ನಮ್ಮೆದುರು ನಿಲ್ಲಿಸುತ್ತಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವಕ್ಕೆ, ಅಂಗನವಾಡಿ ಮೂಲ 6 ಅಂಶಗಳ ಕಾರ್ಯಕ್ರಮಕ್ಕೆ ಅಡಚಣೆಯಾಗುವ ಸರ್ವೆ, ಬಾಗ್ಯಲಕ್ಷ್ಮಿ, ಚುನಾವಣೆ, ಮುಂತಾದ ಐಸಿಡಿಎಸ್ ಯೋಜನೇತರ ಇನ್ನಿತರೇ ಇಲಾಖೆಗಳ ಕೆಲಸಗಳನ್ನು ಮಾಡುವುದಿಲ್ಲ; ಅಂಗನವಾಡಿಗಳ ಮೂಲ ಬೇರು ಐಸಿಡಿಎಸ್' ಅನ್ನು ಉಳಿಸಿಕೊಳ್ಳೋಣ' ಎಂಬ ದೃಢವಾದ ನಿರ್ಣಯ ಮಂಡಿಸಿದರು. ಕರತಾಡನದ ಮೂಲಕ ಬಹಿರಂಗ ಸಭೆ ಈ ನಿರ್ಣಯವನ್ನು ಸ್ವಾಗತಿಸಿತು.

ಜನವಾದಿ ಮಹಿಳಾ ಸಂಘಟನೆ ರಾಜ್ಯ ಅಧ್ಯಕ್ಷರಾದ ವಿ. ಗೀತಾ ತಾಯಂದಿರನ್ನು ನಿರ್ಲಕ್ಷಿಸಲಿಕ್ಕಾಗಿಯೇ ಖಾಸಗಿಕರಣದ ಜಪ ಮಾಡುವ ಸರ್ಕಾರದ ತಂತ್ರದ ವಿರುದ್ಧ ಸಂಘಟನೆಯೊಂದೇ ಅಸ್ತ್ರ ಎಂದರು. ಅತಿಥಿಗಳಾಗಿ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಚಳುವಳಿಗೆ ರೈತ ಸಂಘದ ಬೆಂಬಲ ಘೋಷಿಸಿದರು.

ಬಿಡಿಗಾಸಿಗೆ ಹೆಚ್ಚುವರಿ ಕಾರ್ಯಕರ್ತೆಯರು:

ಸಿಐಟಿಯು ರಾಜ್ಯ ಕಾರ್ಯದರ್ಶಿಗಳೂ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷರೂ ಆದ ಎಸ್. ವರಲಕ್ಷ್ಮಿ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಸರ್ಕಾರಗಳನ್ನು ನಡೆಸುವವರು ಹಗರಣ, ಭ್ರಷ್ಟಾಚಾರ, ದಬ್ಬಾಳಿಕೆ ನಡೆಸುವುದರಲ್ಲಿ ತಲ್ಲೀನರಾಗಿದ್ದಾರೆ. ಬಡ ಮಹಿಳೆಯರ, ನಿರುದ್ಯೋಗಿಗಳ, ಕಾರ್ಮಿಕರ ಗೋಳು ಕೇಳುವವರಿಲ್ಲ. ಆಕಾಶಕ್ಕೇರಿದ ಬೆಲೆಗಳಿಂದ ಹಸಿವು ಅಪೌಷ್ಟಿಕತೆ ಹೆಚ್ಚುತ್ತಿದೆ. ಕೈಯಲ್ಲಿ ಕಾಸಿಲ್ಲದೇ ತಾಯಂದಿರು ಮಕ್ಕಳನ್ನು ಸಲಹಲು ಆಗುತ್ತಿಲ್ಲ. ಇಂಥ ಕಠಿಣ ಪರಿಸ್ಥಿತಿಯಲ್ಲಿ ಒಪ್ಪತ್ತಿನೂಟವನ್ನಾದರೂ ನೀಡುವ ಅಂಗನವಾಡಿಯ ಆಹಾರವನ್ನು ಕಸಿಯಲು, ದುರ್ಬಲಗೊಳಿಸಲು, ಖಾಸಗಿ ನರ್ಸರಿ ಶಾಲೆಗಳಿಗೆ ಸರ್ಕಾರದ ಹಣವನ್ನು ವರ್ಗಾಯಿಸಲು, ಬಿಡಿಕಾಸಿಗೆ ಹೆಚ್ಚುವರಿ, ಲಿಂಕ್, ಕ್ರಶ್ ಕಾರ್ಯಕರ್ತರನ್ನು ನೇಮಿಸಲು ಸರ್ಕಾರ ಮುಂದಾಗಿರುವುದನ್ನು ಸಹಿಸುವುದಿಲ್ಲ ಎಂದರು.

ಪ್ರಾಂತ ರೈತ ಸಂಘದ ಕಾರ್ಯದರ್ಶಿ ಯು. ಬಸವರಾಜ್, ದೇಶದ ವಿವಿಧ ರಾಜ್ಯಗಳಿಂದ ಆಗಮಿಸಿದ ಮುಂದಾಳುಗಳು ಉಪಸ್ಥಿತರಿದ್ದರು. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಸುನಂದಾ ಪ್ರಾಸ್ತಾವಿಕ ಮಾತನಾಡಿದರು. ಶಾಂತಾ

ಪುಟ 14 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಿಲ್, ಗೋಡೌನ್ ಹಾಗೂ ಬಜಾರ, ಗ್ರಾಮೀಣ ಹಮಾಲಿ ಕಾರ್ಮಿಕರ ಚಳುವಳಿ



ಕಾರ್ಮಿಕ ಭವನದ ಎದುರು ರಾಜ್ಯ ಮಟ್ಟದ ಧರಣಿ ಸತ್ಯಾಗ್ರಹ

: ಅಧಿಕಾರಿಗಳೊಂದಿಗೆ ಯಶಸ್ವಿ ಸಭೆ

ಮಹೇಶ ಪತ್ತಾರ



ಎಪಿಎಂಸಿ ಹಮಾಲಿ ಕಾರ್ಮಿಕರನ್ನು ಹೊರತುಪಡಿಸಿ ರಾಜ್ಯದ ನೂರಾರು ಅಕ್ಕಿ ಗಿರಣಿ, ಎಣ್ಣೆ, ಬೇಳೆ, ರವಾ, ಹಿಟ್ಟು, ಹತ್ತಿ ಜಿನ್ನಿಂಗ್ ಮಿಲ್‌ಗಳಲ್ಲಿ, ಸರ್ಕಾರಿ ಸ್ವಾಮ್ಯದ ಎಫ್‌ಸಿಐ ಗೋಡಾನ್, ಸೆಂಟ್ರಲ್ ಮತ್ತು ಸ್ಟೇಟ್ ವೇರ್ ಹೌಸ್, ಆಹಾರ ನಿಗಮ ಮತ್ತು ಪಾನೀಯ ನಿಗಮ, ಅನ್ನಭಾಗ್ಯ ರೇಷ್ಮೆ ಮಾರುಕಟ್ಟೆ ಮತ್ತು ರೇಲ್ವೇ ಗೂಡ್ಸ್ ಶೆಡ್ ಹಾಗೂ ಇತರೆ ಸರ್ಕಾರಿ ಹಾಗೂ ಖಾಸಗಿ ಗೋಡಾನ್‌ಗಳಲ್ಲಿ ಲಕ್ಷಾಂತರ ಹಮಾಲಿ ಕಾರ್ಮಿಕರು ಲೋಡಿಂಗ್ ಮತ್ತು ಅನ್ ಲೋಡಿಂಗ್ ಕೆಲಸ ಮಾಡುತ್ತಿದ್ದಾರೆ. ಈ ವಿಭಾಗದ ಕಾರ್ಮಿಕರಿಗೆ ಕಾನೂನು ಬದ್ಧವಾಗಿ ಜಾರಿಯಾಗಬೇಕಾದ ಭವಿಷ್ಯನಿಧಿ, ವಿಮಾ ಸೌಲಭ್ಯ(ಇಎಸ್‌ಐ) ಗ್ರಾಚ್ಯೂಟಿ, ಅಪಘಾತ ಪರಿಹಾರ, ಬೋನಸ್ ಇತರೆ ಕಾರ್ಮಿಕ ಕಾನೂನುಗಳನ್ನು ಬಹುತೇಕ ಕಡೆ ನಿರಾಕರಿಸಲಾಗುತ್ತಿದೆ.

ನಿತ್ಯದ ಜನರ ಜೀವನಾವಶ್ಯಕ ವಸ್ತುಗಳ ವಹಿವಾಟಿನಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ನಗರ ಹಾಗೂ ಗ್ರಾಮೀಣ ಮಾರುಕಟ್ಟೆಗಳಲ್ಲಿ ಹತ್ತಾರು ವರ್ಷಗಳಿಂದ ಯಾವುದೇ ಸಾಮಾಜಿಕ ಭದ್ರತೆ, ಸೌಲಭ್ಯಗಳಿಲ್ಲದೆ ದುಡಿಯುತ್ತಿರುವ ಹಮಾಲಿ ಕಾರ್ಮಿಕರು ಅತ್ಯಂತ ಸಂಕಷ್ಟದಲ್ಲಿದ್ದಾರೆ. ಈ ಬಗ್ಗೆ ಹಲವಾರು ಮನವಿಗಳನ್ನು ನೀಡಿದ್ದರೂ ಮಾಲೀಕರು ಹಾಗೂ ಕಾರ್ಮಿಕ ಇಲಾಖೆ ಯಾವುದೇ ಕ್ರಮವಹಿಸಿಲ್ಲ.

ಇನ್ನೂ ಕಾರ್ಮಿಕರು ಹತ್ತಾರು ಬಾರಿ ಹೋರಾಟ ಮಾಡಿದ ಪರಿಣಾಮವಾಗಿ 'ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ' ಅಸ್ತಿತ್ವಕ್ಕೆ ಬಂದಿದೆ. ಆದರೆ ಈ ಮಂಡಳಿಯಿಂದ ಇದುವರೆಗೂ ಕನಿಷ್ಟ ಗುರುತಿನ ಚೀಟಿ ಸೇರಿದಂತೆ ಯಾವುದೇ ಸೌಲಭ್ಯಗಳನ್ನು ಜಾರಿಗೊಳಿಸಿಲ್ಲ. ಮಂಡಳಿ ಸಭೆಯಲ್ಲಿ ಹಲವಾರು ಸೌಲಭ್ಯಗಳನ್ನು ನೀಡಲು ತೀರ್ಮಾನ ಕೈಗೊಂಡಿದ್ದರೂ ಅಧಿಕಾರಿಗಳು ಗ್ಯಾರಂಟಿ ಇಲ್ಲದ ಕೇವಲ ನೂತನ ಪಿಂಚಣಿ ಯೋಜನೆಯೊಂದನ್ನು ಮಾತ್ರವೇ ಕಾರ್ಮಿಕರಿಗೆ ಜಾರಿ ಮಾಡಲು ಪ್ರಯತ್ನಿಸುವುದನ್ನು ಬಿಟ್ಟು ಬೇರ್ಯಾವ ಸೌಲಭ್ಯ ಜಾರಿಗೊಳಿಸುವ ಮನಸ್ಸು ಮಾಡುತ್ತಿಲ್ಲ. ಈ ಬಗ್ಗೆ ಹತ್ತಾರು ಬಾರಿ ಕಾರ್ಮಿಕ ಸಚಿವರು, ಆಯುಕ್ತರು ನಡೆಸಿದ ಸಭೆಗಳಲ್ಲಿ ಕೋರಿಕೆ ಸಲ್ಲಿಸಿದರೂ ಯಾವೊಂದು ಪ್ರಯೋಜನವಾಗಿಲ್ಲ.

ಈ ಹಿನ್ನೆಲೆಯಲ್ಲಿ ಈ ವಿಭಾಗದ ಕಾರ್ಮಿಕರು ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್(ರಿ) ಸಿಐಟಿಯು ನೇತೃತ್ವದಲ್ಲಿ ಬೆಂಗಳೂರಿನಲ್ಲಿರುವ ಕಾರ್ಮಿಕ ಆಯುಕ್ತರ ಕಚೇರಿ ಎದುರು ಕಳೆದ ಸೆಪ್ಟೆಂಬರ್ 10, 2014 ರಂದು ಧರಣಿ ಸತ್ಯಾಗ್ರಹವನ್ನು ನಡೆಸಿದರು.

ಹಮಾಲಿ ಕಾರ್ಮಿಕರ ಬೇಡಿಕೆಗಳ ಕುರಿತು ಉಪ ಕಾರ್ಮಿಕ ಆಯುಕ್ತ ನರಸಿಂಹಮೂರ್ತಿ ಹಾಗೂ ಕಾರ್ಮಿಕ ಆಯುಕ್ತರಾದ ವಿಶ್ವನಾಥ ಅವರ ಅಧ್ಯಕ್ಷತೆಯಲ್ಲಿ 2 ಸುತ್ತಿನ ಮಾತುಕತೆ ನಡೆದು ನಂತರ ಕಾರ್ಮಿಕ ಆಯುಕ್ತರಾದ ವಿಶ್ವನಾಥ ಧರಣಿ ನಿರತ ಸ್ಥಳಕ್ಕೆ ಆಗಮಿಸಿ ಕಾನೂನುಬದ್ಧವಾದ ತಮ್ಮ ಬೇಡಿಕೆಗಳನ್ನು ಈಡೇರಿಸಲು ಅಗತ್ಯ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ನಂತರ ಧರಣಿ ವಾಪಸ್ ಪಡೆಯಲಾಯಿತು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನ ಕುಮಾರ, ರಾಜ್ಯ ಕಾರ್ಯದರ್ಶಿ ಸೈಯದ ಮುಜೀಬ್, ಹಮಾಲಿ ಕಾರ್ಮಿಕರ ಫೆಡರೇಷನ್ ರಾಜ್ಯ ಅಧ್ಯಕ್ಷರಾದ ಕೆ.ಮಹಾಂತೇಶ, ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ ಧರಣಿಯಲ್ಲಿ ಮಾತನಾಡಿದರು. ಎ.ಹುಲಿಗೆಪ್ಪ, ಎನ್.ಎಲ್.ತಿಮ್ಮಣ್ಣ, ಗುರುಸಿದ್ದಪ್ಪ ಅಂಬಿಗೇರ, ಸಿದ್ದು ಬಾಗಲಕೋಟ. ಲಾಲಸಾಬ ದಳವಾಯಿ, ಯಲ್ಲಪ್ಪ ಗೋಕಾಕ, ನಾಗಪ್ಪ ನಾಯಕ, ವಿನಾಯಕ ಕುರುಬರ, ಗೋವಿಂದಪ್ಪ ಸರಸೂರೆ, ವೆಂಕಪ್ಪ ಕೆಂಗಲ್, ಶಿವಪ್ಪ ಲಿಂಗಸೂರು, ಓಬಳೇಶಪ್ಪ, ಬೆಲ್ಲದ ಈರಣ್ಣ, ನಾಗಮ್ಮ ಹಿರೇಮನಿ, ಮಂಜುನಾಥ ಹುಜರಾತಿ ಮುಂತಾದವರು ನೇತೃತ್ವ ವಹಿಸಿದ್ದರು. ಸು. 15 ಜಿಲ್ಲೆಗಳಿಂದ ನೂರಾರು ಕಾರ್ಮಿಕರು ಧರಣಿಯಲ್ಲಿ ಪಾಲ್ಗೊಂಡಿದ್ದರು.

ಉನ್ನತ ಅಧಿಕಾರಿಗಳೊಂದಿಗೆ ಸಭೆ :

ಸೆಪ್ಟೆಂಬರ್ 10 ರಂದು ಬೆಂಗಳೂರಿನ ಕಾರ್ಮಿಕ ಭವನದ ಮುಂದೆ ಈ ವಿಭಾಗದ ಸಾವಿರಾರು ಕಾರ್ಮಿಕರು ಅನಿರ್ಧಿಷ್ಟ ಹೋರಾಟ ಆರಂಭಿಸಿದ್ದರು. ಈ ವಿಷಯವಾಗಿ ಮಧ್ಯ ಪ್ರವೇಶಿಸಿದ್ದ ಕಾರ್ಮಿಕ ಇಲಾಖೆ ಸೆಪೆಂಬರ್18, 2014 ರಂದು ಸರ್ಕಾರದ ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಮಮೂರ್ತಿಯವರ ನೇತೃತ್ವದಲ್ಲಿ ಸಂಬಂಧಿಸಿದ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯನ್ನು ಬೆಂಗಳೂರಿನ ವಿಕಾಸ ಸೌಧದಲ್ಲಿ ವ್ಯವಸ್ಥೆ ಮಾಡಿತ್ತು.

ಸಭೆಯಲ್ಲಿ ಕಾರ್ಮಿಕ ಆಯುಕ್ತರಾದ ವಿಶ್ವನಾಥ, ಹೆಚ್ಚುವರಿ ಆಯುಕ್ತರಾದ ನರಸಿಂಹಮೂರ್ತಿ, ಸಾಮಾಜಿಕ ಭದ್ರತಾ ಮಂಡಳಿ ಜಂಟಿ ಕಾರ್ಯದರ್ಶಿ ಲಕ್ಷ್ಮಪ್ಪ ಅಲ್ಲದೆ ಕಂದಾಯ ಇಲಾಖೆಯ ಸಾಮಾಜಿಕ ಮತ್ತು ಪಿಂಚಣಿ ಮುಖ್ಯಸ್ಥರು, ವಸತಿ ಇಲಾಖೆ, ಕೃಷಿ ಮಾರುಕಟ್ಟೆ ಇಲಾಖೆ, ಪಾನೀಯ ನಿಗಮ, ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ, ರೇಷ್ಮೆ ಮಾರುಕಟ್ಟೆ, ಇಲಾಖೆಯ ಹಿರಿಯ ಅಧಿಕಾರಿಗಳು, ಕಾರ್ಮಿಕರ ಪರವಾಗಿ ಎಸ್. ಪ್ರಸನ್ನಕುಮಾರ್, ಕೆ. ಮಹಾಂತೇಶ, ಮಹೇಶ ಪತ್ತಾರ, ಹಮಾಲರ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಹಾಗೂ ಗಿರಣಿ ಕಾರ್ಮಿಕರ ಸಂಘದ ಎಚ್. ತಿಪ್ಪಯ್ಯ, ಎಪಿಎಂಸಿ ಕಾರ್ಮಿಕರ ಪರವಾಗಿ ಹನುಮಂತಪ್ಪ ಜಾಲಗಾರ, ಗೋಡಾನ್ ಕಾರ್ಮಿಕರ ಮುಖಂಡರಾದ ಎನ್.ಕೆ. ಸುಬ್ರಮಣ್ಯ, ಅನ್ನಭಾಗ್ಯ ಕಾರ್ಮಿಕರ ಹನುಮಂತಪ್ಪ, ಪಾನೀಯ ನಿಗಮದ ಪರವಾಗಿ ತಿಮ್ಮೇಗೌಡ ಹಾಗೂ ಬಜಾರ್ ಮತ್ತು ವೇರ್ ಹೌಸ್ ಕಾರ್ಮಿಕರ ಮುಖಂಡರಾದ ತಿಪ್ಪೇಸ್ವಾಮಿ ಹಾಗೂ ಸುರೇಶ ಭಾಗವಹಿಸಿದ್ದರು.

ಈ ಸಭೆಯಲ್ಲಿ ಬೇಡಿಕೆಗಳ ಕುರಿತು ಚರ್ಚೆ ನಡೆದು ಮುಖ್ಯವಾಗಿ ವಿವಿಧ ಗಿರಣಿ–ವೇರಹೌಸ್–ಗೋಡಾನ್ ಕಾರ್ಮಿಕರಿಗೆ ಕಾರ್ಮಿಕ ಕಾನೂನುಗಳ ಜಾರಿ ಮಾಡಲು ಮುತುವರ್ಜಿ ವಹಿಸುವಂತೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಸೌಲಭ್ಯಗಳ ಜಾರಿಗೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಮಂಡಳಿಯ ಫಲಾನುಭವಿಗಳ ನೋಂದಣಿ ಮಾಡಿಕೊಂಡು ಸ್ಮಾರ್ಟ್ ಕಾರ್ಡ್ ನೀಡುವ ನಿಯಮಾವಳಿ ರೂಪಿಸುವ ಕುರಿತ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು ಕೂಡಲೇ ಜಾರಿಮಾಡಲು ತಿಳಿಸಲಾಯಿತು. ಕಂದಾಯ ಇಲಾಖೆ ಜಾರಿ ಮಾಡುತ್ತಿರುವ ಆಮ್ ಆದ್ಮಿ ಭೀಮಾ ಯೋಜನೆ ಲೋಪದೋಷಗಳನ್ನು ಸರಿಪಡಿಸಲು, ಸರಕಾರ ಜಾರಿಮಾಡುತ್ತಿರುವ ವಸತಿ ಯೋಜನೆಯಲ್ಲಿ ಹಮಾಲಿ ಕಾರ್ಮಿಕರಿಗೆ ವಿಶೇಷ ಆದ್ಯತೆ ನೀಡಲು, ಎಲ್ಲಾ ಹಮಾಲರಿಗೆ ರಾಷ್ಟ್ರೀಯ ಸ್ವಾಸ್ಥ ಬೀಮಾ ಯೋಜನೆ ಅನ್ವಯಿಸಲು ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಕಳುಹಿಸಲು ಮತ್ತು ಎಪಿಎಂಸಿ ಕಾರ್ಮಿಕರಿಗೆ ಘೋಷಣೆಯಾಗಿರುವ ಕಾಯಕ ನಿಧಿ ಜಾರಿ ಮಾಡುವಾಗ ಫೆಡರೇಶನ್‌ನ ಪ್ರಸ್ತಾವನೆಗಳನ್ನು ಗಣನೆಗೆ ತೆಗೆದುಕೊಳ್ಳುವಂತೆ ಸಭೆಯಲ್ಲಿ ತೀರ್ಮಾನಕ್ಕೆ ಬರಲಾಯಿತು. ಕೊನೆಯಲ್ಲಿ ಕಾರ್ಮಿಕ ಆಯುಕ್ತರು ಮಾತನಾಡಿ ಅತ್ಯಂತ ಶೋಷಣೆಗೊಳಗಾದ ಹಮಾಲಿ ಕಾರ್ಮಿಕರಿಗೆ ಮುಂದಿನ ದಿನಗಳಲ್ಲಿ ನೆಮ್ಮದಿ ಬದುಕು ಕಲ್ಪಿಸಲು ಸರ್ಕಾರ ಬದ್ಧವಾಗಿದೆ ಎಂದರು. ಇಂತಹ ಭರವಸೆಗಳು ಕಾರ್ಯರೂಪಕ್ಕೆ ಬರಬೇಕಷ್ಟೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ಹಮಾಲಿ ಕಾರ್ಮಿಕರ ಬೇಡಿಕೆಗಳ ಸಂಬಂಧ ಕಾರ್ಮಿಕ ಇಲಾಖೆ ಮುತುವರ್ಜಿ ವಹಿಸುವಂತೆ ಮಾಡಿದ್ದು ಮತ್ತು ಉನ್ನತಾಧಿಕಾರಿಗಳ ಸಮ್ಮುಖದಲ್ಲಿ ಸವಿವರವಾದ ಚರ್ಚೆ ನಡೆಸುವಂತಾದದ್ದು ಸಹ ಚಳುವಳಿಯ ಒಂದು ಹಂತದ ಯಶಸ್ಸೇ ಆಗಿದೆ.



ಆಶಾವಾದಿಯಾದ ಸಿಐಟಿಯು ಸಂಘಟನೆಯು ಛಲತೊಟ್ಟು ಶ್ರಮಿಕರಾದ ಹಮಾಲರ ಬದುಕಿನ ಪರಿಸ್ಥಿತಿಯನ್ನು ಬದಲಾಯಿಸುವ ಚಳುವಳಿಯನ್ನು ಮುಂದೆ ಒಯ್ಯಲು ತೀರ್ಮಾನಿಸಿತು. ಈ ಸಭೆಯು ಹಮಾಲಿ ಕಾರ್ಮಿಕರ ಕೆಲಸದ ಪರಿಸ್ಥಿತಿಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿ ಎಂದು ಆಶಿಸಿದ ಕೆ. ಮಹಾಂತೇಶ ಸಭೆ ಸೇರಿಸಿ ಮುತುವರ್ಜಿ ವಹಿಸಿದ ಅಧಿಕಾರಿಗಳಿಗೆ ಧನ್ಯವಾದಗಳನ್ನು ಸಲ್ಲಿಸಿದರು.

ಡಿವೈಎಫ್‌ಐನಿಂದ ಅಲ್ಲಲ್ಲಿ ಪ್ರತಿಭಟನೆಗಳು



ವರದಿ : ವಾ. ಉಚ್ಚಿಲ್

ಕಿರು ಸೇತುವೆ ತುರ್ತು ನಿರ್ಮಾಣ ಆಗ್ರಹಿಸಿ ಸುರತ್ಕಲ್‌ನಲ್ಲಿ ಪ್ರತಿಭಟನೆ:



ಸುರತ್ಕಲ್ ಪ್ರದೇಶದಲ್ಲಿರುವ ಚೊಕ್ಕಬೆಟ್ಟು ಕೃಷ್ಣಾಪುರ ಮಧ್ಯೆ ಸ್ಥಳೀಯ ಮಂಗಳೂರು ಉತ್ತರ ಶಾಸಕರ ಮನೆ ಮುಂದೆಯೇ ಆಗದೇ ಉಳಿದ ಕಿರು ಸೇತುವೆ ನಿರ್ಮಾಣದ ಕೆಲಸವನ್ನು ಕೂಡಲೇ ನಿರ್ವಹಿಸುವಂತೆ ಆಗ್ರಹಿಸಿ ಸುರತ್ಕಲ್‌ನ ಡಿವೈಎಫ್‌ಐ ಸದಸ್ಯರು ರಸ್ತೆ ತಡೆ ಹಿಡಿದು ಸಪ್ಟೆಂಬರ್ 18, 2014 ರಂದು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರು ಮಂಗಳೂರು ಮಹಾನಗರ ಪಾಲಿಕೆ ಮತ್ತು ಸ್ಥಳೀಯ ಶಾಸಕರನ್ನು ತೀವ್ರ ತರಾಟೆಗೆ ತೆಗೆದು ಕೊಂಡರು. ಸ್ಥಳೀಯ ನಾಗರಿಕರು ಮತ್ತು ರಿಕ್ಷಾ ಚಾಲಕರು ಈ ಪ್ರತಿಭಟನೆಗೆ ಬೆಂಬಲ ಸೂಚಿಸಿದರು. ಡಿವೈಎಫ್‌ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮತ್ತಿತರರು ಭಾಗವಹಿಸಿದ್ದರು.

ಪ್ರಾಂತ ರೈತ ಸಂಘದಿಂದ ಹೊಸಬೆಟ್ಟುವಿನಲ್ಲಿ ಪ್ರತಿಭಟನೆ:

ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಅನುಷ್ಠಾನ ಹಾಗೂ ಬಡವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ ಇರುವೈಲ್ ಘಟಕದ ವತಿಯಿಂದ ಸಪ್ಟೆಂಬರ್ 19, 2014 ರಂದು ಹೊಸಬೆಟ್ಟು ಪಂಚಾಯತ್ ಎದುರು ಪ್ರತಿಭಟನೆ ನಡೆಯಿತು.

ಬಡವರಿಗೆ ಮನೆ ನಂಬ್ರ, ಅಂಗವಿಕಲರಿಗೆ ಮೀಸಲಿಟ್ಟ ನಿಧಿ, ನಿವೇಶನ ರಹಿತರಿಗೆ ಮನೆ, ಸರ್ಕಾರಿ ಜಾಗದಲ್ಲಿ ಕೃಷಿ ಮಾಡಿದವರಿಗೆ ಭೂಮಿಯ ಒಡೆತನ, ರುದ್ರಭೂಮಿ ಪುನರುಜ್ಜೀವನ ಸೇರಿದಂತೆ ಜನರ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಪ್ರತಿಭಟನಾಕಾರರ ಆಗ್ರಹವಾಗಿತ್ತು.

ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಸ್ಥಳಕ್ಕೆ ಭೇಟಿ ನೀಡಿದ ಮಂಗಳೂರು ತಾಲೂಕು ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದ ಮೇರೆಗೆ ಪ್ರತಿಭಟನೆಯನ್ನು ಹಿಂತೆಗೆಯಲಾಯಿತು.



ಆರೋಗ್ಯ ಕೇಂದ್ರದ ಮುಂಭಾಗದಲ್ಲಿ ಪ್ರತಿಭಟನಾ ಧರಣಿ

ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಡಿವೈಎಫ್‌ಐ ನಿಂದ ಸುರತ್ಕಲ್‌ನಲ್ಲಿ ಧರಣಿ:

ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವಂತೆ ಆಗ್ರಹಿಸಿ ಡಿವೈಎಫ್‌ಐ ಸುರತ್ಕಲ್ ಘಟಕದ ನೇತೃತ್ವದಲ್ಲಿ ಸಪ್ಟೆಂಬರ್ 22, 2014 ರಂದು ಸುರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗದಲ್ಲಿ ಪ್ರತಿಭಟನಾ ಧರಣಿಯನ್ನು ನಡೆಸಲಾಯಿತು.

1 ಲಕ್ಷ ಜನಸಂಖ್ಯೆ ಮೀರಿದ ಜನಸಾಂದ್ರತೆ ಇರುವ ಪ್ರದೇಶದಲ್ಲೂ ಸಮುದಾಯ ಆರೋಗ್ಯ ಕೇಂದ್ರ ಇರಬೇಕಾದುದು ಸರಕಾರದ ನೀತಿಯಾಗಿದ್ದು, ಕೇವಲ 30,000 ಜನಸಂಖ್ಯೆಗೆ ನಿಗದಿತವಾದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನೇ ಮುಂದುವರಿಸುತ್ತಿರುವುದನ್ನು ಖಂಡಿಸಿ, ಡಿವೈಎಫ್‌ಐ ಮಂಗಳೂರು ನಗರ ಸಮಿತಿ ಅ ಧ್ಯಕ್ಷ ಇಮ್ತಿಯಾಜ್ ಮಾತನಾಡಿದರು. ನಗರ ಸಮಿತಿ ಕಾರ್ಯದರ್ಶಿ ಸಂತೋಷ್ ಬಜಾಲ್ ಕೂಡಾ ಭಾಗವಹಿಸಿದ್ದರು. •

ಮುನ್ನೂರು ಪಂಚಾಯತ್ ಎದುರು ಪ್ರತಿಭಟನೆ:

ಸಮರ್ಪಕ ಹಾಗೂ ನಿರಂತರ ನೀರು ಪೂರೈಕೆ ಮಾಡಬೇಕು ಎಂದು ಆಗ್ರಹಿಸಿ ಹಾಗೂ ನೀರಿನ ದರ ಏರಿಕೆ ಮತ್ತು ಕಡ್ಡಾಯ ಮೀಟರ್ ಅಳವಡಿಕೆಯನ್ನು ವಿರೋಧಿಸಿ ಉಳ್ಳಾಲ ವಲಯದ ಮುನ್ನೂರು ಗ್ರಾಮ ಪಂಚಾಯತ್ ಎದುರು ಡಿವೈಎಫ್‌ಐ ಬಟ್ಟೆದಡಿ ಹಾಗೂ ಕುತ್ತಾರ್ ಘಟಕದವರು ಜೊತೆಗೂಡಿ ಸಪ್ಟೆಂಬರ್ 22, 2014 ರಂದು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್‌ಐ ಉಳ್ಳಾಲ ಕಾರ್ಯದರ್ಶಿ ಜೀವನ್‌ರಾಜ್ ಕುತ್ತಾರ್ ಮಾತನಾಡಿದರು. ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಡಿವೈಎಫ್‌ಐ ಮುಖಂಡರಾದ ಮಹಾಬಲ ಟಿ. ದೆಪ್ಪೆಲಿಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಬಾಗವಹಿಸಿದ್ದರು. ಪ್ರತಿಭಟನೆಗೂ ಮೊದಲು ಕುತ್ತಾರ್ ಜಂಕ್ಷನ್‌ನಿಂದ ಮುನ್ನೂರು ಗ್ರಾಮ ಪಂಚಾಯತ್ ವರೆಗೆ ಜಾಥಾ ನಡೆಯಿತು. •



"ತೃಣಮೂಲ"ದ ಕ್ರೌರ್ಯಗಳ ವಿರುದ್ಧ.........

ಪುಟ 9 ರಿಂದ

ಪಡೆ ಕರೆಸಿದ್ದಾರೆ. ಪ್ರತಿಭಟನಾ ಧರಣದಲ್ಲಿ ಸಾಕಷ್ಟು ಸಂಖ್ಯೆಯ ವಿದ್ಯಾರ್ಥಿನಿಯರಿದ್ದರೂ ಮಹಿಳಾ ಪೋಲೀಸರನ್ನು ಕರೆಸುವ ಬಗೆಗಾದರೂ ಉಪಕುಲಪತಿಗಳು ಗಮನ ನೀಡಿಲ್ಲ. ಅದು ಸೆಪ್ಟೆಂಬರ್ 19, 2014. ಪೋಲಿಸರು ಬಂದರು. ಪೋಲೀಸರ ಜೊತೆಯಲ್ಲಿ ನಾಗರೀಕರ ವೇಷದಲ್ಲಿ ತೃಣಮೂಲ ಕಾಂಗ್ರೆಸ್‌ನ ಗೂಂಡಾ ಪಡೆಯೂ ಇತ್ತು. ದೀಪ ಆರಿಸಿ ಕೆಲವೇ ಕ್ಷಣಗಳಲ್ಲಿ ಅವರು ವಿದ್ಯಾರ್ಥಿಗಳನ್ನು ಹಿಗ್ಗಾ ಮುಗ್ಗಾ ಥಳಿಸಿದ್ದಾರೆ. ಈ ಹೀನಾಯ ಹಲ್ಲೆಯಲ್ಲಿ 36 ವಿದ್ಯಾರ್ಥಿಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ. ಇಬ್ಬರು ವಿದ್ಯಾರ್ಥಿಗಳ ಪರಿಸ್ಥಿತಿ ಗಂಭೀರವಾಗಿದೆ. 37 ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ಮಾನಭಂಗದ ಪ್ರಕರಣದಲ್ಲಿ ಸರಿಯಾದ ಕ್ರಮ ವಹಿಸಲಿಲ್ಲ ಎಂದು ಪ್ರತಿಭಟಿಸಿದ ವಿದ್ಯಾರ್ಥಿನಿಯರ ಮೇಲೆ ಮತ್ತೆ ಅದೇ ಸ್ವರೂಪದ ದೌರ್ಜನ್ಯ ನಡೆದಿದೆ ಎಂದು ಈಗ ವಿದ್ಯಾರ್ಥಿನಿಯರು ದೂರುತ್ತಿದ್ದಾರೆ.

ಈ ಹೀನಾಯ ದಬ್ಬಾಳಿಕೆ ದೌರ್ಜನ್ಯವನ್ನು ವಿದ್ಯಾರ್ಥಿ ಸಮುದಾಯ ಮೌನವಾಗಿ ಒಪ್ಪಿಕೊಂಡಿಲ್ಲ. ದಿಟ್ಟ ಪ್ರತ್ಯುತ್ತರ ನೀಡಿದೆ. ಮರು ದಿನ ಅಂದರೆ ಸೆಪ್ಟೆಂಬರ್ 20, 2014 ರಂದು ಇಡೀ ಕೊಲ್ಕತಾದ ವಿದ್ಯಾರ್ಥಿ ಸಮೂಹ ಬೀದಿಗಿಳಿದು ವಿದ್ಯಾರ್ಥಿ ಸಮೂಹದ ಮೇಲಿನ ಈ ನೀಚ ಕ್ರೌರ್ಯವನ್ನು ಪ್ರತಿಭಟಿಸಿದೆ.

ಸ್ವಯಂ ಸ್ಫೂರ್ತಿಯಿಂದ ಉಕ್ಕಿ ಬಂದ ವಿದ್ಯಾರ್ಥಿ ಪ್ರತಿಭಟನೆಯ ಉಬ್ಬರ

ವಿದ್ಯಾರ್ಥಿ ಸಮೂಹದ ನಡುವೆ ವಿಶ್ವವಿದ್ಯಾಲಯದ ದುರಾಡಳಿತ, ತೃಣಮೂಲಿಗರ ಗೂಂಡಾಗಿರಿ, ಇವುಗಳಲ್ಲಿ ರಾಜ್ಯ ಸರ್ಕಾರದ ಶಾಮೀಲಾತಿಯ ವಿರುದ್ಧ ಆಕ್ರೋಶ ಹಬೆಯಾಡುತ್ತಿತ್ತು. ಪ್ರತಿಭಟನೆ ಅತ್ಯಂತ ಸ್ವಯಂ ಸ್ಫೂರ್ತಿಯಿಂದ ಕೂಡಿತ್ತು. ಸಾಂದರ್ಭಿಕವಾಗಿ ವಿದ್ಯಾರ್ಥಿಗಳು ಕೂಗುವ ತಮ್ಮ ಕೊಲ್ಕತಾ ಶೈಲಿಯ ಘೋಷಣೆಗಳೇ ಅಲ್ಲದೆ ಅನೇಕ ಪ್ರಸಿದ್ಧ ಪ್ರತಿಭಟನಾ ಪದ್ಯಗಳನ್ನು ಮಧ್ಯ ಮಧ್ಯೆ ಮೆರವಣಿಗೆಯುದ್ದಕ್ಕೂ ಹಾಡುತ್ತಿದ್ದುದು ಗಮನ ಸೆಳೆಯುವಂತಿತ್ತು.

ಧೋ ಧೋ ಎಂದು ಮಳೆ ನಿರಂತರವಾಗಿ ಸುರಿಯುತ್ತಿತ್ತು. ಹೀಗೆ ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೆ, ಸಾಂಸ್ಕೃತಿಕ ಕೇಂದ್ರ 'ನಂದನ್' ನಿಂದ ಹೊರಟ ಸಹಸ್ರರು ವಿದ್ಯಾರ್ಥಿಗಳ ಮೆರವಣಿಗೆ ರಾಜಭವನದತ್ತ ಸಾಗಿತು. ಈ ಪ್ರತಿಭಟನಾ ಪ್ರವಾಹದಲ್ಲಿ ವಿದ್ಯಾರ್ಥಿನಿಯರು ಬಹುದೊಡ್ಡ ಸಂಖ್ಯೆಯಲ್ಲಿ ಸಾಗಿ ಬಂದು ಅಮಾನವೀಯ ಲೈಂಗಿಕ ದೌರ್ಜನ್ಯ ಮತ್ತು ದಮನಕಾರಿ ಆಡಳಿತ ವ್ಯವಸ್ಥೆ ಹಾಗೂ ಗೂಂಡಾರಾಜ್ ವಿರುದ್ಧ ತಮ್ಮ ಆಕ್ರೋಶ ಪ್ರಕಟಿಸಿದರು. ವಿಶ್ವ ವಿದ್ಯಾಲಯದ ಆವರಣದಲ್ಲಿ ನಡೆದ ಮಾನಭಂಗದ ಆರೋಪದ ಪ್ರಕರಣದ ಮೇಲೆ ಒಂದು ನಿಷ್ಪಕ್ಷಪಾತವಾದ ತನಿಖೆ ನಡೆಯಬೇಕೆಂದು ಅವರು ರಾಜ್ಯಪಾಲ ಕೇಸರಿನಾಥ ತ್ರಿಪಾಠಿಯವರನ್ನು ಒತ್ತಾಯಿಸಿದರು. ಜಾದವ್‌ಪುರ ವಿಶ್ವ ವಿದ್ಯಾಲಯದ ಉಪ ಕುಲಪತಿ ರಾಜಿನಾಮೆ ಕೊಡಬೇಕೆಂದು ಸಹ ಬೇಡಿಕೆಯನ್ನು ಪುನರುಚ್ಚರಿಸಿದರು. ವಿದ್ಯಾರ್ಥಿಗಳು ತೃಣಮೂಲ ಸರ್ಕಾರದ ಪೋಲೀಸ್ ದೌರ್ಜನ್ಯವನ್ನು ತೀಕ್ಷ್ಣವಾಗಿ ಖಂಡಿಸಿದರು.

ಜಾದವ ಪುರ ವಿಶ್ವವಿದ್ಯಾಲಯ ಅಧ್ಯಾಪಕರ ಸಂಘ(ಜೆಯುಟಿಎ) ಈ ವಿಷಯದಲ್ಲಿ ತೆಗೆದುಕೊಂಡ ನಿಲುವು ಬಹಳ ಮುಖ್ಯವಾದದ್ದು. ಅದು ವಿವಿ ಕುಲಪತಿ ರಾಜಿನಾಮೆ ನೀಡಬೇಕೆಂದು ಒತಾಯಿಸಿದೆ. ಇದು ಒಂದು ರೀತಿಯಲ್ಲಿ ವಿದ್ಯಾರ್ಥಿ ಚಳುವಳಿಯ ನೈತಿಕ ವಿಜಯ. ಪ್ರಸಕ್ತ ಪ್ರಕರಣದಲ್ಲಿ ವಿಶ್ವವಿದ್ಯಾಲಯದ ಉಪಕುಲಪತಿ ರಾಜಿನಾಮೆ ನೀಡಬೇಕೆಂದು ದಮನಕಾರಿ ನೀತಿಗಳನ್ನು ಅನುಸರಿಸುತ್ತಿರುವ ತೃಣಮೂಲ ಸರ್ಕಾರ ಮತ್ತು ಅದರ ತಾಳಕ್ಕೆ ಕುಣಿಯುತ್ತಿರುವ ಜಾದವ್‌ಪುರ ವಿಶ್ವವಿದ್ಯಾಲಯದ ಉಪಕುಲಪತಿ ಒಟ್ಟಾಗಿ ನಡೆಸಿದ ಪೋಲೀಸ್ ಹಲ್ಲೆಯನ್ನು ಖಂಡಿಸಿ ಹೋರಾಟ ನಡೆಸುತ್ತಿರುವ ವಿದ್ಯಾರ್ಥಿ ಸಮೂಹವನ್ನು ಹಾಗೂ ತನ್ನ ಪಶ್ಚಿಮ ಬಂಗಾಳದ ಘಟಕವನ್ನು ಎಸ್‌ಎಫ್‌ಐ ಕೇಂದ್ರ ಸಮಿತಿಯು ಅಭಿನಂದಿಸಿದೆ. ಉಪ ಕುಲಪತಿ ರಾಜಿನಾಮೆ ಕೊಡಬೇಕೆಂದೂ ಮತ್ತು ವಿದ್ಯಾರ್ಥಿನಿಯ ಮೇಲಿನ ಅತ್ಯಾಚಾರದ ಆರೋಪದ ಬಗೆಗೆ ನಿಷ್ಪಕ್ಷಪಾತವಾದ ತನಿಖೆ ನಡೆಯಬೇಕೆಂದೂ ಎಸ್‌ಎಫ್‌ಐ ಒತ್ತಾಯಿಸಿ ರಾಜ್ಯವ್ಯಾಪಿಯಾಗಿ ಪ್ರತಿಭಟನೆ ಸಂಘಟಿಸಿದೆ. ವಿದ್ಯಾರ್ಥಿಗಳ ಮೇಲೆ ನಡೆದ ಪೋಲೀಸ್ ಹಲ್ಲೆಗೆ ಮೂಲ ಕಾರಣವಾಗಿರುವ ಉಪ ಕುಲಪತಿ ತಕ್ಷಣವೇ ರಾಜಿನಾಮೆ ಕೊಡಬೇಕೆಂದು ಪಶ್ಚಿಮ ಬಂಗಾಳದ ಎಡಪಕ್ಷಗಳ ಮುಖಂಡರೂ ಒತ್ತಾಯಿಸಿದ್ದಾರೆ.


ಕೊಲ್ಕತಾದ ಬೀದಿ ಬೀದಿಗಳಲ್ಲಿ ನಡೆದ ಸ್ವಯಂ ಸ್ಫೂರ್ತಿಯ ಮೆರವಣಿಗೆ ಒಂದು ಬಲು ಅಪರೂಪದ ಮೆರವಣಿಗೆಯಾಗಿತ್ತು. ಏಕೆಂದರೆ, ಪೋಲೀಸ್ ಹಲ್ಲೆಯಿಂದ ನೊಂದ ಸಹಪಾಠಿಗಳಿಗೆ ಬೆಂಬಲ ಸೂಚಿಸಲು ಮತ್ತು ತೃಣಮೂಲ ಸರ್ಕಾರದ ಪೋಲೀಸ್ ದೌರ್ಜನ್ಯವನ್ನು ಖಂಡಿಸಲು ಇಡೀ ಕೊಲ್ಕತಾದ ವಿದ್ಯಾರ್ಥಿ ಸಮೂಹ ತಮ್ಮ ತಮ್ಮ ರಾಜಕೀಯ ಒಲುಮೆ-ನಿಲುಮೆಗಳನ್ನು ಬದಿಗೊತ್ತಿ, ಒಗ್ಗಟ್ಟಾಗಿ ಮೆರವಣಿಗೆಯಲ್ಲಿ ಪಾಲ್ಗೊಂಡಿತ್ತು. •

ಕೊಡಲಿಯಾದವರು

ನಾರಿಯರ ಬಾಳಿಗೇ ಕೊಡಲಿಯಾದವರು
ಮನುವಾದಿ ಮಂದಿಗಳು ಕರುಳಿಲ್ಲದವರು
ಈಗಿತ್ತ ಅತ್ಯಾಚಾರ ವಿಪರೀತ ಜೋರು
ಹೆಚ್ಚಿಹವು ಅಮಾನುಷತೆಗೆ ಕಾರಣರು ಯಾರು?

– ವಿಡಂಬಾರಿ

'ಸಣ್ಣ' ವಿಷಯಗಳ ಬಗ್ಗೆ ದೊಡ್ಡ ಮಾತು, ದೊಡ್ಡ ವಿಷಯಗಳ ಬಗ್ಗೆ ದಿವ್ಯ ಮೌನ !



"ನಾನು ಸಣ್ಣ ವಿಷಯಗಳ ಮೇಲೆಯೇ ಗಮನ ಕೇಂದ್ರೀಕರಿಸುತ್ತೇನೆ ಎಂದು ತಮಾಷೆ ಮಾಡುತ್ತಾರೆ....ನಾನೊಬ್ಬ ಸಣ್ಣ ಮನುಷ್ಯ, ಸಾಮಾನ್ಯ ಹಿನ್ನೆಲೆಯವನು. ನನಗೆ ಕೊಟ್ಟಿರುವ ಆಡಳಿತ ಅವಕಾಶವನ್ನು ಸಾಮಾನ್ಯ ಜನರ ಒಳಿತಿಗಾಗಿ ಸಮರ್ಪಿಸ ಬಯಸುತ್ತೇನೆ"–ಇದು ಸಪ್ಟಂಬರ್ 23ರಂದು ಬೆಂಗಳೂರಿನಲ್ಲಿ ಪ್ರಧಾನಿಗಳ ಉದ್ಗಾರ.

ವ್ಯಾಪಕವಾಗಿ ಬಳಕೆಯಲ್ಲಿರುವ ಮಧುಮೇಹ, ಕ್ಯಾನ್ಸರ್, ಕ್ಷಯ, ಹೃದಯರೋಗಗಳು ಮತ್ತು ಹೆಚ್ಐವಿ ಔಷಧಿಗಳ ಬೆಲೆಗಳ ಮೇಲೆ ಹಾಕಿದ್ದ ನಿಯಂತ್ರಣವನ್ನು ಸರಕಾರ ಹಿಂತೆಗೆದುಕೊಂಡಿದೆ– ಇದು ಅದೇ ದಿನದ ಇನ್ನೊಂದು ಸುದ್ದಿ.

ಅಮೆರಿಕಾದ ಔಷಧಿ ಕಂಪನಿಗಳು ಭಾರತದಲ್ಲಿ ಹೂಡಿಕೆ ಮಾಡಬೇಕಾದರೆ ಔಷಧಿ ಪೇಟೆಂಟ್ ವ್ಯವಸ್ಥೆಯನ್ನು 'ಬಲಗೊಳಿಸಬೇಕು' ಎಂಬ ಬಗ್ಗೆ ಭಾರತದ ಪ್ರಧಾನಿಗಳ ಅಮೆರಿಕಾ ಭೇಟಿ ಕಾಲದಲ್ಲಿ ಒತ್ತಡ ಹಾಕಬೇಕೆಂದು ತಮ್ಮ ಅಧ್ಯಕ್ಷ ಒಬಾಮರ ಮೇಲೆ ಒತ್ತಡ ಹಾಕುತ್ತಿವೆ– ಇದು ಅದರ ಹಿಂದಿನ ದಿನದ ಮತ್ತೊಂದು ಸುದ್ದಿ.

ಇದಕ್ಕೂ ಹದಿನೈದು ದಿನಗಳ ಹಿಂದಿನ ಮಗದೊಂದು ಸುದ್ದಿ ನೋಡಿ–ಮೋದಿ ಸರಕಾರದ ವಾಣಿಜ್ಯ ಮಂತ್ರಿಗಳು ಔಷಧಿ ವಲಯದಲ್ಲಿ ನವೀನ ಶೋಧಗಳಿಗೆ ಉತ್ತೇಜನೆ ಕೊಡಲು ನಮ್ಮ ಪೇಟೆಂಟ್ ವ್ಯವಸ್ಥೆಯನ್ನು ಬಲಗೊಳಿಸುವ ಬಗ್ಗೆ ಯೋಚಿಸುತ್ತಿದ್ದೇವೆ ಎಂದಿದ್ದಾರೆ.

ಈ ಮೂರೂ ಸುದ್ದಿಗಳು ಜನಸಾಮಾನ್ಯರಿಗೆ ಔಷಧಿಗಳನ್ನು ಕೈಗೆಟಕುವ ಬೆಲೆಗಳಲ್ಲಿ ಒದಗಿಸುವುದಕ್ಕೆ ಸಂಬಂಧಪಟ್ಟ ಸುದ್ದಿಗಳು. ಜನಗಳ ಮಟ್ಟಿಗೆ 'ಸಣ್ಣ' ವಿಷಯಗಳೇನಲ್ಲ. ನಿಜ, ಪ್ರಧಾನಿಗಳು 'ಸಣ್ಣ' ವಿಷಯಗಳ ಬಗ್ಗೆ ದೊಡ್ಡದಾಗಿ ಹೇಳಿದಾಗ ಅದು ದೊಡ್ಡ ಸುದ್ದಿಯಾಗುತ್ತದೆ. ಆದರೆ ಸಾಮಾನ್ಯ ಜನರನ್ನೇ ತಟ್ಟುವ ನಿರ್ಧಾರಗಳನ್ನು ಅದು ಸದ್ದಿಲ್ಲದೆ ಮಾಡುತ್ತದೆಯಾದ್ದರಿಂದ ನಮ್ಮ ಪತ್ರಿಕೆಗಳಲ್ಲಿ ಎಲ್ಲೋ ಮೂಲೆಯಲ್ಲಿ ಪ್ರಕಟವಾಗುವ ಸುದ್ದಿಗಳಾಗುತ್ತವೆ. ಕೆಲವೊಮ್ಮೆ ಸುದ್ದಿಯೇ ಆಗುವುದಿಲ್ಲ. ಇದು ಕಳೆದ ನೂರು ದಿನಗಳ ಅನುಭವ.

ಈ ಮೂರು ಸುದ್ದಿಗಳನ್ನೇ ನೋಡಿ. ಔಷಧಿಗಳ ಬೆಲೆಗಳ ಮೇಲೆ ಹತೋಟಿ ಇಡಲು 'ಔಷಧಿ ಬೆಲೆಗಳ ನಿಯಂತ್ರಣ ಆದೇಶ, 2013(ಡಿಪಿಸಿಒ,2013) ಎಂಬುದೊಂದು ಸರಕಾರೀ ಆದೇಶ ಇದೆ. ಇದರಲ್ಲಿ ಒಂದು 'ರಾಷ್ಟ್ರೀಯ ಆವಶ್ಯಕ ಔಷಧಿಗಳ ಪಟ್ಟಿ' ಇದೆ. ಈ ಔಷಧಿಗಳ ಬೆಲೆಗಳ ಮೇಲೆ ನಿಯಂತ್ರಣ ಹಾಕುವ ಅಧಿಕಾರ 'ರಾಷ್ಟ್ರೀಯ ಔಷಧಿ ಬೆಲೆ ಪ್ರಾಧಿಕಾರ'(ಎನ್‌ಪಿಪಿಎ)ಕ್ಕೆ ಕೊಡಲಾಗಿದೆ. 'ವಿಶೇಷ ಸಂದರ್ಭ'ಗಳಲ್ಲಿ, 'ಸಾರ್ವಜನಿಕ ಹಿತದೃಷ್ಟಿಯಿಂದ' ಈ ಪಟ್ಟಿಯಲ್ಲಿ ಇಲ್ಲದ ಔಷಧಿಗಳ ಬೆಲೆಗಳ ಮೇಲೂ ನಿಯಂತ್ರಣ ಹಾಕಬಹುದು ಎಂದು ಮೇ 29ರಂದು, ಅಂದರೆ ಮೋದಿ ಸರಕಾರ ಅಧಿಕಾರ ವಹಿಸಿಕೊಂಡ ಹೊಸದರಲ್ಲೇ ಆ ಆದೇಶದ 19ನೇ ಪರಿಚ್ಛೇದದ ಅಡಿಯಲ್ಲಿ ಮಾರ್ಗದರ್ಶಕ ಸೂತ್ರಗಳನ್ನು ಹೊರಡಿಸಲಾಗಿತ್ತು. ಇದರ ಪ್ರಕಾರ ಜುಲೈನಲ್ಲಿ ಎನ್‌ಪಿಪಿಎ ಸುಮಾರು 50 ಮಧುಮೇಹ, ಕ್ಯಾನ್ಸರ್, ಕ್ಷಯರೋಗ, ಹೃದಯ ರೋಗಗಳು ಮತ್ತು ಏಡ್ಸ್ ರೋಗದ ಔಷಧಿಗಳ ಬೆಲೆಗಳ ಮೇಲೆ ಹತೋಟಿ ಹಾಕಿತ್ತು. ಇದಕ್ಕೆ ಔಷಧಿ ಉದ್ಯಮದಿಂದ ಭಾರೀ ಪ್ರತಿಭಟನೆ, ಪ್ರತಿರೋಧ ಬಂತು.

ಈಗ ಸಪ್ಟಂಬರ್ 23ರಂದು ಅದೇ ಪ್ರಾಧಿಕಾರ ಅಂದರೆ ಎನ್‌ಪಿಪಿಎ, 'ಸರಕಾರದ 'ನಿರ್ದೇಶನ'ದ ಪ್ರಕಾರ ಪರಿಚ್ಛೇದ 19ರ ಅಡಿಯಲ್ಲಿ ನೀಡಿದ ಮಾರ್ಗದರ್ಶನ ಸೂತ್ರಗಳನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ಪ್ರಕಟಿಸಿದೆ. ಅಂದರೆ ಈ 50ಕ್ಕೂ ಹೆಚ್ಚು ಔಷಧಿಗಳ ಬೆಲೆಗಳ ಮೇಲೆ ಹತೋಟಿ ಹಾಕುವ ಅಧಿಕಾರ ಈಗ ಅದಕ್ಕಿಲ್ಲ. ಸಹಜವಾಗಿಯೇ ಇದನ್ನು ಈ ಔಷಧಿಗಳನ್ನು ತಯಾರಿಸುವ ಕಂಪನಿಗಳ ಮಾಲಕರು ಸ್ವಾಗತಿಸಿದ್ದಾರೆ. ಆದರೆ ಇದು ಲಕ್ಷಾಂತರ ಮಧುಮೇಹ, ಕ್ಯಾನ್ಸರ್ ಮುಂತಾದ ರೋಗಗಳಿಂದ ಬಳಲುತ್ತಿರುವ ಸಾಮಾನ್ಯ ಜನರಿಗೆ ಆಘಾತಕಾರೀ ಸುದ್ದಿ ಎಂದು ಈ ನಿರ್ದೇಶನ ನೀಡಿದ ಮೋದಿ ಸರಕಾರದ ಔಷಧಿ ಇಲಾಖೆಗೆ ಗೊತ್ತಿಲ್ಲದಿರಲಿಕ್ಕಿಲ್ಲ.

ಮೇಲೆ ಹೇಳಿದ ಎರಡನೇ ಸುದ್ದಿಯ ಪ್ರಕಾರ ಭಾರತದ ಔಷಧಿ ಪೇಟೆಂಟ್ ಕಾನೂನುಗಳಿಂದಾಗಿ ಅಮೆರಿಕಾದ ಔಷಧಿ ಕಂಪೆನಿಗಳು ಭಾರತದಲ್ಲಿ ಹೂಡಿಕೆ ಮಾಡಲು ಕಷ್ಟವಾಗುತ್ತಿದೆ. ಎಲ್ಲ ರಂಗಗಳಲ್ಲಿ ನವೀನತೆಯನ್ನು ಉತ್ತೇಜಿಸಬೇಕೆಂದಿರುವ ಭಾರತದ ಹೊಸ ಪ್ರಧಾನಿಗಳ ಅಮೆರಿಕಾ ಭೇಟಿ ಇದಕ್ಕೆ ಒಂದು ಅವಕಾಶವನ್ನು ಒದಗಿಸಿದ್ದು ಭಾರತದ ಪೆಟೆಂಟ್ ಕಾನೂನನ್ನು ತಮಗೆ ಅನುಕೂಲವಾಗುವಂತೆ 'ಬಲಗೊಳಿಸುವಂತೆ' ಒಬಾಮ ಆಡಳಿತ ಮೋದಿ ಸರಕಾರದ ಮೇಲೆ ಒತ್ತಡ ಹಾಕಬೇಕೆಂದು ಅಮೆರಿಕಾದ ಔಷಧಿ ಕಂಪೆನಿಗಳು ಒತ್ತಾಯಿಸುತ್ತಿವೆಯಂತೆ. ಇದಕ್ಕೆ ಸ್ಪಂದಿಸಿರುವ ಅಮೆರಿಕಾದ ಸೆನೆಟಿನ ವಿದೇಶಿ ಸಂಬಂಧಗಳ ಸಮಿತಿಯ ಅಧ್ಯಕ್ಷರು ಭಾರತದ ಪೇಟೆಂಟ್ ಕಾನೂನನ್ನು ಮತ್ತೊಮ್ಮೆ ಬಲವಾಗಿ ಟೀಕಿಸಿದ್ದಾರೆ. ಅದನ್ನು (ತಮ್ಮ ದೇಶದ ಕಂಪನಿಗಳ ಹಿತಗಳಿಗೆ ಅನುಗುಣವಾಗಿ) ಬಲಪಡಿಸಬೇಕೆಂದು ಮತ್ತೊಮ್ಮೆ ಆಗ್ರಹಿಸಿದ್ದಾರೆ.

ನಮ್ಮ 'ಒಳ್ಳೆಯ ದಿನಗಳ' ಸರಕಾರ ಈಗಾಗಲೇ ಈ ದಿಕ್ಕಿನಲ್ಲೇ ಯೋಚಿಸಲಾರಂಭಿಸಿದೆ ಎಂಬುದರ ಇಂಗಿತವನ್ನು ಈ ಸರಕಾರದ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿ ಗಳು ಈಗಾಗಲೇ ವ್ಯಕ್ತಪಡಿಸಿದ್ದಾರೆ.

ಭಾರತ ಸರಕಾರ 'ಬೌದ್ಧಿಕ ಆಸ್ತಿ ಹಕ್ಕುಗಳು'(ಐಪಿಆರ್) ಕುರಿತಂತೆ ತನ್ನ ನಿಲುವನ್ನು ವಿಮರ್ಶಿಸುತ್ತಿದೆ, ಸರಕಾರ ಐಪಿಆರ್ ಕುರಿತಂತೆ ಒಂದು ಧೋರಣೆಯನ್ನು ಪ್ರಕಟಿಸಲಿದೆ ಎಂದು ವಾಣಿಜ್ಯ ಮಂತ್ರಿಗಳು ಹೇಳಿದ್ದಾರೆ. ಇದುವರೆಗೆ ಬೌದ್ಧಿಕ ಆಸ್ತಿ ಹಕ್ಕುಗಳನ್ನು (ಅಂದರೆ ಪೇಟೆಂಟುಗಳನ್ನು) ಕುರಿತಂತೆ ನಮ್ಮ ಕಾನೂನುಗಳಲ್ಲಿ ಸ್ಪಷ್ಟತೆಯಿಲ್ಲ, ಈ ಬಗ್ಗೆ ಒಂದು ಧೋರಣೆಯೇ ಇಲ್ಲ, ಅದರಿಂದಾಗಿ ವಿದೇಶೀಯರು ಇದರಲ್ಲಿ 'ತೂತು'ಗಳನ್ನು ಕಾಣುತ್ತಾರೆ, ತಮ್ಮ ಸರಕಾರ 'ಮೊದಲ ಬಾರಿಗೆ' ರೂಪಿಸಲಿರುವ ಧೋರಣೆ ನವೀನ ಉತ್ಪನ್ನಗಳಿಗೆ ಉತ್ತೇಜನೆ ನೀಡುವಂತೆ ಪೇಟೆಂಟು ವ್ಯವಸ್ಥೆಯನ್ನು ಬಲಪಡಿಸುತ್ತದೆ ಎಂದು ಅವರು ಹೇಳಿದ್ದಾರೆ. ನಿಜ, ಈ ಪ್ರಕ್ರಿಯೆಯಲ್ಲಿ ದೇಶದ ಹಿತಾಸಕ್ತಿಗಳನ್ನು ರಕ್ಷಿಸಲಾಗುವುದು ಎಂದೂ ಅವರು ಹೇಳಿದ್ದಾರೆ. ಅಂದರೆ ಈ ಹೊಸ ಧೋರಣೆಯ ಮುಖ್ಯ ಉದ್ದೇಶ ದೇಶದ ಹಿತಗಳನ್ನು ರಕ್ಷಿಸುವುದಕ್ಕಿಂತ ಹೆಚ್ಚಾಗಿ 'ನವೀನತೆಗೆ ಉತ್ತೇಜನೆ', ಆಮೂಲಕ ವಿದೇಶಿ ಕಂಪನಿಗಳ ಹೂಡಿಕೆಗೆ 'ಕಂಟಕ'ಗಳಿರದಂತೆ ಮಾಡುವುದು ಎಂಬುದು ಸ್ಪಷ್ಟ.

ಪ್ರಧಾನಿಗಳಿಗೆ ಪರಿಣಿತರ ಬಹಿರಂಗ ಪತ್ರ

ಭಾರತದಲ್ಲಿ ಇದುವರೆಗೆ ಒಂದು ಬೌದ್ಧಿಕ ಆಸ್ತಿ ಹಕ್ಕುಗಳ(ಅಥವ ಪೇಟೆಂಟುಗಳ) ಬಗ್ಗೆ ನಿರ್ದಿಷ್ಟ ಧೋರಣೆಯೇ ಇಲ್ಲೆಂಬುದು ಖಂಡಿತಾ ಸರಿಯಲ್ಲ ಎಂದು ಈ ರಂಗದ ಪರಿಣಿತರು ಸಪ್ಟಂಬರ್ 23ರಂದು ಪ್ರಧಾನ ಮಂತ್ರಿಗಳು ಮತ್ತು ವಾಣಿಜ್ಯ ಮಂತ್ರಿಗಳಿಗೆ ಬರೆದಿರುವ ಬಹಿರಂಗ ಪತ್ರದಲ್ಲಿ ಹೇಳಿದ್ದಾರೆ.

ಭಾರತದಲ್ಲಿ ಈಗಿರುವ ಪೇಟೆಂಟ್ ಕಾನೂನು ವ್ಯವಸ್ಥೆ ಇಂತಹ ಒಂದು ಸ್ಪಷ್ಟ ಧೋರಣೆಯನ್ನು ಪ್ರತಿನಿಧಿಸುತ್ತದೆ. ಇದು ಸಂಸತ್ತಿನ ಒಳಗೆ ಮತ್ತು ಹೊರಗೆ ವ್ಯಾಪಕ ಚರ್ಚೆಗಳ ನಂತರ ಅಂಗೀಕರಿಸಿರುವ ಧೋರಣೆ. ಈ ಧೋರಣೆಯ ಬಲದಲ್ಲೇ ಭಾರತದ ಔಷಧಿ ಉದ್ದಿಮೆ ಮೂರು ದಶಕಗಳಲ್ಲಿ ಯಶಸ್ವಿಯಾಗಿ ನೆಲೆಯೂರಲು, ವಿದೇಶಿ ಔಷಧಿ ಕಂಪನಿಗಳಿಗೆ ಸ್ಪರ್ಧೆ ನೀಡಲು ಸಾಧ್ಯವಾಗಿದೆ ಎಂದು ಈ ಪರಿಣಿತರು ನೆನಪಿಸಿದ್ದಾರೆ. 1995ರಲ್ಲಿ ಗ್ಯಾಟ್ ಒಪ್ಪಂದದ ನಂತರವೂ ಅದರಲ್ಲಿನ ಟ್ರಿಪ್ಸ್ (ಬೌದ್ಧಿಕ ಆಸ್ತಿ ಕುರಿತ ವ್ಯಾಪಾರ ಸಂಬಂಧಿ) ಅಂಶಗಳ ಪ್ರಯೋಜನವನ್ನು ಪೂರ್ಣವಾಗಿ ಪಡೆಯಲು ಭಾರತದ ಸಂಸತ್ತು ನಿರ್ಧರಿಸಿರುವುದನ್ನೂ, ಅದರ ಪ್ರಕಾರ ಭಾರತೀಯ ಪೇ–ಟೆಂಟ್ ಕಾನೂನಿನಲ್ಲಿ ಸೆಕ್ಷನ್ 3(ಡಿ) ಮತ್ತು 3(ಜೆ) ಸೇರಿಸಲಾಯಿತು ಎಂದು ಈ ಪರಿಣಿತರು ಪ್ರಧಾನ ಮಂತ್ರಿಗಳ ಮತ್ತು ವಾಣಿಜ್ಯ–ಕೈಗಾರಿಕಾ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ. 3(ಡಿ) 'ನವೀನ' ಎಂದು ಹೇಳಿಕೊಂಡರೂ ನಿಜವಾಗಿ ನವೀನ ಪ್ರಕ್ರಿಯೆಯೇನೂ ಇರದ ಔಷಧಿಗೆ ಪೇಟೆಂಟ್ ಕೊಡುವುದಿಲ್ಲ ಎಂದು ಹೇಳುತ್ತದೆ. ವಿದೇಶಿ ಕಂಪನಿಗಳಿಗೆ ಆಕ್ಷೇಪವಿರುವುದು ಇದರ ಬಗ್ಗೆ.

ಮೋದಿ ಸರಕಾರದ ವಾಣಿಜ್ಯ ಮಂತ್ರಿಗಳ ಹೇಳಿಕೆಗೆ ತದ್ವಿರುದ್ಧವಾಗಿ ನಮ್ಮ ಧೋರಣೆಯಲ್ಲಿ ಸ್ಪಷ್ಟತೆ ಇದೆ, ಅದು ಔಷಧಿಗಳ ಪೇಟೆಂಟ್ ಹೊಂದಿರುವವರು ಅದರ ದುರುಪಯೋಗ ಪಡೆದು

ಮುಂದಿನ ಪುಟ 15 ನೋಡಿ


ಸರಕಾರಸ್ಥರ ನುಡಿಗಳೂ ಪರಿವಾರಸ್ಥರ ನಡೆಗಳೂ

'ಒಳ್ಳೆಯ ದಿನ'ಗಳನ್ನು ತರುವ ಸರಕಾರದ ನುಡಿಗಳು ಮತ್ತು ಸಂಘ ಪರಿವಾರದ ತದ್ವಿರುದ್ಧ ದಿಕ್ಕಿನ ನಡೆಗಳ ಮೆರವಣಿಗೆ ಯಾವುದೇ ಎಗ್ಗಿಲ್ಲದೆ ಸಾಗುತ್ತಲೇ ಇದೆ. ಈ ವಾರದ ಮೂರು ಹೊಸ ನುಡಿ–ನಡೆಗಳನ್ನು ನೋಡಿ.

"ಅವರು (ಅಲ್ ಖೈದ) ನಮ್ಮ ದೇಶದ ಮುಸ್ಲಿಮರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂಬುದು ನನ್ನ ತಿಳುವಳಿಕೆ. ಭಾರತೀಯ ಮುಸ್ಲಿಮರು ಅವರ ತಾಳಕ್ಕೆ ಕುಣಿಯುತ್ತಾರೆ ಎಂದು ಯಾರಾದರೂ ಯೋಚಿಸುತ್ತಿದ್ದರೆ ಅದು ಅವರ ಭ್ರಮೆ. ಭಾರತೀಯ ಮುಸ್ಲಿಮರು ಭಾರತಕ್ಕಾಗಿ ಬದುಕುತ್ತಾರೆ, ಭಾರತಕ್ಕಾಗಿ ಸಾಯುತ್ತಾರೆ, ಅವರು ಭಾರತಕ್ಕೆ ಎಂದೂ ಕೇಡು ಬಯಸುವುದಿಲ್ಲ" – ಇದು ಯಾವುದೇ 'ಹುಸಿ ಜಾತ್ಯಾತೀತವಾದಿ'ಯ ಮಾತಲ್ಲ. ನಮ್ಮ ಮಾನ್ಯ ಪ್ರಧಾನ ಮಂತ್ರಿಗಳು ಸಿಎನ್‌ಎನ್ ವಾಹಿನಿಗೆ ನೀಡಿರುವ ಒಂದು ಸಂದರ್ಶನದಲ್ಲಿ ಹೇಳಿರುವ ಮಾತು. ಇದು ಇಷ್ಟಕ್ಕೇ ನಿಂತಿದ್ದರೆ ಸಂತೋಷವೇ.

ಆದರೆ ಇದಕ್ಕೆ ಆರೆಸ್ಸೆಸ್‌ನ ಹಿರಿಯ ಮುಖಂಡ ಇಂದ್ರೇಶ ಕುಮಾರ್ ಪ್ರತಿಕ್ರಿಯೆ ನೋಡಿ: " ಮುಸ್ಲಿಮರು ಈ ಸವಾಲನ್ನು ಸ್ವೀಕರಿಸಬೇಕು. ಅವರು ಇದನ್ನು ಸಾಬೀತು ಮಾಡಬೇಕು. ಕಾಂಗ್ರೆಸ್ ಅವರಿಗೆ ಮೋದಿಯವರು ಕೊಟ್ಟಂತಹ ಇಂತಹ ಅವಕಾಶವನ್ನು ಎಂದೂ ಕೊಟ್ಟಿರಲಿಲ್ಲ". ಏನಿದರ ಅರ್ಥ? ಮೋದಿಯವರ 'ತಿಳುವಳಿಕೆ'ಯನ್ನು ನೀವು ಒಪ್ಪುತ್ತೀರಾ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಲು ಅವರು ನಿರಾಕರಿಸಿದರಂತೆ.(ದಿ ಹಿಂದೂ, ಸಪ್ಟಂಬರ್ 21).

ಪ್ರಧಾನಿಗಳ ಪ್ರಕಾರ ಅವರು ಭ್ರಮೆಯಲ್ಲಿರಬಹುದೇ, ಅಥವ ನಮ್ಮ ಪ್ರಧಾನಿಗಳದ್ದು 'ತಿಳುವಳಿಕೆ'ಯೋ ಅಥವ 'ಸವಾಲೋ' ಎಂದು ಅವರನ್ನೇ ಕೇಳಿದರೆ ಹೇಗೆ? ಬಹುಶಃ ನಮ್ಮ ಮಾಜಿ(ಕಾಂಗ್ರೆಸ್) ಪ್ರಧಾನಿ–ಮಾದರಿ ಮೌನವನ್ನೇ ಎದುರಿಸಬೇಕಾದೀತು–ಕಳೆದ ನೂರು ದಿನಗಳ ಅನುಭವವನ್ನು ಪರಿಗಣಿಸಿದರೆ.



'ಅಭಿವೃದ್ಧಿ' ಅಜೆಂಡಾದ ಆಚೆ

ನಮ್ಮ ಮಾನ್ಯ ಗೃಹಮಂತ್ರಿಗಳನ್ನು ಕೇಸರಿ ಪಡೆಗಳು ಬಹುವಾಗಿ ಪ್ರಚಾರ ಮಾಡುತ್ತಿರುವ 'ಲವ್ ಜಿಹಾದ್' ಬಗ್ಗೆ ಪತ್ರಕರ್ತರು ಕೇಳಿದಾಗ ಹಾಗೆಂದರೇನು, ನನಗೇನೂ ಗೊತ್ತಿಲ್ಲವಲ್ಲ ಎಂದರಂತೆ. ಬಹುಶಃ ಉತ್ತರ ಪ್ರದೇಶದ ಎಂಟು ವಿಧಾನಸಭಾ ಕ್ಷೇತ್ರಗಳ ಮತದಾರರು ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟಿದ್ದಾರೆ. ಆದರೂ ಇವ್ಯಾವುದನ್ನೂ ಲೆಕ್ಕಿಸದೆ ಮಧ್ಯಪ್ರದೇಶದಲ್ಲಿ ಅವರ ಪಕ್ಷದ ಇಬ್ಬರು ಶಾಸಕರು 'ಲವ್ ಜಿಹಾದ್' ವಿರುದ್ಧ ಫರ್ಮಾನ್ ಹೊರಡಿಸಿದ್ದಾರೆ. 'ಲವ್ ಜಿಹಾದ್'ನ ಅಪಾಯವಿರುವುದರಿಂದಾಗಿ ನವರಾತ್ರಿ ಹಬ್ಬದ ವೇಳೆ ನಡೆಯುವ 'ಗರ್ಭಾ' ನೃತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮುಸ್ಲಿಂ ಪುರುಷರಿಗೆ ಅವಕಾಶ ಕೊಡಬಾರದು ಎಂದು ಕರೆ ನೀಡಿದ್ದಾರೆ. ಇಂದೋರಿನ ಪೋಲೀಸರಂತೂ ಈ ಕಾರ್ಯಕ್ರಮದಲ್ಲಿ ಭಾಗವಹಿಸುವ 'ಏಕಾಂಗಿ' ಪುರುಷರು ಐಡೆ–ಂಟಿಟಿ ಕಾರ್ಡ್ ತೋರಿಸಬೇಕು ಎಂದು ಆದೇಶ ಹೊರಡಿಸಿದ್ದಾರಂತೆ. ಸಹಜವಾಗಿಯೇ ಮೂರು ವಿಧಾನಸಭಾ ಕ್ಷೇತ್ರಗಳನ್ನು ಕಳಕೊಂಡ ಗುಜರಾತಿನ 'ಪರಿವಾರ'ದವರು ಹೇಗೆ ಹಿಂದುಳಿಯಲು ಸಾಧ್ಯ? ಈ ನವರಾತ್ರಿಯ ಸಂದರ್ಭದಲ್ಲಿ ರಾಜ್ಯಾದ್ಯಂತ 'ಲವ್ ಜಿಹಾದ್' ಮತ್ತು ಗೋಮಾಂಸದ ವಿರುದ್ಧ ವ್ಯಾಪಕ ಪ್ರಚಾರ ನಡೆಸಲು ವಿಹೆಚ್‌ಪಿ ನಿರ್ಧರಿಸಿದ್ದರೆ, 'ದುರ್ಗಾ ವಾಹಿನಿ' ಕಾಲೇಜುಗಳಲ್ಲಿ

ಮುಂದಿನ ಪುಟ 15 ನೋಡಿ

ಭಗತ್‌ಸಿಂಗ್ : ವಿಮೋಚನಾ ಸಮರದಲ್ಲಿ ಅರಳಿದ ಹೂ...

ಕೆ. ಮಹಾಂತೇಶ

ಇಂದು ದೇಶಕ್ಕಾಗಿ ಬಲಿದಾನಗೈದ ಭಗತ್‌ಸಿಂಗ್ ಜನ್ಮದಿನ..


ಸೆಪ್ಟೆಂಬರ್ 27 ಬ್ರಿಟಿಷರ ನೇಣುಕಂಭಕ್ಕೆ ತನ್ನ ಯೌವನದ ಸುಗಂಧವನ್ನು ಲೇಪಿಸಿ ಜಗತ್ತಿನ ಕ್ರಾಂತಿಕಾರಿ ಚಳುವಳಿಯ ಇತಿಹಾಸದಲ್ಲೇ ಅತ್ಯಂತ ಚಿಕ್ಕವಯಸ್ಸಿನಲ್ಲೇ ಹುತಾತ್ಮನಾದ ಭಗತ್‌ಸಿಂಗ್ ಜನ್ಮ ದಿನ. 1907 ಸೆಪೆಂಬರ್ 27 ರಂದು ಹುಟ್ಟಿದ ಭಗತ್‌ಸಿಂಗ್‌ಗೆ ಅವರಿಗೆ ಇಂದಿಗೆ 108 ಜನ್ಮದಿನವಾಗಿರುತ್ತಿತ್ತು. ಅಂತಹ ಒಬ್ಬ ಯುವಕ ಇವತ್ತಿಗೂ ಭಾರತದ ಕ್ರಾಂತಿಕಾರಿ ಚಳುವಳಿಯಲ್ಲಿ ಆದರ್ಶ ಮತ್ತು ಉಜ್ವಲ ನಕ್ಷತ್ರವಾಗಿ ಮಿನುಗುತ್ತಿರುವ ಹಿಂದಿರುವ ಕಾರಣ ಬೇರೇನೂ ಅಲ್ಲ ಅವರು ದೇಶದ ವಿಮೋಚನೆಗಾಗಿ ಮಾಡಿದ ತ್ಯಾಗ ಮತ್ತು ಬಲಿದಾನ.

ಮನೆಯೇ ಹೋರಾಟದ ಕುಲುಮೆ

ಭಗತ್‌ಸಿಂಗ್ ಹುಟ್ಟಿದ್ದು ಪಂಜಾಬ್‌ನ ಜಲಂಧರ ಜಿಲ್ಲೆಯ ಖಾತ್ಕರ್‌ಕಲಾನ್ ಎಂಬ ಹಳ್ಳಿಯಲ್ಲಿ. ಆದರೆ ತಂದೆಯು ಸಮೀಪದ ಲಾಯಲ್‌ಪುರಕ್ಕೆ ಸ್ಥಳಾಂತರ ಹೊಂದಿದ್ದರಿಂದ ಭಗತ್‌ಸಿಂಗ್ ಅಲ್ಲಿಗೆ ಹೋಗಬೇಕಾಯಿತು. ಅಲ್ಲಿ ನೀರಾವರಿ ಕಾಲುವೆಗೆ ಬ್ರಿಟಿಷರು ವಿಧಿಸಿದ್ದ ಭೂ ಕಂದಾಯದ ವಿರುದ್ಧ ರೈತರ ಹೋರಾಟ ಆರಂಭಗೊಂಡಿತು. ಅದರ ನೇತೃತ್ವವನ್ನು ಸ್ವತಃ ಭಗತ್‌ಸಿಂಗ್ ಚಿಕ್ಕಪ್ಪ ಸರ್ದಾರ ಅಜಿತ್‌ಸಿಂಗ್ ವಹಿಸಿದ್ದರು. ಅವರು ಮಾಡುತ್ತಿದ್ದ ಉಗ್ರ ಭಾಷಣಗಳು ಬ್ರಿಟಿಷ್ ಆಡಳಿತಕ್ಕೆ ನುಂಗಲಾರದ ಬಿಸಿ ತುಪ್ಪದಂತಾಗಿದ್ದವು. ಹೀಗಾಗಿಯೇ ಅವರನ್ನು ಬಂಧಿಸಲು ಪೊಲೀಸರು ಏನೆಲ್ಲಾ ಸರ್ಕಸ್ ನಡೆಸಿದರೂ ಅಜಿತ್‌ಸಿಂಗ್ ಅವರಿಗೆ ಚಳ್ಳೆ ಹಣ್ಣು ತಿನ್ನಿಸಿ ಪರಾರಿಯಾಗುತ್ತಿದ್ದರು. ಇದು ಎಳೆಯ ಬಾಲಕ ಭಗತ್ ಅವರನ್ನು ಆಕರ್ಷಣೆ ಮಾಡಿತು. 1915 ರಲ್ಲಿ ಲಾಹೋರ್ ಪಿತೂರಿ ಮೊಕದ್ದಮೆಯ ವಿಚಾರಣೆ ನಡೆಸಿ 24 ಸ್ವಾತಂತ್ರ್ಯ ಹೋರಾಟಗಾರರಿಗೆ ಮರಣ ದಂಡನೆ ವಿಧಿಸಿದ್ದು, ಉಳಿದ 27 ಜನರನ್ನು ಅಂಡಮಾನ್ ಜೈಲಿಗೆ ದೂಡಿದ್ದು, ನಂತರ 1919 ರಲ್ಲಿ ಜಲಿಯನ್ ವಾಲಾಬಾಗ್‌ನಲ್ಲಿ ನಡೆದ ಸಾವಿರದ ನಾನೂರಕ್ಕೂ ಹೆಚ್ಚಿನ ಜನರ ಘೋರ ಹತ್ಯಾಕಾಂಡ ಹಾಗೂ ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಬ್ರಿಟಿಷರು ನೇಣಿಗೇರಿಸಿದ ಕರ್ತಾರ್ ಸಿಂಗ್ ಸರಬಾನ ನೇಣಿಗೇರುವ ಕೊನೆಯ ಸಂದರ್ಭದಲ್ಲಿ ಹೇಳಿದ ಮಾತುಗಳು ಭಗತ್‌ಸಿಂಗ್ ಅವರನ್ನು ಉದ್ದೀಪನಗೊಳಿಸಿದ್ದವು.

ಅಪಾರ ಜ್ಞಾನ ದಾಹಿ..

ಜಗತ್ತಿನ ಕ್ರಾಂತಿಕಾರಿ ಚಳುವಳಿಯ ಇತಿಹಾಸದಲ್ಲಿ ಇಷ್ಟು ಚಿಕ್ಕವಯಸ್ಸಿನಲ್ಲಿ ಹುತಾತ್ಮರಾದ ಮತ್ತು ಆ ಚಿಕ್ಕ ವಯಸ್ಸಿನಲ್ಲಿ ಆಳವಾದ ರಾಜಕೀಯ ಜ್ಞಾನವನ್ನು ಪಡೆದಿದ್ದ ವ್ಯಕ್ತಿಗಳು ಅತ್ಯಂತ ವಿರಳ. ಭಗತ್‌ಸಿಂಗ್ ಸಹವರ್ತಿಯಾಗಿ ಅವರ ಜೊತೆ ಜೈಲಿನಲ್ಲಿದ್ದು ಬಾಲಾಪರಾಧಿ ಎಂಬ ಹಣೆ ಪಟ್ಟಿಯೊಂದಿಗೆ ಶಿಕ್ಷೆಯಿಂದ ಬಿಡುಗಡೆಯಾಗಿ ಇತ್ತೀಚಿನವರೆಗೂ ಬದುಕಿದ್ದವರು ಶಿವವರ್ಮ. (ಅವರು ಭಗತ್ ಸಿಂಗ್‌ರ ಹಲವು ಜೊತೆಗಾರರಂತೆ ಸ್ವಾತಂತ್ರ್ಯ ಪೂರ್ವದಲ್ಲೇ ಭಾರತ ಕಮ್ಯೂನಿಸ್ಟ್ ಪಕ್ಷವನ್ನು ಸೇರಿದರು. – 1964 ರ ನಂತರ ಸಿಪಿಐ(ಎಂ) ಜೊತೆ ಗುರುತಿಸಿಕೊಂಡರು.) 1980 ರಲ್ಲಿ ಒಮ್ಮೆ ಕಾನ್ಪುರದಿಂದ ಲಕ್ನೋಗೆ ಪ್ರಯಾಣಿಸುತ್ತಿದ್ದಾಗ ರಾಜಸ್ಥಾನದ ಕಾಲೇಜೊಂದರಲ್ಲಿ ತತ್ವಶಾಸ್ತ್ರದ ಅಧ್ಯಾಪಕನಾಗಿದ್ದ ಸಹ ಪ್ರಯಾಣಿಕನೊಬ್ಬ ಶಿವವರ್ಮ ಆಗಷ್ಟೇ ಓದಿ ಮುಗಿಸಿದ್ದ ಭಗತ್‌ಸಿಂಗ್ ಅವರ 'ನಾನೇಕೇ ನಾಸ್ತೀಕ? ಎಂಬ ಪುಸ್ತಕವನ್ನು ಕೈಗೆತ್ತಿಕೊಂಡು ಕೆಲವು ಪುಟಗಳನ್ನು ತಿರುವಿ 'ನಿಜವಾಗಿಯೂ ಆತನಿಗೆ ಇಂತಹ ಗಂಭೀರ ವಿಷಯಗಳ ಬಗ್ಗೆ ಬರೆಯುವ ಸಾಮರ್ಥ್ಯವಿತ್ತೇ?' ಎಂದು ಪ್ರಶ್ನಿಸಿದರಂತೆ. ಆದರೆ ಭಗತ್‌ಸಿಂಗ್ ಬದುಕು ಮತ್ತು ಬರಹಗಳನ್ನು ಗಮನಿಸಿದಾಗ ಕೇವಲ ನಾಸ್ತಿಕತನದ ಬಗ್ಗೆ ಮಾತ್ರವಲ್ಲ, ಅವತ್ತಿನ ಸಮಕಾಲೀನ ಆರ್ಥಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಕಲೆ ಹಾಗೂ ಸಾಹಿತ್ಯಿಕ ವಿಷಯಗಳ



ಬಗ್ಗೆಯೂ ಅತ್ಯಂತ ಆಳವಾದ ಚಿಂತನೆ ಮತ್ತು ನಿಖರವಾದ ಜ್ಞಾನವನ್ನು ಸ್ಪಷ್ಟತೆಯನ್ನು ಅವರು ಪಡೆದುಕೊಂಡಿದ್ದರು ಎಂಬುದು ಗೊತ್ತಾಗುತ್ತದೆ. ಅಷ್ಟು ಮಾತ್ರವಲ್ಲ ಭಗತ್‌ಸಿಂಗ್ ಹುತಾತ್ಮರಾಗಿ ಇಷ್ಟೊಂದು ದೀರ್ಘ ಅವಧಿಯ ಬಳಿಕವೂ ಅವರ ಬಗ್ಗೆ ಈಗಲೂ ಹಲವು ರೀತಿಯ ಚರ್ಚೆಗಳನ್ನು ನಡೆಯುತ್ತಿರುವುದು, ಅವರ ಕುರಿತಾದ ಹತ್ತಾರು ಪುಸ್ತಕಗಳು ಈಗಲೂ ನಿರಂತರವಾಗಿ ಪ್ರಕಟವಾಗುತ್ತಿರುವುದು ಅವರ ಕುರಿತಾಗಿ ಸಾಕ್ಷ್ಯ ಚಿತ್ರಗಳು, ಚಲನಚಿತ್ರಗಳು ನಿರ್ಮಾಣಗೊಂಡಿರುವುದನ್ನು ಗಮನಿಸಿದಾಗ ಭಗತ್‌ಸಿಂಗ್ ಅವರ ಬಗ್ಗೆ ಅವರ ಚಿಂತನೆಗಳ ಇರುವ ಗೌರವ ಮತ್ತು ಅಭಿಮಾನ ಇಮ್ಮಡಿಗೊಳ್ಳುತ್ತದೆ.

ತಿರುಚಿದ ಇತಿಹಾಸ

ಇತ್ತೀಚಿಗೆ ಬ್ರಿಟಿಷ್ ಇತಿಹಾಸಕಾರನೊಬ್ಬ ಬರೆದ ಪುಸ್ತಕದಲ್ಲಿ ಭಗತ್‌ಸಿಂಗ್ ಹಾಗೂ ಮತ್ತೊಬ್ಬ ಕ್ರಾಂತಿಕಾರಿ ಚಂದ್ರಶೇಖರ ಆಜಾದ್ ಅವರನ್ನು 'ಭಯೋತ್ಪಾದಕರು' ಎಂಬ ಹಣೆ ಪಟ್ಟಿ ಕಟ್ಟಿರುವುದು ಹಲವರನ್ನು ಕೆರಳಿಸಿದೆ. ಅದರಲ್ಲೂ ಭಗತ್‌ಸಿಂಗ್ ಅವರ ಇತಿಹಾಸವನ್ನು ಅತ್ಯಂತ ಹತ್ತಿರದಿಂದ ಬಲ್ಲ ಹೆಸರಾಂತ ಹಿರಿಯ ಪತ್ರಕರ್ತರಾದ ಕುಲದೀಪ್ ನಯ್ಯರ್ ಬ್ರಿಟಿಷ್ ಬರಹಗಾರನ ಆ ಅಭಿಪ್ರಾಯವನ್ನು ಹಾಗೂ ಆ ಬಗ್ಗೆ ಬ್ರಿಟಿಷ್ ಸಮುದಾಯ ಮೌನವಹಿಸಿರುವ ಕ್ರಮವನ್ನು ತೀವ್ರವಾಗಿ ಖಂಡಿಸಿ ಲೇಖನ ಬರೆದಿದ್ದಾರೆ. ಹಾಗೆ ನೋಡಿದರೆ ಭಾರತದ ಸ್ವಾತಂತ್ರ್ಯ ಚಳುವಳಿಯ ಆರಂಭದ ಘಟ್ಟದಲ್ಲೇ ಎರಡು ವಿಭಿನ್ನ ಧಾರೆಗಳು ಬೆಳೆದು ಬಂದಿದ್ದು ಇತಿಹಾಸ. ಅಂದಿನ ಚಳುವಳಿಯ ನೇತೃತ್ವವಹಿಸಿದ್ದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನೊಳಗೆಯೇ ಸೌಮ್ಯವಾದಿಗಳು ಮತ್ತು ಉಗ್ರವಾದಿಗಳು ಎಂಬ ಎರಡು ಬಣಗಳು ಅಸ್ತಿತ್ವದಲ್ಲಿದ್ದವು. ಆ ಕಾಲದಲ್ಲಿ ಉತ್ತರ ಭಾರತವನ್ನು ಕೇಂದ್ರವಾಗಿಟ್ಟುಕೊಂಡು ಆರಂಭದಲ್ಲಿ ನೌಜವಾನ್ ಸಭಾ ಹಾಗೂ ನಂತರದಲ್ಲಿ ಹಿಂದುಸ್ಥಾನ ಸೋಷಿಯಲಿಸ್ಟ್ ರಿಪಬ್ಲಿಕ್ ಅಸೋಷಿಯೇಷನ್ ಮೂಲಕ ವಿಶೇಷವಾಗಿ ಯುವಜನರನ್ನು ಸಂಘಟಿಸುತ್ತ ಕ್ರಾಂತಿಕಾರಿ ಚಳುವಳಿಯನ್ನು ರೂಪಿಸುತ್ತಿದ್ದ ಭಗತ್‌ಸಿಂಗ್ ಹಾಗು ಆತನ ಸಂಗಾತಿಗಳನ್ನು ಸ್ವತಃ ಕಾಂಗ್ರೆಸ್ ನಾಯಕರೆ ಉಗ್ರವಾದಿಗಳು ಹಾಗೂ ಭಯೋತ್ಪಾದಕರು ಎಂದು ಹೀಯಾಳಿಸುತ್ತಿದ್ದರು. ಆದರೆ ಸ್ವತಃ ಭಗತ್‌ಸಿಂಗ್ ಅವರೇ ಬರೆದ ಹಲವು ಬರಹಗಳಲ್ಲಿ ಅವರ ಬಗ್ಗೆ ಬಂದ ಆರೋಪಗಳಿಗೆ ಹೀಗೆ ಪ್ರತ್ಯುತ್ತರ ನೀಡಿದ್ದಾರೆ. "ನಾನು ಭಯೋತ್ಪಾದಕನಲ್ಲ ಮತ್ತು ಪ್ರಾಯಶಃ ಕ್ರಾಂತಿಕಾರಿ ಜೀವನದ ಪ್ರಾರಂಭದ ದಿನಗಳನ್ನು ಹೊರತುಪಡಿಸಿದರೆ ಎಂದೂ ಭಯೋತ್ಪಾದಕನಾಗಿರಲಿಲ್ಲ ಎಂಬುದನ್ನು ಖಡಾಖಂಡಿತವಾಗಿ ಹೇಳಲು ಇಚ್ಛಿಸುತ್ತೇನೆ; ಭಯೋತ್ಪಾದಕ ವಿಧಾನಗಳಿಂದ ಏನನ್ನೂ ಸಾಧಿಸಲಾಗುವುದಿಲ್ಲ ಎಂಬುದೂ ನನಗೆ ಖಚಿತವಾಗಿದೆ. 'ಹಿಂದುಸ್ಥಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಷಿಯೇಷನ್' ಇತಿಹಾಸವೇ ಇದಕ್ಕೆ ಜೀವಂತ ಉದಾಹರಣೆ. ನಮ್ಮನ್ನು ನಾವು ಈ ಮಹಾ ಚಳುವಳಿಯ ಮಿಲಿಟರಿ ವಿಭಾಗವಾಗಿ ಗುರುತಿಸಿಕೊಳ್ಳಬೇಕೆಂಬ ಒಂದೇ ಗುರಿಯತ್ತ ನಮ್ಮ ಎಲ್ಲಾ ಚಟುವಟಿಕೆಗಳು ಕೇಂದ್ರೀಕರಣವಾಗಿದ್ದವು."

ಸ್ಪಷ್ಟ ಗುರಿ ಮತ್ತು ದಾರಿ

ಆದರೆ ಭಗತ್‌ಸಿಂಗ್, ರಾಜಗುರು, ಸುಖದೇವ್ ಮೊದಲಾದ ಯುವಕರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕ್ರಾಂತಿಕಾರಿ ಹಾದಿಯನ್ನು ಹಿಡಿದಿದ್ದು ಹೇಗೆ? ಇದರ ಹಿಂದಿನ ಸ್ಫೂರ್ತಿ ಮತ್ತು ಅವತ್ತು ಅದಕ್ಕೆ ಪೂರಕವಾದ ಅಂಶಗಳು ಯಾವುವು ಎಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲವಾದರೆ ಭಗತ್‌ಸಿಂಗ್ ಅವರು ಹೊಂದಿದ್ದ ಗುರಿ ಉದ್ದೇಶಗಳನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. 1917ರಲ್ಲಿ ನಡೆದ ರಷ್ಯಾದ ಸಮಾಜವಾದಿ ಕ್ರಾಂತಿ. ಅದರಿಂದಾಗಿ ಪ್ರೇರೇಪಿತರಾದ ಭಗತ್‌ಸಿಂಗ್. 1931 ಫೆಬ್ರವರಿ 2ರಂದು ಅಂದರೆ ಬ್ರಿಟಿಷರು ಗಲ್ಲಿಗೇರಿಸುವ ಎರಡು ತಿಂಗಳ ಹಿಂದಷ್ಟೇ ಬರೆದ ಒಂದು ಲೇಖನದಲ್ಲಿ ದೇಶದ ಯುವಜನರು ಮಾರ್ಕ್ಸ್‌ವಾದವನ್ನು ಅಳವಡಿಸಿಕೊಳ್ಳಬೇಕೆಂದು, ಆ ಮೂಲಕ ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿರುವ ಶೋಷಣಾ ವ್ಯವಸ್ಥೆಯನ್ನು ಕೊನೆಗಾಣಿಸಲು ದೇಶದಲ್ಲಿ ಅತ್ಯಂತ ಶೋಷಣೆಗೆ ಒಳಗಾಗಿರುವ ರೈತ–ಕಾರ್ಮಿಕರನ್ನು ಸಂಘಟಿಸಬೇಕೆಂದು ಕರೆ ನೀಡಿದ್ದರು. ಆದರೆ ಭಾರತದಲ್ಲಿ ಅಂದಿನ ದಿನಗಳಲ್ಲಿ ತೀವ್ರ ರೀತಿಯಲ್ಲಿ ಬ್ರಿಟಿಷ್ ಆಡಳಿತದ ವಿರೋಧಿಯಾಗಿ ಬೆಳೆದು ಬರುತ್ತಿದ್ದ ಕ್ರಾಂತಿಕಾರಿ ಚಳುವಳಿಯನ್ನು ಧಮನ ಮಾಡಲು ಬ್ರಿಟಿಷ್ ಸರ್ಕಾರವು ಶಾಸನ ಸಭೆಯಲ್ಲಿ 'ಸಾರ್ವಜನಿಕ ಸಂರಕ್ಷಣಾ ಮಸೂದೆ ಹಾಗೂ ಕಾರ್ಮಿಕ ಚಳುವಳಿಯನ್ನು ಧಮನ ಮಾಡುವ 'ಕಾರ್ಮಿಕ ವಿವಾದ ಮಸೂದೆ'ಯನ್ನು ಮಂಡಿಸಲು ಮುಂದಾಗಿದ್ದ ಘಟನೆಯೇ 1929 ಮಾರ್ಚ್ 20 ರಂದು ಸೆಂಟ್ರಲ್ ಅಸೆಂಬ್ಲಿಯಲ್ಲಿ ಬಾಂಬು ಹಾಕುವ ಪ್ರೇರಣೆಯನ್ನು ಕಾಂತಿಕಾರಿಗಳಿಗೆ ನೀಡಿದ್ದಂತೂ ಸತ್ಯ. ಹಾಗೆಂದ ಮಾತ್ರಕ್ಕೆ ಅವರು ಖಂಡಿತ ಭಯೋತ್ಪಾದಕರಾಗಿರಲಿಲ್ಲ ಅಥವಾ ಹಿಂಸೆಯ ಮೂಲಕ ಜನರ ಕಲ್ಯಾಣವನ್ನು ರೂಪಿಸುವ ಉಗ್ರ ಸ್ವರೂಪದ ಹಿಂಸೆಯ ಆರಾಧಕರಂತೂ ಆಗಿರಲೇ ಇಲ್ಲ. 'ಕಿವುಡರಿಗೆ ಕಿವಿ ಕೇಳಿಸಬೇಕಾದರೆ ಸದ್ದು ಬಹಳ ಜೋರಾಗಿರಬೇಕು. ನಾವು ಬಾಂಬೆಸೆದಾಗ ಯಾರನ್ನಾದರೂ ಕೊಲ್ಲುವುದು ನಮ್ಮ ಆಶಯವಾಗಿರಲಿಲ್ಲ. ಕಿವುಡು ಸರ್ಕಾರವನ್ನು ಎಚ್ಚರಿಸುವುದಷ್ಟೇ ನಮ್ಮ ಗುರಿಯಾಗಿತ್ತು.' ಎಂದು ತಮ್ಮ ಕೃತ್ಯವನ್ನು ಭಗತ್‌ಸಿಂಗ್ ನ್ಯಾಯಲಯದಲ್ಲಿ ಸಮರ್ಥಿಸಿಕೊಳ್ಳುತ್ತಾರೆ. ಅಲ್ಲದೆ 'ಕ್ರಾಂತಿ ಎಂದರೆ ಬಾಂಬು ಬಂದೂಕುಗಳ ಆರಾಧನೆಯೂ ಅಲ್ಲ, ನಮ್ಮ ಪ್ರಕಾರ 'ಕ್ರಾಂತಿ' ಎಂದರೆ ಅನ್ಯಾಯದ ಬುನಾದಿಯ ಮೇಲೆ ಕಟ್ಟಲ್ಪಟ್ಟ ಈ ಅಸಮಾನ ಶೋಷಣಾ ವ್ಯವಸ್ಥೆ ಬದಲಾಗಬೇಕು.' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ನಿರಂತರ ಅಧ್ಯಯನ ಮತ್ತು ಅನುಭವಗಳ ಮೂಲಕ ಭಗತ್ ಸಿಂಗ್ ಕ್ರಮೇಣ ಈ ಸ್ಪಷ್ಟ ತಿಳುವಳಿಕೆಗೆ ಬಂದಿದ್ದರು.

ದೇಶಕ್ಕಾಗಿ, ಜನತೆಯ ಒಳಿತಿಗಾಗಿ ಕೇವಲ 24 ವರ್ಷದಲ್ಲೇ ತನ್ನ ಜೀವವನ್ನೇ ಬಲಿ ನೀಡಿದ ಭಗತ್‌ಸಿಂಗ್ ಅಂದು ಇಂದು ಮಾತ್ರವಲ್ಲ ಮುಂದಿನ ಯುವ ಜನಾಂಗಕ್ಕೂ ಆದರ್ಶವೇ ಸರಿ. ಅಂತಹ ಆದರ್ಶಗಳನ್ನು ಈ ದೇಶದ ಯುವ ಜನರಲ್ಲಿ ಬಿತ್ತುವ ಕೆಲಸವನ್ನು ಮುಂದುವರೆಸೋಣ ಆ ಮೂಲಕ ಅವರ ಜನ್ಮದಿನದ ಆಚರಣೆಯನ್ನು ಸಾರ್ಥಕಗೊಳಿಸೋಣ..

ಅಂಗನವಾಡಿಗಳ ಖಾಸಗೀಕರಣದ ವಿರುದ್ಧ.......

ಪುಟ 10 ರಿಂದ

ಘಂಟೆ ಸ್ವಾಗತಿಸಿದರು. ಯಮುನಾ ಗಾಂವ್ಕರ್, ಲಕ್ಷ್ಮೀದೇವಮ್ಮ, ಶ್ರೀದೇವಿ ಚುಡೆ, ಕಮಲಾ, ನಾಗರತ್ನ ಮಾಲೂರು, ನಾಗರತ್ನ ಬಳ್ಳಾರಿ, ಮಂಜಮ್ಮ, ಎರ್ರಮ್ಮ, ನಳಿನಾಕ್ಷಿ ಮುಂತಾದವರು ಹಾಜರಿದ್ದರು.

ಮಕ್ಕಳ, ತಾಯಂದಿರ, ಆಹಾರ–ಆರೋಗ್ಯ–ಶಾಲಾಪೂರ್ವ ಶಿಕ್ಷಣದ ಹಕ್ಕು ರಕ್ಷಣೆಯ ಮಹತ್ವದ ಕುರಿತು 4 ದಿನಗಳಿಂದ ನಡೆದ ಕಾರ್ಯಾಗಾರದ ಫಲಶೃತಿಯನ್ನು ಸಾರ್ವನಿಕರಿಗೆ ತಿಳಿಸುವ ಈ ಮಹತ್ವದ ಬಹಿರಂಗ ಸಭೆಯಲ್ಲಿ ದೇಶದ 19 ರಾಜ್ಯಗಳಿಂದ ಆಗಮಿಸಿದ ಅಖಿಲ ಭಾರತ ಮುಖಂಡರು ಭಾಗವಹಿಸಿ ಅಂತಿಮ ಗೆಲುವು ನಮ್ಮದೇ ಎಂದು ಎಲ್ಲಾ ಭಾಷೆಗಳಲ್ಲಿ ಹಾಡು ಹಾಗೂ ಘೋಷಣೆಯ ಮೂಲಕ ಮಾರ್ದನಿಗೊಳಿಸಿದ್ದು ವಿಶೇಷವಾಗಿತ್ತು. ಗಂಗಮ್ಮ ಬಿರಾದಾರ್ ಶ್ರದ್ಧಾಂಜಲಿ ನಿರ್ಣಯ ಮಂಡಿಸಿದರು. ವೇದಿಕೆಯಲ್ಲಿ ಗೌರಮ್ಮ ಪಾಟೀಲ, ಮಾದೇವಿ ಕುಡುಪಳ್ಳಿ, ನಾಗಯ್ಯ ಸ್ವಾಮಿ ಕಟ್ಟಡ ಕಾರ್ಮಿಕರ ಸಂಘ, ಬಾಬು ರಾವ್ ಪಂಚಾಯ್ತಿ ನೌಕರರ ಸಂಘ, ಶರಣಬಸಪ್ಪ ಬೊಮ್ಮಶೆಟ್ಟಿ, ಅಯ್ಯಪ್ಪ, ರೇಖಾ ಸುತಾರ್, ರಾಮು ರಾಠೋಡ್ ಬಿ.ಎಸ್.ಎನ್.ಎಲ್ ಗುತ್ತಿಗೆ ಕಾರ್ಮಿಕರ ಸಂಘದ ಮುಖಂಡರು ಇನ್ನಿತರರು ಹಾಜರಿದ್ದರು.

‘ಸಣ್ಣ’ ವಿಷಯಗಳ ಬಗ್ಗೆ ದೊಡ್ಡ ಮಾತು..

ಪುಟ 13 ರಿಂದ

ಔಷಧಿಗಳ ಬೆಲೆಗಳನ್ನು ವಿಪರೀತವಾಗಿ ಹೆಚ್ಚಿಸಿ ಭಾರತದ ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಗಳಲ್ಲಿ ಲಭ್ಯವಾಗದಂತೆ ಮಾಡಲು ಬಿಡುತ್ತಿಲ್ಲ ಎಂಬುದೇ ವಿದೇಶಿ ಔಷಧಿ ಕಂಪೆನಿಗಳ ದೂರು ಎಂದು ಈ ಪರಿಣಿತರು ನೆನಪಿಸಿದ್ದಾರೆ. ವಾಸ್ತವವಾಗಿ ನಮ್ಮ ಪೇ-ಟೆಂಟ್ ವ್ಯವಸ್ಥೆ ಹಲವು ಅಭಿವೃದ್ಧಿಶೀಲ ದೇಶಗಳಿಗೆ ಮಾದರಿಯೂ ಆಗಿ ಬಿಟ್ಟಿದೆ. ಉದಾಹರಣೆಗೆ ಬ್ರೆಝಿಲ್ ದೇಶ ಇದನ್ನೇ ಅನುಕರಿಸಲು ನಿರ್ಧರಿಸಿದೆ.

ಅಲ್ಲದೆ ವಿದೇಶಿ ಕಂಪನಿಗಳು ಬಯಸುವಂತೆ ಬೌದ್ಧಿಕ ಹಕ್ಕುಗಳನ್ನು ಬಲಪಡಿಸಿದರೆ ದೇಶದಲ್ಲಿ ನವೀನ ಉತ್ಪನ್ನಗಳನ್ನು ತರುವ ಚಟುವಟಿಕೆಗಳಿಗೆ ಉತ್ತೇಜನೆ ಸಿಗುತ್ತದೆ ಎಂಬುದು ಕೇವಲ ಭ್ರಮೆ. ಏಕೆಂದರೆ ಜಾಗತಿಕವಾಗಿ ಇದಕ್ಕೇನೂ ಸಾಕ್ಷ್ಯಾಧಾರಗಳಿಲ್ಲ. ಆದ್ದರಿಂದ ಅದರ ಹೆಸರಿನಲ್ಲಿ ನಮ್ಮ ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಗಳಲ್ಲಿ ಔಷಧಿಗಳನ್ನು ಲಭ್ಯಗೊಳಿಸುವುದಕ್ಕೆ ಸಂಚಕಾರ ತರಬೇಕಾಗಿಲ್ಲ.

ಇದರಿಂದಾಗಿ ನಮ್ಮ ಪ್ರಧಾನಿಗಳ ಅಮೆರಿಕಾ ಭೇಟಿಯ ಸಂದರ್ಭದಲ್ಲಿ ನಮ್ಮ ಬೌದ್ಧಿಕ ಆಸ್ತಿ ವ್ಯವಸ್ಥೆಯನ್ನು ವಿಮರ್ಶಿಸುವ ಕಸರತ್ತು ನಡೆಸಿದರೆ ಅದು ಅಮೆರಿಕಾ ಸರಕಾರದ ಮತ್ತು ಅಲ್ಲಿಯ ಕಂಪನಿಗಳ ಒತ್ತಡಗಳಿಗೆ ಒತ್ತೆಯಾಳಾಗುತ್ತದೆ ಎಂದು ಸಪ್ಟಂಬರ್ 23ರಂದು ಈ ಪರಿಣಿತರು ಪ್ರಧಾನ ಮಂತ್ರಿಗಳಿಗೆ ಮತ್ತು ವಾಣಿಜ್ಯ ಮಂತ್ರಿಗಳಿಗೆ ಬರೆದಿರುವ ಈ ಬಹಿರಂಗ ಪತ್ರದಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಕೇಂದ್ರೀಯ ಔಷಧಿ ಸಂಶೋಧನಾ ಸಂಸ್ಥೆಯ ನಿವೃತ್ತ ನಿರ್ದೇಶಕರು ಮತ್ತು ಪ್ರಸಿದ್ಧ ವಿಜ್ಞಾನಿಗಳೂ ಆದ ಡಾ. ನಿತ್ಯಾನಂದ, ಗ್ಯಾಟ್ ರಾಯಭಾರಿಯೂ ಆಗಿದ್ದ ಭಾರತ ಸರಕಾರದ ನಿವೃತ್ತ ಆರೋಗ್ಯ ಕಾರ್ಯದರ್ಶಿ ಎಸ್.ಪಿ. ಶುಕ್ಲ, ಇನ್ನೊಬ್ಬ ಗ್ಯಾಟ್ ರಾಯಭಾರಿ ಆಗಿದ್ದ ಬಿ.ಎಲ್.ದಾಸ್, ನಿವೃತ್ತ ವಿದೇಶಾಂಗ ಕಾರ್ಯದರ್ಶಿ ಮುಚ್ಕುಂದ್ ದುಬೆ, ಮತ್ತಿತರ ಎಂಟು ಮಂದಿ ಪ್ರತಿಷ್ಠಿತರು ಹಾಗು ಇಪ್ಪತ್ತು ಮಂದಿ ಔಷಧಿ, ಪರಿಸರ, ಪೇಟೆ-ಂಟ್ ಮುಂತಾದ ಕ್ಷೇತ್ರಗಳಲ್ಲಿ ಸಕ್ರಿಯವಾಗಿರುವ ಸಂಘಟನೆಗಳ ಮುಖ್ಯಸ್ಥರುಗಳು ಈ ಬಹಿರಂಗ ಪತ್ರಕ್ಕೆ ಸಹಿ ಹಾಕಿದ್ದಾರೆ.

ಈ ಪತ್ರಕ್ಕೆ ಪ್ರಧಾನಿಗಳ ಸ್ಪಂದನ ಇನ್ನೂ ಎಲ್ಲೂ ಪ್ರಕಟವಾಗಿಲ್ಲ.

ಸರಕಾರಸ್ಥರ ನುಡಿಗಳೂ ಪರಿವಾರಸ್ಥರ ನಡೆಗಳೂ


ಪುಟ 13 ರಿಂದ

‘ಲವ್ ಜಿಹಾದ’ ವಿರುದ್ಧ ಪ್ರಚಾರ ನಡೆಸಲು ನಿರ್ಧರಿಸಿದೆಯಂತೆ (ದಿ ಹಿಂದೂ, ಸಪ್ಟಂಬರ್ 21).

ಈ ನಡುವೆ, ‘ಲವ್ ಜಿಹಾದ’ ಎಂದರೇನೆಂದೇ ಅರಿಯದ ಗೃಹ ಮಂತ್ರಿಗಳ ಇಲಾಖೆಯಲ್ಲಿ ಕೆಲಸ ಮಾಡಿದ್ದ, ಮಾಡುತ್ತಿರುವ ಹಿರಿಯ ಪೋಲೀಸ್ ಅಧಿಕಾರಿಗಳ ನಡುವೆ ಮಾತ್ರ ಈ ಕೇಸರಿ ಪ್ರಚಾರ ವ್ಯಾಪಕ ಪರಿಣಾಮ ಬೀರಿದೆಯಂತೆ. ‘ಟಾಪ್‌ಕಾಪ್’ ಎನ್ನುವುದು ದೇಶದ ಹಿರಿಯ ಪೋಲೀಸ್ ಅಧಿಕಾರಿಗಳ ಒಂದು ಅಂತರ್ಜಾಲ ಚರ್ಚಾವೇದಿಕೆ. ಇದರಲ್ಲಿ ಈ ಕುರಿತ ಚರ್ಚೆ ಎಂತಹ ಮಟ್ಟ ತಲುಪಿತ್ತೆಂದರೆ ಕೆಲವರು ಮುಸ್ಲಿಮರು ಮತ್ತು ಇಸ್ಲಾಮ್ ವಿರುದ್ಧ ಹಗೆಕಾರಲಾರಂಬಿಸಿ ಆ ಚರ್ಚೆಯನ್ನು ಅರ್ಧಕ್ಕೇ ನಿಲ್ಲಿಸಬೇಕಾಗಿ ಬಂದಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ‘ಇದೇನಿದು ‘ನಾವು’ ಮತ್ತು ‘ಅವರು’, ನೀವು ಈ ಸೇವೆಯನ್ನು ಸೇರಿದಾಗ ಕೈಗೊಂಡಿರುವ (ದೇಶದ ಸಮಗ್ರತೆಯ) ಪ್ರತಿಜ್ಞೆ ನೆನಪಿಲ್ಲವೇ ಎಂದು ಒಬ್ಬ 1996 ಬ್ಯಾಚಿನ ಐಪಿಎಸ್ ಅಧಿಕಾರಿ 2003 ಬ್ಯಾಚಿನ ಅಧಿಕಾರಿಗೆ ಛೀಮಾರಿ ಹಾಕಬೇಕಾಗಿ ಬಂತಂತೆ. ಎಷ್ಟು ‘ಲವ್‌ಜಿಹಾದ್’ ಪ್ರಕರಣಗಳನ್ನು ನೋಡಿದ್ದೀರಿ ಎಂಬ ಪ್ರಶ್ನೆಗಳಿಗೆ ಉತ್ತರಿಸಬೇಕು ಎಂದೂ ಅವರರಾರಿಗೂ ಅನಿಸುತ್ತಿಲ್ಲ ಎಂಬುದು ಬಹಳ ಆತಂಕದ ಸಂಗತಿ ಎಂದು ಕೆಲವು ಪ್ರಜ್ಞಾವಂತ ಹಿರಿಯ ಪೋಲೀಸ್ ಅಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಅತ್ತ ಬಿಜೆಪಿ ಆಳ್ವಿಕೆಯ ಮತ್ತೊಂದು ರಾಜ್ಯವಾದ ರಾಜಸ್ತಾನದ ಬಿಕಾನೇರ್‌ನಲ್ಲಿ ಸರ್ಕಾರಿ ಶಾಲೆಯೊಂದರಲ್ಲಿ ಹನ್ನೊಂದು ದಲಿತ ವಿದ್ಯಾರ್ಥಿಗಳನ್ನು ಒಬ್ಬ ಮೇಲ್ಜಾತಿ ಶಿಕ್ಷಕನಿಗೆಂದು ಪ್ರತ್ಯೇಕವಾಗಿ ಇಟ್ಟಿದ್ದ ಮಣ್ಣಿನ ಮಡಿಕೆಯಿಂದ ನೀರು ಕುಡಿದದ್ದಕ್ಕಾಗಿ ಶಾಲೆಯಿಂದ ವಜಾ ಮಾಡಲಾಯಿತು ಎಂಬ ಸುದ್ದಿ ಪ್ರಕಟವಾದ ಸಂಚಿಕೆಯಲ್ಲೇ ಮೊದಲು ಹಿಂದೂ ಧರ್ಮದಲ್ಲಿ ಈ ಜಾತೀಯತೆ, ಅಸ್ಪೃಶ್ಯತೆ ಮುಂತಾದವುಗಳು ಇರಲೇ ಇಲ್ಲ, ಮಧ್ಯಯುಗದಲ್ಲಿ ಮುಸ್ಲಿಮರ ಅತಿಕ್ರಮಣದೊಂದಿಗೆ ಇವೆಲ್ಲ ನುಸುಳಿದವು ಎಂದು ವಾದಿಸುವ ಒಬ್ಬ ಆರೆಸ್ಸೆಸ್ ವಕ್ತಾರನ ಮೂರು ಪುಸ್ತಕಗಳನ್ನು ಆರೆಸ್ಸೆಸ್ ಮುಖ್ಯಸ್ಥರು ಬಿಡುಗಡೆ ಮಾಡಿದ ಸುದ್ದಿಯೂ ಪ್ರಕಟವಾಯಿತು.(ಹಿಂದುಸ್ತಾನ್ ಟೈಮ್ಸ್, ಸಪ್ಟಂಬರ್ 22). ಈ ಪುಸ್ತಕಗಳಿಗೆ ಮೂವರು ಹಿರಿಯ ಆರಸ್ಸೆಸ್ ಪಂಡಿತರು ಮುನ್ನುಡಿ ಬರೆದಿದ್ದಾರೆ!

ಕೋಮು ಘರ್ಷಣೆಗಳಿಗೆ ಹತ್ತು ವರ್ಷ ವಿರಾಮ ಘೋಷಿಸಿ ಎಂಬ ಪ್ರಧಾನಿಗಳ ಕೆಂಪುಕೋಟೆ ಕ-ರೆಯ ನೆನಪು ಇನ್ನೂ ಮಾಸಿರದಿರುವಾಗಲೇ ಈ ರೀತಿ ಚರಿತ್ರೆಯ ಪುನರ್ಲೇಖನದ ಪುನರಾವರ್ತನೆ ಯೊಂದಿಗೇ ಹಿಂದೆಂದೂ ಕಾಣದಂತಹ ಇಂತಹ ಪ್ರಚಾರಗಳು, ಚರ್ಚೆಗಳು!



ಪ್ರಧಾನಿ ಭೇಟಿ.......

ಪುಟ 3 ರಿಂದ

ಎಂಬ ಮಾತಿಗೆ ಏನರ್ಥವಿದೆ? ಅಂದರೆ ಕೇಂದ್ರದ ಅಣತಿ, ಯೋಜನೆ, ಯೋಚನೆಗಳನ್ನಷ್ಟೇ ಪಾಲಿಸಿ ಎಂದೇ? ಕೇಂದ್ರ ರಾಜ್ಯಗಳ ಸಂಬಂಧಗಳು ಪುನರ್ ರಚನೆಯಾಗದಿದ್ದರೆ ನಿಜಕ್ಕೂ ಒಕ್ಕೂಟದ ತತ್ವ ರಕ್ಷಿಸಲಾದೀತೇ? ಇವರ ಮೇಕ್ ಇನ್ ಇಂಡಿ-ಯಾ ಕಲ್ಪನೆ, ಯೋಜನೆಗಳು ಉದಾರೀಕರಣ, ಜಾಗತೀಕರಣದ ಜಾರಿಯ ವಿಸ್ತರಣೆಯಲ್ಲದೇ ಮತ್ತೇನು? ಇವುಗಳಿಂದ ಸಾಧಿಸುವುದಾದರೂ ಯಾರ ಅಭಿವೃದ್ಧಿ?

ಇಲ್ಲಿ ಮೋದಿ ರಾಜ್ಯದ ಮುಖ್ಯಮಂತ್ರಿಗಳ ಮಾತಿಗೆ ಸ್ಪಂದಿಸದೇ ಇರುವಲ್ಲಿ ಸರ್ವಾಧಿಕಾರದ ಗತ್ತಿದೆ. ಯಾಕೆಂದರೆ ಮೋದಿ ಶಾಸನ ಸಭೆಗಳಲ್ಲೂ ಬಹುತೇಕ ಪ್ರಜಾಸತ್ತಾತ್ಮಕವಾಗಿ ಚರ್ಚೆ, ಪ್ರತಿಕ್ರಿಯೆಗಳನ್ನು ಕೊಡುವುದೇ ಅತೀ ವಿರಳ. ಇತರರ ಮಾತು, ಅಭಿಪ್ರಾಯಗಳನ್ನು ಗೌರವಿಸದೇ ಇರುವವವರು ಪ್ರಜಾಪ್ರಭುತ್ವಕ್ಕೆ ಭೂಷಣರೇ?

ಈ ಸಂದರ್ಭದಲ್ಲಿ ಒಂದು ಘಟನೆಯನ್ನು ಗಮನಿಸಲೇಬೇಕು. ಅದೇನೆಂದರೆ ತುಮಕೂರಿನ ಸಭೆಯಲ್ಲಿ ಸಿದ್ಧರಾಮಯ್ಯನವರ ಬಾಷಣಕ್ಕೆ ಬಿಜೆಪಿಯ ಕೆಲವು ಕಾರ್ಯಕರ್ತರು ‘ಮೋದಿ, ಮೋದಿ’ ಅಂತಾ ಕೂಗಿ ಅಡ್ಡಿಗೊಳಿಸಿದ್ದು. ಇದು ಅಕಸ್ಮಾತ್ ನಡೆದ ಘಟನೆಯಲ್ಲ. ಯಾಕೆಂದರೆ ಮೋದಿ ಭಾಗವಹಿಸುವ ಯಾವುದೇ ಸಭೆಗಳಲ್ಲಿ ಬೇರೆ ಪಕ್ಷದ ಪ್ರಮುಖರು ಭಾಗವಹಿಸಿದಾಗ ಇಂತಹುದೇ ಘಟನೆಗಳು ಸಂಭವಿಸುತ್ತಿರುವುದು ನಿರಂತರವಾಗಿ ನಡೆಯುತ್ತಲೇ ಇದೆ. ಈ ಬಗ್ಗೆ ಮೋದಿ ಭೇಟಿಯ ಕೆಲವೇ ದಿನಗಳ ಹಿಂದೆ, ಕಾರ್ಯಕರ್ತರಿಂದ ಗಲಾಟೆ ಮಾಡಿಸುವ ಬಿಜೆಪಿ ಪರಿಪಾಠದ ಬಗ್ಗೆ ಮಾಜಿ ಸಚಿವ ವೀರಪ್ಪ ಮೊಯ್ಲಿವರು ಆಕ್ಷೇಪ ಎತ್ತಿದ್ದರು. ಆದರೆ ಶಿಷ್ಟಾಚಾರದ ಅನಿವಾರ್ಯತೆ ಮತ್ತು ಸರಕಾರದ ಕರ್ತವ್ಯದ ಹಿನ್ನೆಲೆಯಲ್ಲಿ ಮೋದಿ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ರಾಜ್ಯದ ಮುಖ್ಯಮಂತ್ರಿಗಳು ಪಾಲ್ಗೊಳ್ಳುವ ನಿರ್ಧಾರವಿತ್ತು. ಹೀಗಿರುವಾಗ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸುವ ಹೊಣೆ ಬಿಜೆಪಿ ನಾಯಕರ ಮೇಲಿತ್ತು. ಆದರೆ ಮೋದಿ ಮಾತ್ರ ಮಹಾನಾಯಕ ಎಂದೇ ಬಿಂಬಿಸುತ್ತಾ ಹಿಟ್ಲರನ ವ್ಯಕ್ತಿತ್ವದ ಮಾದರಿ ನಿರ್ಮಾಣದಲ್ಲಿರುವ ಸಂಘ ಪರಿವಾರದ್ದು ಅಪಾಯಕರ ಪ್ರವೃತ್ತಿ. ಇಂತಹವರು ಪ್ರಜಾಪ್ರಭುತ್ವದ ಪ್ರಾಥಮಿಕ ಅಂಶ ಪಾಲಿಸಿಯಾರೇ?

ಇನ್ನು ಸಿದ್ಧಗಂಗಾ ಮಠಕ್ಕೆ ಭೇಟಿ ಎನ್ನುವುದು ಅವರ ವೈಯುಕ್ತಿಕ ನಂಬಿಕೆ ಎನ್ನಬಹುದಾದರೂ ಅಲ್ಲಿಯೂ ಮೋದಿ ಸಂಘದ ಪ್ರಚಾರಕನ ರಾಜಕೀಯವನ್ನೇ ಮಾಡಿದರು. ಕರ್ನಾಟಕದಲ್ಲಿ ಜಾತಿ ರಾಜಕಾರಣದ ನೆಲೆಯನ್ನು ಗಟ್ಟಿಗೊಳಿಸುವ ಬಿಜೆಪಿ-ಸಂಘಪರಿವಾರದ ಪ್ರಯತ್ನಗಳು ಹೊಸದೇನಲ್ಲ. ರಾಜ್ಯದ ವಿವಿಧೆಡೆ ಕೆಲವು ವೀರಶೈವ ಮಠಗಳನ್ನು ತಮ್ಮ ಜಾಲದೊಳಗೆ ಹಾಕಿಕೊಳ್ಳುವ ಯಶಸ್ವಿ ಯತ್ನವನ್ನು ಮಾಡಿದ್ದ ಯಡಿಯೂರಪ್ಪನವರ ಪುನರಾಗಮನ ಮತ್ತೆ ಅದಕ್ಕೆ ಜಾಲನೆ ಕೊಟ್ಟಿದೆ. ಅಲ್ಲಿಯೂ ಸ್ವಾಮೀಜಿ, ಸಿದ್ಧಗಂಗಾ ಮಠದ ಕೊಡುಗೆಗಳನ್ನು ಶ್ಲಾಘಿಸಿದ ಮೋದಿ ಮುಖ್ಯವಾಗಿ ಸಂಸ್ಕೃತ ಕಲಿಕೆ ಮತ್ತು ಸಂಸ್ಕೃತವನ್ನು ಎಲ್ಲಾ ಜ್ಞಾನಗಳ ಕೇಂದ್ರವಾಗಿದೆ ಎಂದೆಲ್ಲಾ ಇಲ್ಲದ ಹಿರಿಮೆ ಹಚ್ಚಿ ಉತ್ಪ್ರೇಕ್ಷಿಸಿ ಹೊಗಳಿದ್ದು ಭಾರತೀಯ ಇತರೆ ಭಾಷೆಗಳನ್ನು ನಿರ್ಲಕ್ಷಿಸಿದ್ದು ಸಂಘದ ಪ್ರಚಾರಕನ ಫ್ಯಾಸಿಸ್ಟ್ ಸೈದ್ಧಾಂತಿಕ ಧಾಳಿಯೇ ಆಗಿದೆ. ‘ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ದಾಟಿಸಲು ಸಂಸ್ಕೃತ ಕಲಿಕೆಯೊಂದೇ ಮಾರ್ಗ’ ಎಂದಿರುವ ಮೋದಿ ಮನಸ್ಸಿನಲ್ಲಿರುವುದು ಏನು? ಬಹುತ್ವದ ಭಾರತೀಯ ಸಂಸ್ಕೃತಿಯನ್ನು ನಿರ್ಲಕ್ಷಿಸುವ, ನಿರ್ನಾಮಿಸುವ ಫ್ಯಾಸಿಸ್ಟ್ ಅಜೆಂಡಾ ಇದಲ್ಲವೇ?

ಬಿಜೆಪಿ ಕಾರ್ಯಕರ್ತರ ಸಭೆಯಲ್ಲೂ ಮಾತಿನ ಮೋಡಿಗೇನೂ ಬರವಿರಲಿಲ್ಲ. ಆದ-ರೆ ಯಾವುದಕ್ಕೂ ನಿರ್ದಿಷ್ಟ ಯೋಜನೆಗಳು, ಕಾರ್ಯಕ್ರಮಗಳೇ ಇರುವುದಿಲ್ಲ. ‘ಸಣ್ಣ ವಿಷಯಗಳ ಬಗ್ಗೆ ಮಾತನಾಡುವ, ಚಿಂತಿಸುವ ತಾನು ಸಣ್ಣವ’ ಎಂದು ಹೇಳಿ ಜನರ ಮನ ಗೆಲ್ಲುವ ಪ್ರಯತ್ನವನ್ನು ಮರೆಯಲಿಲ್ಲ. ಆದರೆ ಅವರು ಕಸಗುಡಿಸುವ, ಸ್ವಚ್ಛತಾ ಆಂದೋಲನ ನಡೆಸುವ ಯೋಜನೆಯೇ ಗಾಂದೀಜಿಯವರ ಆದರ್ಶದ ಪಾಲನೆಯಂತೆ! ಉಳಿದಂತೆ ಗಾಂಧೀಜಿಯವರ ಪ್ರಮುಖ ಆದರ್ಶಗಳನ್ನು ಇದರೊಂದಿಗೆ ಗುಡಿಸಿ ಹಾಕುವ, ಗಾಂಧಿಗೆ ವಿರುದ್ಧವಾಗಿ ಗಾಂಧೀಜಿಯನ್ನೇ ಬಳಸುವ ಜಾಣತನಕ್ಕೆ ಏನೆನ್ನಬೇಕು!

ಅಂತೂ ಇತ್ತೀಚಿನ ಚುನಾವಣೆಗಳ ಫಲಿತಾಂಶಗಳಿಂದ ಮಂಕಾಗಿ ಹೋಗಿರುವ ರಾಜ್ಯ ಬಿಜೆಪಿ ಮೋದಿಯ ಭೇಟಿಯಿಂದ ಸ್ವಲ್ಪ ಚೇತರಿಸಿಕೊಂಡಂತೆ ಭಾವಿಸಿದೆ. ಆದರೆ ಅದೇ ಗುಂಪುಗಾರಿಕೆ ಬೇಗುದಿಯಿಂದ ಹೊರಬರದೇ ಇರುವಾಗ ‘ಮೋಡಿ, ಮೀಡಿಯಾ’ ಆಟಗಳು, ಪ್ಯಾಕೇಜ್ ಭೇಟಿಗಳು ನೀಡುವ ಚೈತನ್ಯ ಎಷ್ಟು ದಿನಗಳು ಬಾಳಿಯಾವು?

●

ಭಾರತದ ಮೇಲೆ ಹೇರಿದ ವೈದಿಕವಲ್ಲದ....

ಪುಟ 2 ರಿಂದ

ತಾತ್ವಿಕ ಮತ್ತು ಆಧ್ಯಾತ್ಮಿಕ ಗಹನತೆಯಿಂದ ತುಂಬಿರುವ ಅವುಗಳ ಭಾಗಗಳ ಮೇಲೆ ಶಂಕರರು ಬರೆದಿರುವ ಭಾಷ್ಯ ಆಳವಾದ ಆಧ್ಯಾತ್ಮಿಕ ಅಂತದೃಷ್ಟಿಯಿಂದ ಬೆಳಗುತ್ತಿರುವ ಅತ್ಯಂತ ಸೊಗಸಾದ ತತ್ವ ಜಿಜ್ಞಾಸೆ. ಆ ಭಾಷ್ಯಗಳಲ್ಲಿ ಅವರು (ಶಂಕರರು) ಬಳಸಿರುವ ವಿಶಿಷ್ಟ ರೀತಿಯಿಂದಾಗಿ ಒಂದು ಸೊಗಸಾದ ಗದ್ಯ-ಸಂಕ್ಷಿಪ್ತತೆ, ಶಕ್ತಿ, ಸರಳತೆ, ಕಾವ್ಯ ಲಾಲಿತ್ಯಗಳನ್ನುಳ್ಳ ಗದ್ಯ ನಮಗೆ ದೊರೆತಿದೆ.”


ಈ ಮಾತುಗಳು ಪ್ರಸ್ಥಾನ ತ್ರಯದ ಎರಡು ಪ್ರಧಾನ ಗ್ರಂಥಗಳು ಅಪೌರುಷೇಯ (ಯಾವ ಮನುಷ್ಯನೂ ಬರೆಯಲಾರದ ಗ್ರಂಥ) ಎನಿಸಿಕೊಂಡ ಉಪನಿಷತ್ತುಗಳು ಮತ್ತು ಸ್ವತಃ ಭಗವಾನ್ ಶ್ರೀ ಕೃಷ್ಣನೇ ಭೋದಿಸಿದನೆನ್ನಲಾದ ಭಗವದ್ಗೀತೆ ಕೂಡ ಶಂಕರಾಚರ್ಯರೇ ಬೆಳಕಿಗೆ ತಂದದ್ದು. ಇನ್ನು ಮೂರನೇ ಗ್ರಂಥಉಪನಿಷತ್ತುಗಳ ಮುಖ್ಯ ವಾಕ್ಯಗಳನ್ನು ಪೋಣಿಸಿ ನೀಡಿದ ಗ್ರಂಥವೆನ್ನಲಾದ ಬ್ರಹ್ಮ ಸೂತ್ರವನ್ನು ಬಾದರಾಯಣ ಎನ್ನುವವರು ರಚಿಸಿದರು ಎಂದು ಪ್ರಚಲಿತವಾಗಿದೆ. ಅದ-ಕ್ಕೆ ಕೂಡ ಶಂಕರರು ಭಾಷ್ಯ ಬರೆದು ಪ್ರಚಾರ ನೀಡಿದರು ಎಂಬುದು ಕೂಡ ಜನಜನಿತ ವಿಷಯ. ಆದ್ದರಿಂದ ವೇದಗಳನ್ನು ಕೈ ಬಿಟ್ಟು ಈ ಪ್ರಸ್ಥಾನ ತ್ರಯಗಳೇ ಹಿಂದೂ ಧರ್ಮದ ಆಧಾರ ಎಂಬ ಅದೇ ಸಮಯದಲ್ಲಿ ಇದು ವೈದಿಕ ಧರ್ಮ ಎಂದು ಹಿಂದೂ ಧರ್ಮದ ಹೊಸ ಅವೃತ್ತಿಗೆ, ಭೌದ್ಧ ಧರ್ಮವನ್ನು ಭಾರತದಿಂದ ತೊಲಗಿಸಲು ಬೇಕಾದ ತಾತ್ವಿಕ ನೆಲೆಯನ್ನು ರೂಪಿಸಿದ ಕೀರ್ತಿ ಶಂಕರರಿಗೇ ಸಲ್ಲುತ್ತದೆ.

ಉಪನಿಷತ್ತುಗಳಲ್ಲಿ ಏನು ಹೇಳಿದೆ ಮತ್ತು ಅವುಗಳ ಹತ್ತೆಂಟು ವಿಚಾರಗಳಲ್ಲಿ ಯಾವುದನ್ನು ಮೇಲಕ್ಕೆತ್ತಿ ಹಿಡಿದು ಪ್ರಚಾರಕ್ಕೆ ತರಲಾಗಿದೆ ಎಂಬುದನ್ನು ತಿಳಿದುಕೊಳ್ಳುವ ಮೊದಲು ಈ ಹಿನ್ನೆಲೆ ಅಗತ್ಯ.

ಒಟ್ಟಿನಲ್ಲಿ ಉಪನಿಷತ್ತುಗಳೇ ಮುಂದಿನ ಹಿಂದೂ ಧರ್ಮದ ಪ್ರಧಾನ ರೂಪಕ್ಕೆ ಆಧಾರಭೂತವಾದವು. ಆ ಮೂಲಕ ಭಾರತೀಯ ಜನ ಸಮುದಾಯದ ಮುಂದಿನೆಲ್ಲಾ ಜೀವನದ ಮೇಲೆ ಅತಿ ದೊಡ್ಡ ಪರಿಣಾಮವನ್ನು ಬೀರಿದವು.


●

JANASHAKTHI KANNADA VARA PATRIKE OCT 5, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283









ಮಂಗಳ ಗ್ರಹದ ಕಕ್ಷೆ ಪ್ರವೇಶಿಸಿದ 'ಮಂಗಳಯಾನ'

ಮಂಗಳ ಗ್ರಹದಲ್ಲಿ ಕೋಟ್ಯಾಂತರ ವರ್ಷಗಳ ಹಿಂದೆ ಜೀವಿಗಳು ಇದ್ದುವೇ? ಜೀವಿಗಳ ಇರುವಿಕೆಗೆ ಕಾರಣವಾಗಿರುವ ಮಿಥೇನ್ ಯಾವ ಪ್ರಮಾಣದಲ್ಲಿ ಅಲ್ಲಿದೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಸೇರಿದಂತೆ ಭೂಮಿಯಿಂದ ಇತರೆ ಗ್ರಹಗಳಿಗೆ ಉಪಗ್ರಹ ರವಾನಿಸಲು ಅವಶ್ಯವಿರುವ ತಂತ್ರಜ್ಞಾನವನ್ನು ಸ್ವತ: ಅಭಿವೃದ್ಧಿಪಡಿಸುವುದನ್ನು ಭಾರತ ಖಾತರಿಪಡಿಸಿಕೊಳ್ಳುವುದು ಮಂಗಳಯಾನ ಉಡಾವಣೆಯ ಉದ್ದೇಶವಾಗಿತ್ತು.

ಭಾರತಕ್ಕೆ ಮೊದಲ ಯತ್ನದಲ್ಲೇ ಯಶಸ್ಸು:

ಇದೀಗ ಭಾರತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಯಾರಿಸಿದ್ದ 'ಮಂಗಳಯಾನ' ಉಪಗ್ರಹವು ಯಶಸ್ವಿಯಾಗಿ ಮಂಗಳ ಗ್ರಹದ ಕಕ್ಷೆಯನ್ನು ಪ್ರವೇಶಿಸಿ ಎಲ್ಲೆಡೆ ಹರ್ಷ ಮೂಡಿಸಿದೆ. ಭೂಮಿಯಿಂದ ಮಂಗಳ ಗ್ರಹದತ್ತ ಕಳೆದ ವರ್ಷ ನವೆಂಬರ್ 5ರಂದು ತನ್ನ ಪ್ರಯಾಣ ಆರಂಭಿಸಿದ ಈ ನೌಕೆ ಒಟ್ಟು 300 ದಿನಗಳ ಕಾಲ 66 ಕೋಟಿ ಕಿ.ಮೀ. ದೂರ ಬಾಹ್ಯಾಂತರಿಕ್ಷದ ಯಾನ ನಡೆಸಿ ಕೆಂಪುಗ್ರಹದ ಕಕ್ಷೆ ತಲುಪಿತು. 2014 ಸೆಪ್ಟೆಂಬರ್ 24 ರ ಬೆಳಿಗ್ಗೆ ಹೊತ್ತಿಗೆ ಅದು ಮಂಗಳನ ಉತ್ತಮ ಗುಣಮಟ್ಟದ ಐದು ಛಾಯಾಚಿತ್ರಗಳನ್ನು ತೆಗೆದು ಕಳುಹಿಸಿದೆ. ಬೆಂಗಳೂರಿನ ಕೆಂಗೇರಿ ಬಳಿಯಿರುವ ಬ್ಯಾಲಾಳು ಆಂಟೇನಾ ಕೇಂದ್ರ, ಅಮೇರಿಕಾದ ಗೋಲ್ಡ್ ಸ್ಟೋನ್, ಸ್ಪೇನ್‌ನ ಮ್ಯಾಡ್ರಿಡ್, ಆಸ್ಟ್ರೇಲಿಯಾದ ಕ್ಯಾನ್‌ಬೆರಾ ಕೇಂದ್ರಗಳು ಏಕಕಾಲಕ್ಕೆ ಈ ಉಪಗ್ರಹದ ಸಂಕೇತಗಳನ್ನು ಸ್ವೀಕರಿಸಿವೆ.

ಸೋವಿಯತ್ ರಷ್ಯಾ, ಅಮೇರಿಕಾ, ಮತ್ತು ಯೂರೋಪ್ ನಂತರ ಮಂಗಳ ಪ್ರವೇಶ ಮಾಡಿದ ರಾಷ್ಟ್ರವಾಗಿದ್ದರೂ ಮೊದಲ ಯತ್ನದಲ್ಲಿಯೇ ಯಶಸ್ಸು ಗಳಿಸಿದ್ದು ಭಾರತದ ಹೆಗ್ಗಳಿಕೆ. ಈ ಉಪಗ್ರಹ ಯೋಜನಾ ವೆಚ್ಚ ಕೇವಲ ರೂ. 450 ಕೋಟಿ. ನಮ್ಮ ದೇಶದಲ್ಲಿಯೇ ಸಂಶೋಧನೆ ನಡೆಸಿ ಸ್ವಾವಲಂಬಿಯಾಗಿ ತಂತ್ರಜ್ಞಾನ ಅಭಿವೃದ್ಧಿಪಡಿಸಿದಲ್ಲಿ ಬಲು ಅಗ್ಗವಾಗಿ ಏನೆಲ್ಲಾ ಲಭ್ಯವಾಗಬಹುದು ಎನ್ನುವುದಕ್ಕೆ ಇದೇ ಸಾಕ್ಷಿ. ಇಂಥದೇ ಉಪಗ್ರಹ ತಯಾರಿಸಲು ಇತರೇ ದೇಶಗಳು ಸುಮಾರು ಇದಕ್ಕಿಂತಲೂ 10 ಪಟ್ಟು ಹೆಚ್ಚು ಹಣ ವ್ಯಯಿಸಿವೆ.

ಹಲವು ಹಂತಗಳಲ್ಲಿ ಬಾಹ್ಯಾಕಾಶ ನೌಕೆಯ ಪಯಣ:

ಪಿಎಸ್‌ಎಲ್‌ವಿ ಎಂಬ ಭಾರತದ ನಂಬಿಕಸ್ತ ರಾಕೆಟ್ (ಇಂಧನವೂ ಸೇರಿದಂತೆ) ಒಟ್ಟು ತೂಕ 1,350 ಕೆ.ಜಿ. ಇದರಲ್ಲಿ ಉಪಕರಣಗಳ ತೂಕ 15 ಕೆ.ಜಿ. ಉಪಗ್ರಹ ಉಡಾವಣೆಯಲ್ಲಿ ಹಲವು ಹಂತಗಳಿದ್ದು, ಮೊದಲಿಗೆ ಉಡಾವಣೆ, ನಂತರ ನೌಕೆಯನ್ನು ನಿಗದಿತ ಪಥದಲ್ಲಿ ಅಳವಡಿಸಿ ಅದರ



ವೇಗ ಹೆಚ್ಚಿಸುವುದು, ಆಮೇಲೆ ಮಂಗಳ ಕಕ್ಷೆಗೆ ಅಳವಡಿಸುವುದು, ಇತ್ಯಾದಿ..

ಈ ಸುಧೀರ್ಘ ಪಯಣದ ಹಾದಿಯಲ್ಲಿ ಸುಮಾರು ಆರು ಹಂತಗಳ ಪ್ರಕ್ರಿಯೆ ನಡೆಸಲಾಗಿತ್ತು. ನೌಕೆಯು ನಿಗದಿತ ಪಥದಲ್ಲಿ ಸಂಚರಿಸುವಂತೆ ಮಾಡುವ ಪಥ ಸರಿಪಡಿಸುವಿಕೆ ಕಾರ್ಯವನ್ನು ಇದುವರೆಗೆ ನಾಲ್ಕು ಹಂತಗಳಲ್ಲಿ ಪೂರೈಸಲಾಗಿದೆ. ಸುಮಾರು 300 ದಿನಗಳ ಕಾಲ ಬಳಸದೇ ಇದ್ದ ಮುಖ್ಯ ದ್ರವ ಎಂಜಿನ್‌ನ್ನು ಮೊನ್ನೆ ಸೋಮವಾರ ಪರೀಕ್ಷಾರ್ಥವಾಗಿ ನಾಲ್ಕು ಸೆಕೆಂಡುಗಳ ಕಾಲ ಉರಿಸಲಾಗಿತ್ತು.

ಭೂಮಿಯಿಂದ ನೌಕೆಯ ಮಂಗಳ ಕಕ್ಷೆಗೆ ಇರುವ 'ರೇಡಿಯೋ ದೂರ' ಸುಮಾರು 21.5 ಕೋಟಿ ಕಿ.ಮೀ. ಇಷ್ಟು ದೂರಕ್ಕೆ ಸಂಕೇತಗಳನ್ನು ಒಂದು ಬದಿಯಿಂದ ಇನ್ನೊಂದು ಬದಿಗೆ ಕಳುಹಿಸಲು ಸುಮಾರು 6 ನಿಮಿಷ ಬೇಕು. ಮಂಗಳ ನೌಕೆಯಲ್ಲಿರುವ ಸೌರಫಲಕಗಳು ತಾವೇ ಬಿಚ್ಚಿಕೊಂಡು 840 ವ್ಯಾಟ್‌ಗಳಷ್ಟು ವಿದ್ಯುತ್ ಶಕ್ತಿಯನ್ನು ಸೂರ್ಯನ ಬೆಳಕಿನಲ್ಲೇ ಉತ್ಪಾದಿಸುತ್ತವೆ. ಈ ಉಪಗ್ರಹವನ್ನು ಸದ್ಯಕ್ಕೆ ಬೆಂಗಳೂರಿನ ಪೀಣ್ಯದಲ್ಲಿರುವ ಇಸ್ರೋ ಸಂಸ್ಥೆಯ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮ್ಯಾಂಡ್ ನೆಟ್‌ವರ್ಕ್ ಕೇಂದ್ರವು ಬ್ಯಾಲಾಳು ಆಂಟೇನಾ ಕೇಂದ್ರದ ನೆರವಿನೊಂದಿಗೆ ನಿಗಾವಹಿಸಿ ನಿರ್ವಹಿಸುತ್ತಿದೆ. ಈ ನೌಕೆಯು ಸುಮಾರು 6 ರಿಂದ 10 ತಿಂಗಳು ಮಾತ್ರವೇ ನಿಗದಿತ ಕಕ್ಷೆಯಲ್ಲಿದ್ದು ನಮ್ಮ ಸಂಪರ್ಕದಲ್ಲಿರುತ್ತದೆ. ಆಮೇಲೆ ಈ ಉಪಗ್ರಹದಲ್ಲಿರುವ ಇಂಧನ ಮುಗಿದು ಹೋಗುತ್ತದೆ.

ಮಂಗಳಯಾನದ ಉಪಗ್ರಹದಲ್ಲಿ ಏನೇನು ಉಪಕರಣಗಳಿವೆ?

ಮಂಗಳ ಗ್ರಹದ ವಾಯುಮಂಡಲದ ಅಧ್ಯಯನ ಮಾಡುವ ಉಪಕರಣಗಳು :

ಲೈಮನ್ ಅಲ್ಫಾ ಪೋಟೋಮೀಟರ್ (1.97 ಕೆಜಿ) : ಇದು ಮಂಗಳ ಗ್ರಹದ ಮೇಲಿರುವ ಜಲಜನಕ ಮತ್ತು ಡ್ಯುಟಿರಿಯಂ ಮೂಲಧಾತುಗಳನ್ನು ಅಳೆಯುತ್ತದೆ, ಇದರಿಂದ ಮಂಗಳನಲ್ಲಿನ ನೀರಿನ ಕುರಿತು ತಿಳಿಯಬಹುದು.

ಮಿಥೇನ್ ಸೆನ್ಸರ್ ಫಾರ್ ಮಾರ್ಸ್ (2.94 ಕೆಜಿ): ಇದು ಮಂಗಳನಲ್ಲಿರುವ ಮಿಥೇನ್



ಅನಿಲವನ್ನು ಪತ್ತೆ ಮಾಡುವುದಲ್ಲದೆ, ಅಲ್ಲಿರುವ ಯಾವುದೇ ವಿಕಿರಣಶೀಲ ವಸ್ತುಗಳ ಬೆಳಕನ್ನು ಈ ಸೆನ್ಸರ್‌ಗಳು ಗ್ರಹಿಸಿ ನಮಗೆ ತಿಳಿಸುತ್ತವೆ.

ಮಂಗಳದಲ್ಲಿನ ಖನಿಜಾಂಶಗಳ ಅಧ್ಯಯನಕ್ಕಾಗಿ:

ಮಾರ್ಸ್ ಎಕ್ಸೋಸ್ಪೆರಿಕ್ ನ್ಯೂಟ್ರಲ್ ಕಾಂಪೋಜಿಷನ್ ಅನಲೈಸರ್ (3.56 ಕೆಜಿ): ಈ ಉಪಕರಣವು ಮಂಗಳ ಗ್ರಹದ ಮೇಲ್‌ಪದರು, ರಚನೆ, ಇತ್ಯಾದಿ ಕುರಿತು ತಿಳಿಸುತ್ತದೆ.

ಮಂಗಳ ಗ್ರಹದ ಮೇಲ್ಪದರು ಅಧ್ಯಯನ ಮಾಡಲು:

ಮಾರ್ಸ್ ಕಲರ್ ಕ್ಯಾಮೆರಾ (1.27 ಕೆಜಿ): ಮೂರು ಬಣ್ಣಗಳ ಛಾಯಾಚಿತ್ರ ತೆಗೆಯಬಲ್ಲದು. ಇದರಲ್ಲಿರುವ ಶಕ್ತಿಶಾಲಿ ಮಸೂರಗಳು ಈ ಗ್ರಹದ ಮೇಲ್ಪದರಿನ ಗುಣಲಕ್ಷಣಗಳು, ರಚನೆ, ವಾತಾವರಣ ಇತ್ಯಾದಿ ಕುರಿತು ಮಾಹಿತಿ ರವಾನಿಸುತ್ತವೆ. ಮಂಗಳನಿಗೆ ಪೋಬೋಸ್ ಮತ್ತು ಡಿಮೋಸ್ ಎಂಬ ಎರಡು ಉಪಗ್ರಹಗಳಿದ್ದು, ಅವುಗಳ ಚಿತ್ರಗಳನ್ನೂ ಈ ಕ್ಯಾಮೆರಾ ಕಳುಹಿಸುತ್ತದೆ.

ಥರ್ಮಲ್ ಇನ್‌ಫ್ರಾ ರೆಡ್ ಇಮೇಜಿಂಗ್ ಸ್ಪೆಕ್ಟ್ರೋಮೀಟರ್ (3.2 ಕೆಜಿ): ಇದು ಮಂಗಳ ಗ್ರಹದ ಉಷ್ಣತೆಯನ್ನು ನಿರಂತರವಾಗಿ ದಾಖಲಿಸುತ್ತಾ ಅಲ್ಲಿನ ಮಣ್ಣು, ಖನಿಜಗಳ ಕುರಿತು ಮಾಹಿತಿ ಕಳುಹಿಸುತ್ತದೆ.

ಇದೇ ವೇಳೆಯಲ್ಲಿ ಅಮೇರಿಕಾದ ಬಾಹ್ಯಾಕಾಶ ಸಂಸ್ಥೆ ನಾಸಾ ಕಳುಹಿಸಿರುವ 'ಮಾವೆನ್' ಎಂಬ ಹೆಸರಿನ ಉಪಗ್ರಹ ಕೂಡ ಮಂಗಳ ಗ್ರಹವನ್ನು ತಲುಪಿದೆ. ಮಾವೆನ್ ಉಪಗ್ರಹವು ಮಂಗಳ ಗ್ರಹದ ಮೇಲ್ಮೈ ವಾತಾವರಣವನ್ನು ವಿಶೇಷವಾಗಿ ಅಧ್ಯಯನ ನಡೆಸಲು ಸಹಕಾರಿಯಾಗಿದೆ. ಕನಿಷ್ಟ 1 ವರ್ಷ ಜೀವಿತಾವಧಿ ಹೊಂದಿರುವ ಮಾವೆನ್ ಉಪಗ್ರಹವು ಮಂಗಳಗ್ರಹದಿಂದ ಸುಮಾರು 150 ಕಿ.ಮೀ. ದೂರದಲ್ಲಿದ್ದರೆ, 6 ತಿಂಗಳ ಆಯುಷ್ಯ ಹೊಂದಿರುವ ಮಂಗಳಯಾನ್ ಉಪಗ್ರಹವು ಸುಮಾರು 377 ಕಿ.ಮೀ. ದೂರದಲ್ಲಿರುತ್ತದೆ. ಮಂಗಳಯಾನ್ ಮತ್ತು ಮಾವೆನ್ ಎರಡೂ ಉಪಗ್ರಹಗಳು ನೀಡುವ ಮಂಗಳ ಗ್ರಹದ ವಿವರಗಳನ್ನು ಒಗ್ಗೂಡಿಸಿ ಅಧ್ಯಯನ ನಡೆಸಲಾಗುತ್ತದೆ.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**